# ಪ್ರೊ. ಸಂ.ಶಿ.ಭೂಸನೂರಮಠ

---

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

-

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

## ಪ್ರೊ. ಸಂ.ಶಿ.ಭೂಸನೂರಮಠ

## ಅವರ ಬದುಕು ಬರಹ

## ಡಾ. ಮಲ್ಲಿಕಾರ್ಜುನ ಕುಂಬಾರ


ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

PROF.S.S.BUSNOORMATHA Monograph on Prof.S.S. Busnoormath in Kannada Written by: Dr. Mallikarjun Kumbar Published By B.H Mallikarjun, Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2011

Pages : Xiv + 79

Copies:1000

Price : 60

ಮೊದಲ ಮುದ್ರಣ : ೨೦೧೧

ಪುಟಗಳು : xiv + ೭೯

ಪ್ರತಿಗಳು : ೧೦೦೦.

ಬೆಲೆ : ರೂ.೬೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:

ಬಿ.ಎಚ್.ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು-೫೬೦ ೦೦೨

ಮುದ್ರಕರು:

ಮೆ|| ಪ್ರಿಂಟ್ ಪಾರ್ಕ್

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,

ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧

ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ


ಪ್ರಧಾನ ಸಂಪಾದಕರು

ಡಾ. ಸಿದ್ದಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು


---

## ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ "ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ

ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

---

## ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ ಸಂಪಾದಕ ಸಮಿತಿಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ದಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ-ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿಹೋರಾಟಗಳು, ಸಂಘಟನೆಗಳು, ನಾಡು-ನುಡಿ-

ಸಾಹಿತ್ಯ-ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೧. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು-ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ-ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ

## ಲೇಖಕರ ಮಾತು

ಕವಿರಾಜ ಮಾರ್ಗದಲ್ಲಿ ತಿರುಳ್ಗನ್ನಡದ ನಾಡಾದ ಒಳಗಿರುವ ಗದಗ ಜಿಲ್ಲೆಯ ರೋಣ ತಾಲೂಕು ಅನೇಕ ದಿಗ್ಗಜ ಸಾಹಿತಿಗಳನ್ನು ನಾಡಿಗೆ ನೀಡಿದ ಹೆಗ್ಗಳಿಕೆ ಇದೆ. ಕನ್ನಡ ಕುಲಪುರೋಹಿತ ಆಲೂರ ವೆಂಕಟರಾಯರು, ರಂ.ಶ್ರೀ, ಮುಗಳಿ, ಆರ್. ಸಿ. ಹಿರೇಮಠ, ಗಿರಡ್ಡಿ ಗೋವಿಂದರಾಜು, ಸೋಮಶೇಖರ ಇಮ್ರಾಪೂರ ಅವರಂತಹ ಅನೇಕ ಅಕ್ಷರಲೋಕದ ನಕ್ಷತ್ರಗಳಲ್ಲಿ ಪ್ರೊ.ಸಂ.ಶಿ. ಭೂಸನೂರಮಠರು ದೊಡ್ಡದಾದ ಮಿನುಗು ತಾರೆ. ಅವರು ಸಾಧಿಸಿದ ಸಾಧನೆ. ಹಿರಿಮೆ; ಗರಿಮೆಗಳು ಮೇರು ಸದೃಶ್ಯವಾದುದು. ಈ ತಾಲೂಕಿನ ಇತಿಹಾಸವುಳ್ಳ ಇವರ ಹುಟ್ಟೂರು ನಿಡಗುಂದಿಯು, ಗಜೇಂದ್ರಗಡ - ಗದಗ ರಸ್ತೆಗೆ ಹೊಂದಿರುವ ಕುಗ್ರಾಮ, ಇಂಥಹ ಕುಗ್ರಾಮದಲ್ಲಿ ಅರಳಿದ ಭವ್ಯಮಾನವ ಪ್ರೊ, ಭೂಸನೂರಮಠರ ಬಗ್ಗೆ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು' ಮಾಲಿಕೆ ಅಡಿಯಲ್ಲಿ ಅವರನ್ನು ಪರಿಚಯಿಸುತ್ತಿರುವುದು ತುಂಬಾ ಶ್ಲಾಘನೀಯವಾದುದು.

ಸಂಸ್ಕೃತ - ಸಂಸ್ಕೃತಿಗಳ ಸಂಗಮವಾದ ಪ್ರೊ.ಸಂ.ಶಿ. ಭೂಸನೂರಮಠರವರು ಎಲೆಯ ಮರೆಯ ಫಲದಂತೆ ಇದ್ದವರು. ಅಷ್ಟು ಎತ್ತರಕ್ಕೆ ಏರಿದ್ದರೂ ಬಾಗಿದವರೆ. ಹೊರತು ಬಿಗಿದವರಲ್ಲ. ನಾನು ಅವರನ್ನು ತೀರಾ ಹತ್ತಿರದಿಂದ ಕಂಡವನು. ಈ ಹಿಂದೆ ಗದುಗಿನ ಕನ್ನಡ ಜಗದ್ಗುರುಗಳೆಂದು ಹೆಸರಾದ ಡಾ. ತೋಂಟದ ಸಿದ್ಧಲಿಂಗ ಶ್ರೀಗಳು ತಮ್ಮ ಮಠದಿಂದ ಅವರ ಅಭಿನಂದನ ಗ್ರಂಥ 'ಗೌರವ'ವನ್ನು ಹೊರತರುತ್ತಿದ್ದರು. ಅದರ ಸಂಪಾದಕತ್ವವನ್ನು ನನ್ನ

ಗುರುಗಳಾದ ಡಾ.ಬಿ.ವಿ.ಶಿರೂರವರು ವಹಿಸಿಕೊಂಡಿದ್ದರು. ಸಂಪಾದಕರಿಗೆ ಚನ್ನಬಸವಣ್ಣನವರ 'ಕರುಣಹಸುಗೆ' ಕೃತಿಯು ಬೇಕಾಗಿತ್ತು. ಅದು ಧಾರವಾಡದಲ್ಲಿ ನೆಲೆಸಿದ್ದ ಪ್ರೊ.ಸಂ.ಶಿ.ಭೂಸನೂರಮಠರವರಲ್ಲಿತ್ತು. ಅದನ್ನು ತರುವ ಕೈಂಕರ್ಯವನ್ನು ನನ್ನ ಗುರುಗಳು ನನಗೆ ವಹಿಸಿದ್ದರು. ಮೊದಲ ಸಲ ಅವರ 'ಪರಂಜ್ಯೋತಿ'ಗೆ ಹೋದಾಗ ತುಂಬಾ ಆದರದಿಂದ ಕಂಡು ಉಪಚರಿಸಿ, ನಾನು ರೋಣ ತಾಲೂಕಿನ ನಿಡಗುಂದಿ ಪಕ್ಕದ ಊರಿನವನಾದ ಕಾರಣ ಅಭಿಮಾನದಿಂದ ನನ್ನ ಯೋಗಕ್ಷೇಮವನ್ನು ಕೇಳಿದರು. ಅವರ ಸಂಪರ್ಕ ಪರುಷ ಸ್ಪರ್ಶದಂತಿತ್ತು ನಂತರ ಅನೇಕ ಸಲ ಅವರನ್ನು ಕಾಣುವ ಮಾತನಾಡುವ ಸದವಕಾಶ ಇದರಿಂದ ಸಿಕ್ಕಿತು. ಅವರ ಪ್ರತಿಭೆ ಅದ್ಭುತವಾದುದು. ಆ ಒಡನಾಟವು ಮುಂದೊಂದು ದಿನ ಅವರ ಬದುಕುಬರಹದ ಬಗ್ಗೆ ಬರೆಯುತ್ತೇನೆಂಬ ಕಲ್ಪನೆಯೇ ಇರಲಿಲ್ಲ. ಯೋಗಾಯೋಗವೆಂದರೆ ಇದೇ ಇರಬೇಕು! ಇವರು ರೋಣ ತಾಲೂಕಿನ ನನ್ನೂರಿ(ರಾಜೂರ)ನಿಂದ ಅತಿ ಸಮೀಪದಲ್ಲಿರುವ ನಿಡಗುಂದಿಯವರೆಂಬ ಅಭಿಮಾನ, ಹೆಮ್ಮೆ ನನಗಿದೆ.

ಈ ಕೃತಿ ರಚನೆಯಲ್ಲಿ ನನ್ನ ಗುರುಗಳಾದ ಡಾ.ಬಿ.ವಿ.ಶಿರೂರವರು ಬಹಳಷ್ಟು ಮಾರ್ಗದರ್ಶನ ಮಾಡಿದ್ದಾರೆ. ಅವರ ಬದುಕು ಬರಹವನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸುವ ಕಿರುಹೊತ್ತಿಗೆಯನ್ನು ಬರೆಯಲು ಅವಕಾಶ ಮಾಡಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಆಭಾರಿಯಾಗಿದ್ದೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಸಿದ್ಧಲಿಂಗಯ್ಯನವರಿಗೆ, ನಿರ್ದೇಶಕ ಮಂಡಳಿ ಸದಸ್ಯರಿಗೆ, ಹಿತೈಷಿಗಳಾದ ಪ್ರೊ.ಸಿ.ವೈ.ಕೆರಿಮನಿಯವರಿಗೆ, ನನ್ನ ವಿದ್ಯಾಗುರುಗಳು, ಮಾರ್ಗದರ್ಶಕರಾದ ಡಾ.ಬಿ.ವಿ.ಶಿರೂರವರಿಗೆ, ಮತ್ತು ಡಾ.ವೀರಣ್ಣ ರಾಜೂರವರಿಗೆ, ಪ್ರೊ.ಸಂ.ಶಿ.ಭೂಸನೂರಮಠರವರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸಿಕೊಟ್ಟ ಅವರ ಚಿರಂಜೀವಿ ಡಾ. ಸುಭಾಸ ಭೂಸನೂರಮಠ ಮತ್ತು ಅವರ ಕುಟುಂಬದವರಿಗೆ, ಇದನ್ನು ಬರೆಯುವಲ್ಲಿ ಹಲವಾರು ವಿದ್ವಾಂಸರ ಗ್ರಂಥಗಳು ನೆರವಾಗಿವೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

ರಾಜೂರ **ಡಾ. ಮಲ್ಲಿಕಾರ್ಜುನ ಕುಂಬಾರ**

(ತಾ - ರೋಣ ಜಿ, ಗದಗ)

# ಪರಿವಿಡಿ

೧. ಪ್ರೊ.ಸಂ.ಶಿ. ಭೂಸನೂರಮಠ

೨. ಬಾಲ್ಯ

೩. ವಿದ್ಯಾಭ್ಯಾಸ

೪. ಬಾಲ್ಯದಲ್ಲಿ ಲೆಕ್ಕ ಬಿಡಿಸುವ ಆಸಕ್ತಿ

೫. ಗದುಗಿನಲ್ಲಿ ಶಿಕ್ಷಣ

೬. ಸಂಸ್ಕೃತ ಮತ್ತು ಸಂಗೀತ ಅಧ್ಯಯನ

7.ಪ್ರೌಢ ಶಿಕ್ಷಣ

೮. ಉನ್ನತ ಶಿಕ್ಷಣ

೯. ಅಧ್ಯಾಪಕರಾಗಿ

೧೦. ಆಸಕ್ತಿ - ಸ್ವಭಾವ

೧೧. ವಿವಿಧ ಕ್ಷೇತ್ರಗಳಲ್ಲಿ ಭೂಸನೂರಮಠರ ಸಾಧನೆ

೧೨. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆ

೧೩.ವಿದ್ಯಾರ್ಥಿಗಳೊಂದಿಗಿನ ಸಂಬಂಧ

೧೪. ಶ್ರೇಷ್ಠ ಮಾರ್ಗದರ್ಶಕ

೧೫. ಸ್ವಾಮಿಗಳೊಂದಿಗಿನ ಸಂಬಂಧ

೧೬. ಸಾಹಿತ್ಯ ಸೇವೆ ಮತ್ತು ಸಂಪಾದನೆ

೧೭. ಪ್ರೊ.ಭೂಸನೂರಮಠರ ಅಪೂರ್ವ ಕೃತಿ “ಭವ್ಯಮಾನವ”

೧೮. ಪ್ರೊ.ಭೂಸನೂರಮಠರ ಘನ ವ್ಯಕ್ತಿತ್ವ

೧೯. ಹಿನ್ನೋಟ

೨೦. ಪ್ರೊ. ಭೂಸನೂರಮಠರ ಬದುಕು - ಬರಹಗಳ ಸಂಕ್ಷಿಪ್ತ ಪರಿಚಯ

೨೧. ಆಕರ ಗ್ರಂಥಗಳು

೨೨. ಅನುಬಂಧ - ೧

೨೩. ಅನುಬಂಧ - ೨

(ಛಾಯಾ ಚಿತ್ರಗಳು)

---

## ಪ್ರೊ. ಸಂ. ಶಿ. ಭೂಸನೂರಮಠ

ಇಪ್ಪತ್ತನೆಯ ಶತಮಾನದ ಮೊದಲ ದಶಕಗಳು ಕನ್ನಡಿಗರ ಬದುಕಿನ ಹೊಸ ಭರವಸೆಯ ಸಂದರ್ಭದಲ್ಲಿಯೇ ಕನ್ನಡ ನಾಡಿನ ಬಯಲ ಸೀಮೆಯ ಬಾಂದಳದಲ್ಲಿ ಬೆಳ್ಳಿ ಚುಕ್ಕಿಯಂತೆ ಮೂಡಿ ಬಂದವರು ಸಂ.ಶಿ. ಭೂಸನೂರಮಠರವರು, ಪೂರ್ವದಲ್ಲಿ ಹಳತು ಹೊಸತರ ಅರ್ಥಪೂರ್ಣ ಸಂಯೋಜನೆ ಮಾಡಿರುವ ಹೊಸಗನ್ನಡ ಸಾಹಿತ್ಯದ ನವೋದಯದೊಂದಿಗೆ ಮೂಡಿ ಬಂದ ಇವರ ವ್ಯಕ್ತಿತ್ವವೂ ಕೂಡಾ ಹಳತು ಹೊಸತರ ಸಮನ್ವಯದ ಸತ್ಯಕ್ಕೆ ಪ್ರತ್ಯಕ್ಷವಾಗಿರುವದು ಇಂದು ವಿಶಿಷ್ಟ ಹಾಗೂ ಮಹತ್ವದ ಸಂಗತಿಯಾಗಿದೆ.

ಅಂದಿನ ಧಾರವಾಡ ಜಿಲ್ಲೆಯ, ಇಂದಿನ ಗದಗಜಿಲ್ಲೆಯ ರೋಣ ತಾಲೂಕಿನ ಪುಟ್ಟಹಳ್ಳಿಯಾದ ನಿಡಗುಂದಿ ಬಯಲು ಸೀಮೆಯ ಪ್ರದೇಶ ಅಲ್ಲಿಯ ಸಹಜೀವನ, ಸಹಬಾಳ್ವೆ, ನಮ್ಮ ಸಂಸ್ಕೃತಿಗೆ ಸಾಕ್ಷಿಗಳಾಗಿದ್ದವು. ಹಬ್ಬ-ಹರಿದಿನಗಳಲ್ಲಿ ಮೋಜು, ಉತ್ಸಾಹ, ಸುಖ, ಸಂಭ್ರಮಗಳನ್ನು ಮೇಳೆಸಿಕೊಂಡಿದ್ದ ಹಳ್ಳಿ ಅದಾಗಿದ್ದಿತ್ತು. ಅಲ್ಲಿಯ ಜನರೆಲ್ಲ ಹೊಂದಿಕೊಂಡು ಜೀವನ ಸಾಗಿಸುತ್ತಿದ್ದರು. ಕುಲ, ಜಾತಿ, ಪಕ್ಷ ಪಂಗಡ ಯಾವುದನ್ನು ಗಣನೆಗೆ ತೆಗೆದುಕೊಳ್ಳದೇ ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವ, ಸಹಾಯ, ಸಹಕಾರ ಬಾಳುವ ಕಲೆ ಅವರದಾಗಿತ್ತು. ಸತ್ಯ ಪ್ರೇಮ ಅದರ ಗೌರವ, ಉಪಕಾರ ಕಲ್ಯಾಣ ಸಹಕಾರದಿಂದ ಭಾವಗಳು ಊರ ವಾತಾವರಣದಲ್ಲಿ ಜೀವಂತ ಉಸಿರಾಗಿದ್ದವು. ಆ ಕಾಲದ ಗುರು - ಹಿರಿಯರು, ತಂದೆ - ತಾಯಿ, ಅಣ್ಣ - ತಮ್ಮ, ಬಂಧು - ಬಾಂಧವರು, ನೆರೆ - ಹೊರೆಯವರು ಮತ್ತು ಪರವೂರವರು ಇವರಲ್ಲಿರುವ ಸಂಬಂಧವನ್ನು ಒಳಕ್ಕಿಳಿದು ನೋಡಿದರೆ ನೀತಿ, ಶೀಲ, ಚಾರಿತ್ರ್ಯ ಸದ್ಭಾವನೆ, ಸದ್ಬುದ್ಧಿಗಳು ಅಲ್ಲಿ ನೆಲೆಗೊಂಡಿದ್ದವು. ನಮ್ಮೂರ ನೆಲದ ಮೇಲೆ ಅವು ಸಂಖ್ಯೆಯಲ್ಲಿ ಕಡಿಮೆಯಿರಬಹುದು. ಆದರೆ ಗಟ್ಟಿಹಾಲು, ಗಟ್ಟಿ ಮಜ್ಜಿಗೆ ಇಂದಿನ ಗವಳಿಗರ ಹಾಲು ಮೊಸರಿನಂತೆ ಇರಲಿಲ್ಲ ಅಂದಿನ ದಿನಗಳನ್ನು ಕಂಡ ನನಗೆ ಇಂದಿನ ರೀತಿ - ನೀತಿಯನ್ನು ನೋಡಿದರೆ ತಲೆ ತಿರುಗಿ ಬೀಳುತ್ತದೆ ಎಂದು ಸ್ವತಃ ಭೂಸನೂರಮಠರೆ ಅಭಿಪ್ರಾಯ ಪಡುತ್ತಾರೆ. ಇದರರ್ಥ ಅಂದಿನ ಹಳ್ಳಿಗಳಲ್ಲಿ ವೈರ, ದ್ವೇಷ, ಮತ್ಸರ, ಅಹಂಕಾರದ ಅಟ್ಟಹಾಸ ಇರಲಿಲ್ಲವೆಂದಲ್ಲ. ಜಮೀನ್ದಾರಿಕೆ, ಗೌಡಿಕೆ, ಕುಲಕರ್ಣಿಕೆಗಳ ದರ್ಬಾರು ಹಳ್ಳಿಗಳಲ್ಲಿ ತಾಂಡವವಾಡುತ್ತಿದ್ದರೂ ಜನಜೀವನ ಅಸ್ತವ್ಯಸ್ತಗೊಳ್ಳುತ್ತಿರಲಿಲ್ಲ ಎಲ್ಲೋ ಕೆಲವೆಡೆ ಧರ್ಮದ ದುರಭಿಮಾನ ಕಂಡರೂ ಅದು ಇಂದಿನ ಕಾಲದಲ್ಲಿ ನಡೆಯುವ ಹೊಡೆದಾಟ ಬಡಿದಾಟಗಳಿಗೆ ಕಾರಣವಾಗುವ ಹಾಗೆ ಆಗುತ್ತಿರಲಿಲ್ಲ. ಅಂದಿನ ಜನ ತಮಗೆ ಬೇಕಾದ ಅನುಕೂಲತೆಗಳನ್ನು ತಾವೇ - ಒದಗಿಸಿಕೊಳ್ಳುತ್ತಿದ್ದರು. ಅವರ ಬದುಕು ನೆಮ್ಮದಿಯ ಬದುಕಾಗಿದ್ದಿತು.

ಆ ಕಾಲದಲ್ಲಿ ಶಿಕ್ಷಣ, ಸಾಹಿತ್ಯದ ಬೆಳವಣಿಗೆ ಅಷ್ಟು ಆಗಿರಲಿಲ್ಲ. ಅಲ್ಲಲ್ಲಿ ಧರ್ಮ ಗುರುಗಳು ಮುಖಾಂತರ ಗುಡಿಗುಂಡಾರಗಳಲ್ಲಿ ವಿದ್ಯೆಯು ಸಾಕಷ್ಟು ಪ್ರಸಾರವಾಗುತ್ತಿತ್ತು. ಶ್ರಾವಣ ಮಾಸದ ಸಂದರ್ಭದಲ್ಲಿ ಊರ ಪ್ರಮುಖ ದೇವಸ್ಥಾನದಲ್ಲಿ ದೇವಿ ಪುರಾಣ, ಬಸವಪುರಾಣ ಮುಂತಾದವುಗಳನ್ನು ಹೇಳಿಸಿ ಜನರಲ್ಲಿ ಧಾರ್ಮಿಕ ಭಾವನೆಯನ್ನು

ತುಂಬುವ ಸಾಹಸವೂ ಅಂದು ನಡೆಯುತ್ತಿತ್ತು. ಜಾತ್ರೆ ಉತ್ಸವಗಳನ್ನು ಸಂಭ್ರಮದಿಂದ ಆಚರಿಸಿ ಅವರು ತಮ್ಮ ನೋವನ್ನು ಮರೆತು ಆನಂದಪಡುತಿದ್ದರು.

## ಬಾಲ್ಯ

ನಿಡಗುಂದಿಯ ಸುಂದರವಾದ ಪರಿಸರದಲ್ಲಿ ಭೂಸನೂರಮಠ ಅವರು 07-11-1910 ರಂದು ಜನ್ಮ ತಾಳಿದರು. ತಂದೆ ಶಿವಮೂರ್ತಯ್ಯನವರು, ತಾಯಿ ರಾಚಮ್ಮ, ಮನೆದೇವರು ಕೂಡಲಸಂಗಮೇಶ್ವರ ಆದ್ದರಿಂದ ಮಗನಿಗೆ ಮನೆದೇವರ ಹೆಸರು ಸಂಗಯ್ಯನೆಂದು ನಾಮಕರಣ ಮಾಡಿದರು. ತಮ್ಮ ಜನ್ಮ ದಿನಾಂಕವನ್ನು ಕುರಿತು ಭೂಸನೂರಮಠ ಅವರು "ಮ್ಯಾಟ್ರಿಕ್ ಪರೀಕ್ಷೆಯಲ್ಲಿ (ಎಸ್.ಎಸ್.ಎಲ್.ಸಿ) ದೊರೆವಂತೆ ನಾನು ಹುಟ್ಟಿದ ಮಿತಿ ದಿನಾಂಕ : 07-11-1910 ಆದರೆ ಈ ಜನ್ಮ ಮಿತಿಯಲ್ಲಿ ಒಂದು ಆಚಾತುರ್ಯ, ನನಗೆ ನಾಲ್ಕು ತುಂಬಿದ ಕೆಲ ತಿಂಗಳಲ್ಲಿ ನನ್ನನ್ನು ಬಿನ್ ಇಯತ್ತೆಗೆ ಹೆಸರು ಸೇರಿಸಲು ಅವಸರ ಮಾಡಿದ ನಮ್ಮ ತಂದೆಯವರು ಆ ಮಿತಿಗೆ ನನ್ನ ವಯಸ್ಸನ್ನು ಹೆಚ್ಚು ತೋರಿಸಿದೆವೆಂದು ಹೇಳುತ್ತಿದ್ದ ನೆನಪು ನನಗಿದೆ. ಒಟ್ಟು ನಮ್ಮ ಮನೆತನದಲ್ಲಿ ಹುಟ್ಟಿದ ಅಥವಾ ತಾರೀಖು, ಜನ್ಮ ಕುಂಡಲಿಯನ್ನು ಬರೆದಿಟ್ಟು ಅಥವಾ ಬರೆಸಿಟ್ಟುಕೊಳ್ಳುವ ಐತಿಹಾಸಿಕ ಪ್ರಜ್ಞೆ ಆಗ ಇರಲಿಲ್ಲ. ಸಾಮಾನ್ಯವಾಗಿ ಅದು ಇಂದಿಗೂ ನನ್ನಲ್ಲಿಯೂ ಇಲ್ಲ. ಇತಿಹಾಸದ ಸಂಪತ್ತು ನಮ್ಮ ಮನೆತನಕ್ಕಿಲ್ಲ ಯಾರೇನು ಹೇಳಲಿ ಆ ಮಹಾಸಂಪತ್ತಿನ ಮಹತ್ವವೇ ನನಗೆ ಗೊತ್ತಿಲ್ಲ. ಇಷ್ಟೇ ಅಲ್ಲ ಕಾಲ ವೇಳೆಯ ತಿರಸ್ಕಾರವಿಲ್ಲದಿದ್ದರೂ ಪುರಸ್ಕಾರವಿಲ್ಲ. ಅಂತೂ ನಮ್ಮ ತಂದೆಯವರು ಸುಮಾರು ಒಂದು ಒಂದುವರೆ ವರ್ಷ ನನ್ನನ್ನು ಹಿರಿಯನನ್ನಾಗಿಸಿದರು" ಎಂದು ಹೇಳುತ್ತಾರೆ.

ಭೂಸನೂರಮಠ ಅವರ ತಂದೆಯವರಿಗೆ ಮೂರು ಜನ ತಮ್ಮಂದಿರು 32-40 ಎಕರೆ ಹೊಲ ಇದ್ದರೂ ಒಣ ಬೇಸಾಯದಿಂದ ಸರಿಯಾಗಿ ಬೆಳೆ ಬರುತ್ತಿರಲಿಲ್ಲ. ಇಂತಹ ಬಡತನದ ಸ್ಥಿತಿಯಲ್ಲಿಯೇ ಶಿವಮೂರ್ತಯ್ಯನವರು ಬೆಳೆದರು. ಒಂದು ಕಿರಾಣಿ ಅಂಗಡಿಯನ್ನಿಟ್ಟುಕೊಂಡು ಸಂಸಾರದ ರಥವನ್ನು ಎಳೆಯುತ್ತಿದ್ದರು. ಅವರು ಹೆಚ್ಚು ಶಿಕ್ಷಣ ಪಡೆದವರಲ್ಲಿ ಬಹಳ ಸಂಭಾವಿತರು ಮತ್ತು ಬೋಳೇಸ್ವಭಾವದವರು. ಇವರ ಈ ಬೋಳೇ ಸ್ವಭಾವವನ್ನು ದುರುಪಯೋಗ ಮಾಡಿಕೊಂಡು ಅನೇಕ ವ್ಯಾಪಾರಸ್ಥರು ಇವರನ್ನು ಮೋಸಗೊಳಿಸುತ್ತಿದ್ದರು. ಆದರೂ ಅವರು ಔದಾರ್ಯದ ಗಣಿ ಆಗಿದ್ದರು. ಹೀಗಾಗಿ ಸಮಾಜದಲ್ಲಿ ಇವರಿಗೆ ಉನ್ನತ ಗೌರವದ ಸ್ಥಾನವಿತ್ತು. ತಾವು ಹೆಚ್ಚಿನ ಶಿಕ್ಷಣ ಪಡೆಯದಿದ್ದರೂ ತಮ್ಮ ಮಗ ಉನ್ನತ ವ್ಯಾಸಂಗ ಮಾಡಲಿ ಎಂಬ ಬಯಕೆ ಅವರದು. ಅವರಿಗೆ ಇಬ್ಬರು ಹೆಂಡಂದಿರು, ಭೂಸನೂರಮಠ ಅವರ ತಾಯಿ ರಾಚಮ್ಮ ಎರಡನೇಯವರು. ಇವರು ಮನೆಗೆ ಕಾಲಿಟ್ಟಾಗಿನಿಂದ ಮನೆಯಲ್ಲಿ ಧಾರ್ಮಿಕ ಚಟುವಟಿಕೆಗಳೊಂದಿಗೆ ಮನೆತನದ ಆರ್ಥಿಕ ಸ್ಥಿತಿ, ಗೌರವ ಆದರಾಭಿಮಾನಗಳು ಹೆಚ್ಚಳಗೊಂಡವು ತಾಯಿಯದು ಒಂದು ರೀತಿಯ ಗಾಂಭೀರ್ಯದ ಸ್ವಭಾವ ಇವರು ಹೊಲದಲ್ಲಿ ಮನೆಯಲ್ಲಿ ಎರಡೂ ಕಡೆಗೆ ದುಡಿಯುತ್ತಿದ್ದರು. ಬೆಳಗಿನ ನಾಲ್ಕು ಗಂಟೆಗೆ ಎದ್ದು ನಿತ್ಯದ ಕೆಲಸದಲ್ಲಿ ತೊಡಗುತ್ತಿದ್ದರು. ಬಡತನದ ಮನೆಯಿಂದ ಬಂದವರಾಗಿದ್ದರಿಂದ, ಇವರಿಗೆ ಶ್ರಮ, ಸಹಿಷ್ಣತೆ, ಧೈರ್ಯಮನೋಭಾವ ಆತ್ಮ ವಿಶ್ವಾಸ, ತಾನೇ

ತಾನಾಗಿ ಬೆಳೆದು ಬಂದಿದ್ದವು. ಇದರ ಜೊತೆಯಲ್ಲಿಯೇ ಗುರು - ಹಿರಿಯರಲ್ಲಿ ಭಕ್ತಿ ಸಹಜಸ್ವಭಾವ, ಪ್ರೇಮ, ವಾತ್ಸಲ್ಯ, ವಿನಯ ಮುಂತಾದ ಸದ್ಗುಣಗಳು ಅವರಲ್ಲಿ ಮನೆ ಮಾಡಿದ್ದವು. ನಾಲ್ಕು ಮುಕ್ಕಾಲು ಅಡಿ ಎತ್ತರದ ದಷ್ಟ ಪುಷ್ಟತಾಯಿ ರಾಚಮ್ಮನವರ ಬುದ್ಧಿ ಕುಶಲವೆಂದರೆ ಏನೂ ಇರಿಯದ ಇವರ ಆಜನ್ಮ ತೀಕ್ಷ್ಣ ಕುಶಾಗ್ರತೇಜವನ್ನು ಕಲಿಯದ ಅಥವಾ ಕಲಿತ ಹೆಣ್ಣು ಮಕ್ಕಳಾರಲ್ಲಿಯೂ ಇಲ್ಲಿಯವರೆಗೆ ಯಾರು ಇರಲಿಲ್ಲ. ತಾಯಿಯ ಬಗೆಗೆ ಅವರಿಗಿರುವ ಅಭಿಮಾನವೂ ಅವರ ಕುಶಾಗ್ರಮತಿಗೆ ಬಣ್ಣ ಕೊಟ್ಟು ದೊಡ್ಡದನ್ನಾಗಿ ಮಾಡಿರಬಹುದು. ಒಕ್ಕಲುತನದ ಅಂಗಡಿಯ ವ್ಯಾಪಾರ ಕೊಡುಕೊಳ್ಳುವ ವ್ಯವಹಾರದಲ್ಲಿ ಅವರು ಮಾತಾಡುವ ಜಾಣೆ ತೊಡರಾಗದ ವ್ಯವಹಾರವನ್ನು ಸಮರ್ಥ, ಸಮರ್ಪಕ ಯೋಗ್ಯವಾಗುವಂತೆ ಬಗೆಹರಿಸುವ ಧೈರ್ಯ, ವಿಶ್ವಾಸ, ಪ್ರೇಮ ಪ್ರತಿನಿತ್ಯದ ದಿನಚರಿಯಾಗಿದ್ದ ಇಂಥ ಹಿರಿತನದಲ್ಲಿ ಅವರು ತೋರುತ್ತಿದ್ದ ಸಮಯಾವಧಾನಗಳು ಅವರ ಬುದ್ಧಿಯ ತೇಜವನ್ನು ಸಹಜವಾಗಿ ಪ್ರಕಟಗೊಳಿಸುತ್ತಿದ್ದವು. ಅವರ ವ್ಯವಹಾರ ಕೌಶಲಬುದ್ಧಿಯ ತೀಕ್ಷ್ಣತೆಯನ್ನು ಮೆಚ್ಚಿಕೊಂಡ ಅಂದಾನಗೌಡರು ತಾಯಿಯ ತವರೂರು ಇಟಗಿ ಗ್ರಾಮದ ಸಮೀಪದ ಸಂಬಂಧಿಯಾಗಿದ್ದ ಇವರ ಮಾವನವರು ಈನಾಡಿನ ಮಹಾ ವ್ಯಕ್ತಿಯಾಗಿದ್ದರು. ದೇಶಗತಿಯಿದ್ದರೆ ನೀನೊಬ್ಬ ಮಹಾದೇಸಾಯತಿ ಆಗುತ್ತಿದ್ದೆ ಎಂದು ಅವರ ತಂದೆಯವರು ಆಗಾಗ ಆನಂದದಿಂದ ರಾಚಮ್ಮನ ಬಗ್ಗೆ ಉದ್ಗಾರ ತೆಗೆಯುತ್ತಿದ್ದರು ಎಂದು ಭೂಸನೂರಮಠರು ತಮ್ಮ ತಾಯಿಯ ಬಗ್ಗೆ ಉಲ್ಲೇಖಿಸುತ್ತಾರೆ.

ನೆರೆಹೊರೆಯವರೊಡನೆ ಕೂಡಿಬಾಳುವ ಸ್ವಭಾವ ಆ ತಾಯಿಯದು ಅತಿಥಿಗಳಲ್ಲಿ ಗುರು ಹಿರಿಯರಲ್ಲಿ ಅತ್ಯಂತ ಗೌರವಭಾವ, ವಿಶೇಷವಾಗಿ ಮಠದ ಸ್ವಾಮಿಗಳಲ್ಲಿ ನಿರರ್ಗಳವಾದ ಪ್ರೇಮ, ಪುರಾಣ, ಪ್ರವಚನ ಕೇಳುವಲ್ಲಿ ತುಂಬಾ ಆಸಕ್ತಿಯನ್ನು ತೋರುತ್ತಿದ್ದರು. ಇಂಥ ಸದ್ಗುಣ ಸಂಪನ್ನ ತಂದೆ ತಾಯಿಗಳಿಗೆ ಒಟ್ಟು ನಾಲ್ಕು ಜನ ಮಕ್ಕಳು ಎರಡು ಗಂಡು, ಎರಡು ಹೆಣ್ಣು, ತಮ್ಮ ಅಣ್ಣನ ಬಗೆಗಾಗಲಿ, ಅಕ್ಕಂದಿರ ಬಗೆಗಾಗಲಿ ಹೆಚ್ಚಿನ ವಿಷಯ ಭೂಸನೂರಮಠ ಅವರಿಗೆ ಗೊತ್ತಿರಲಿಲ್ಲ. ಅವರಲ್ಲಿ ಕಿರಿಯ ಅಕ್ಕ ಅಂದಾನವ್ವನನ್ನು ಇವರ ಸೋದರ ಮಾವನಿಗೆ ಮದುವೆ ಮಾಡಿಕೊಟ್ಟಿದ್ದು ಮಾತ್ರ ಇವರಿಗೆ ಗೊತ್ತು ಹೀಗಾಗಿ ತಂದೆತಾಯಿಗಳಿಗೆ ನಾಲ್ಕುಜನ ಮಕ್ಕಳಿದ್ದರೂ ಇವರೊಬ್ಬರೇ ಮನೆಯಲ್ಲಿದ್ದು ಮುದ್ದಿನಿಂದಲೇ ಬೆಳೆದರು. ಬಡವರೆಂಬ ಅಳುಕು ಇವರ ಮನದಲ್ಲಿ ಎಂದೂ ಸುಳಿಯದಂತೆ ಇವರನ್ನು ಬೆಳೆಸಿದರು. ತಿನ್ನಲಿಕ್ಕೆ ಉಣ್ಣಲಿಕ್ಕೆ ಯಾವುದಕ್ಕೂ ಕೊರತೆ ಇರಲಿಲ್ಲ ಮನೆಗೆ ಬಂದ ಅತಿಥಿಗಳಿಗೆ ಹೆಸರುಂಡೆ, ತುಪ್ಪ ತಿನ್ನಿಸುವ ತಂದೆ - ತಾಯಿಗಳು ಮಗನಿಗೆ ಅದರ ರುಚಿ ತೋರಿಸದೆ ಇರಲಿಲ್ಲ. ಮನೆಯಲ್ಲಿ ಸದಾಕಾಲ ಹಾಲು, ಮೊಸರು, ತುಪ್ಪ ಸಾಕಷ್ಟು ಇರುತ್ತಿತ್ತು ಅಕ್ಕ ಪಕ್ಕದವರಿಗೂ ಕೊಡುವಷ್ಟು ಮಜ್ಜಿಗೆ ಸದಾ ಇವರ ಮನೆಯಲ್ಲಿರುತ್ತಿತ್ತು ತುಪ್ಪ ತಿಂದರೆ ಬಹಳ ಜಾಣರಾಗುತ್ತಾರೆಂದು ನಂಬಿದ್ದ ತಂದೆ ತಾಯಿಗಳು ಸಂಗಯ್ಯನವರಿಗೆ ಪ್ರತಿದಿನ ಸಾಕಷ್ಟು ತುಪ್ಪವನ್ನು ತಿನ್ನಿಸುತ್ತಿದ್ದರು. ಅನ್ನದ ಮಹಿಮೆಯನ್ನು ತಿಳಿದಿದ್ದ ತಾಯಿ ರಾಚಮ್ಮ ಅದು ಪ್ರಸಾದವೆಂದೆ ಭಾವಿಸಿದ್ದಳು. ಇದೇ ಸಂಸ್ಕಾರ ಮಗನಲ್ಲಿಯೂ ಬೆಳೆಯಿತು.

ಇವರ ತಂದೆ - ತಾಯಿಯರಿಗೆ ದೇವರು, ಧರ್ಮದಲ್ಲಿ ಅಚಲವಾದ ನಂಬಿಕೆ ಪುಣ್ಯಕಥೆ ಪ್ರವಚನ, ನೀತಿಯ ಮಾತುಗಳಲ್ಲಿ ವಿಶೇಷವಾದ ಆಸಕ್ತಿ ಮಗನಿಗೆ ಅವುಗಳನ್ನು ಹೇಳುವ ಪರಿಪಾಠವಿತ್ತು ಅಲ್ಲದೇ ಶ್ರಾವಣಮಾಸದಲ್ಲಿ ನಡೆಯುತ್ತಿದ್ದ ಪುರಾಣ ಪ್ರವಚನ ಕೇಳಲು ಭೂಸನೂರಮಠ ಅವರಿಗೂ ಅವಕಾಶವಿತ್ತು. ಹೀಗಾಗಿ ಇವರು ಬಸವಪುರಾಣ, ಶರಣಬಸವೇಶ್ವರ ಪುರಾಣ, ದೇವಿಪುರಾಣ, ಭಜನೆ ಕೀರ್ತನೆಗಳನ್ನು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಆಲಿಸುತ್ತಿದ್ದರು. ಊರ ಅಕ್ಕ ಪಕ್ಕದ ದೇವರ ಜಾತ್ರೆಗೆ ಹೋಗಿ ಬರುವ ಪರಿಪಾಠವೂ ಅಂದಿನ ಜನರಲ್ಲಿದ್ದಿತು. ಶಿಕ್ಷಣ ಸಾಹಿತ್ಯದ ಗಂಧ ಹಳ್ಳಿಯಲ್ಲಿ ಸಾಕಷ್ಟಿರದಿದ್ದರೂ ಈ ರೀತಿಯ ಧಾರ್ಮಿಕ ಆಚರಣೆಗಳ ಮೂಲಕ ಅವುಗಳನ್ನು ಕೇಳಿ ತಿಳಿದುಕೊಳ್ಳುವಲ್ಲಿ ಅವರಿಗೆ ಆಸಕ್ತಿ ಇತ್ತು ಈ ಎಲ್ಲ ಉತ್ಸವಗಳಲ್ಲಿ ಭೂಸನೂರಮಠ ಅವರು ಉತ್ಸಾಹದಿಂದ ಭಾಗವಹಿಸುತ್ತಿದ್ದರು.

ಇವುಗಳ ಜೊತೆಯಲ್ಲಿಯೇ ಹಳ್ಳಿಯ ಆಟಗಳಲ್ಲಿಯೂ ಸಂಗಯ್ಯನವರೂ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಕುಳ್ಳರಾಗಿದ್ದರೂ ಆಟ - ಓಟ, ಜಿಗಿಯುವುದು ಗಿಡ ಹತ್ತುವ ಆಟದಲ್ಲಿ ಎಂದೂ ಅವರು ಹಿಂದೆ ಬೀಳುತ್ತಿರಲಿಲ್ಲ, ಖೋ , ಖೋ, ಕಬಡ್ಡಿ, ಕುಂಟಾಟ, ಕಾಲುಚಂಡು, ಗಿಡಮಂಗ್ಯಾ, ಬುಗರಿ, ಗಜಗ, ಚಿಣಿಪಣಿ ಮುಂತಾದ ಹಲವು ಹತ್ತು ಪ್ರಕಾರದ ಆಟಗಳನ್ನು ಓಣಿಯ ಹುಡಗರೊಂದಿಗೆ ಭಾಗವಹಿಸಿ ಆನಂದಪಡುತ್ತಿದ್ದರು. ಇದರ ಜೊತೆಗೆ ಕರಡಿಯಾಟ, ವೇಷಗಾರರು, ಡೊಂಬರಾಟ, ಸಣ್ಣಾಟ ದೊಡ್ಡಾಟಗಳನ್ನು ನೋಡುವ ಅವಕಾಶವೂ ಆಗಾಗ ಊರಲ್ಲಿ ದೊರೆಯುತ್ತಿತ್ತು.

ಊರಲ್ಲಿ ಕಥೆ ಹೇಳುವ ಅಜ್ಜ- ಅಜ್ಜಿಯರು ಅಂದು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿದ್ದರು. ಅಂಥ ಒಬ್ಬ ಅಜ್ಜನ ಬಗ್ಗೆ ಭೂಸನೂರಮಠ ಅವರಿಗೆ ವಿಶೇಷವಾದ ಆದರ, ಅವರ ಹೆಸರು ತಮ್ಮ ಓಣಿಸಾಲಿನ ಗಿರಿಮಲ್ಲಪ್ಪಜ್ಜ. ಈತ ಅನಕ್ಷರಸ್ಥ ಆದರೂ ಆತನಲ್ಲಿದ್ದ ಕಥೆ ಹೇಳುವ ಶಕ್ತಿ ಅದ್ವಿತೀಯ, ಸಾಯಂಕಾಲ ಸಿಹಿನೀರು ತರುವುದಕ್ಕೆ ಪ್ರತಿನಿತ್ಯ ಕೆರೆಗೆ ಹೋಗುತ್ತಿದ್ದ ಅಜ್ಜನನ್ನು ತಡೆದು ಹಾಕಿ ತಮ್ಮ ಬಂಕ ಅಥವಾ ಚಾವಣಿಯ ಕಟ್ಟೆಯ ಮೇಲೆ ಕೂಡಿಸಿಕೊಂಡು ಆತನಿಂದ ಮಹಾಭಾರತದ ಕಥೆಯನ್ನು ಕೇಳುತ್ತಿದ್ದರು. ಎಳೆಂಟು ಹುಡುಗರು ಹಿರಿಯರು ಸುತ್ತ ಕುಳಿತುಕೇಳುತ್ತಿದ್ದಾಗ ವಿಸ್ತಾರವಾದ ಭಾರತವನ್ನು ಹೇಳಲಿಕ್ಕೆ ಆತನಿಗೆ ತಿಂಗಳುಗಳೇ ಬೇಕಾಗುತ್ತಿತ್ತು. ಕಥಾಪ್ರಸಂಗಕ್ಕನುಗುಣವಾಗಿ ಆವೇಶ ತುಂಬಿ ಕೋಪ, ಕ್ರೋಧ, ದುಃಖ, ಸುಖ, ಆನಂದ, ತುಂಬಿ, ಸದ್ದು ಹೊಡೆದು, ಭುಜಚಪ್ಪರಿಸಿಕೊಂಡು, ನೆಲಗುದ್ದಿ, ಕಥೆಯ ಬಣ್ಣಗಳನ್ನು ನಮ್ಮ ಮುಂದೆ ಹೇಳುತ್ತಿದ್ದಾಗ ಬಾಲ್ಯದ ಆ ಮಹಾಭಾರತದ ಪ್ರಸಂಗಗಳಲ್ಲಿ ಮುಳುಗಿ ಆನಂದಗಳೆಯುತ್ತಿದ್ದರೆಂದು ಹೇಳುತ್ತಾರೆ. ಅಂತಹ ಗಿರಿಮಲ್ಲಪ್ಪನನ್ನು ನಾನು ಇಲ್ಲಿಯವರೆಗೆ ಕಂಡಿಲ್ಲವೆಂದು ತಮ್ಮ ಬಾಲ್ಯದ ಆ ಘಟನೆಯನ್ನು ಭೂಸನೂರಮಠ ಅವರು ಜ್ಞಾಪಿಸಿಕೊಳ್ಳುತ್ತಾರೆ.

ಮಾನವನು ಸಮಾಜದ ಕೂಸು, ಪರಿಸರ ಅವನ ಮೇಲೆ ಅಗಾಧವಾದ ಪರಿಣಾಮವನ್ನು ಬೀರುವುದರಲ್ಲಿ ಯಾವ ಸಂಶಯವೂ ಇಲ್ಲ ಅಂದಿನ ಸಮಾಜದಲ್ಲಿದ್ದ ಆಚಾರ ವಿಚಾರ ರೀತಿ - ನೀತಿಗಳ ಪ್ರಭಾವ ಭೂಸನೂರಮಠ

ಅವರ ಮೇಲೆ ಸಾಕಷ್ಟು ಆಗಿತ್ತು. ಇಂಥಹ ಹಿರಿಯರು ಹೇಳುವನೀತಿಕಥೆಗಳನ್ನು ಆಲಿಸುತ್ತಿದ್ದಂತೆ ಇವರ ಮನದಲ್ಲಿ ಧಾರ್ಮಿಕ ಮನೋಭಾವನೆ ಅರಳಿ ಹರಳುಗಟ್ಟ ತೊಡಗಿತ್ತು. ಅಂದಿನವರು ಆದರ್ಶಗುಣಗಳೆಲ್ಲ ಇವರಲ್ಲಿ ಮನೆ ಮಾಡಿದ್ದವು.

ಹೀಗೆ ಅಂದಿನ ಸಮಾಜದಲ್ಲಿಯ ಸಂಸ್ಕಾರ ಪ್ರಭಾವಗಳೆಲ್ಲ ಭೂಸನೂರಮಠ ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ತುಂಬಾ ಸಹಕಾರಿಯಾದವು. ಒಳ್ಳೆಯದನ್ನು ಸ್ವೀಕರಿಸುವ ಕೆಟ್ಟದ್ದನ್ನು ತಿರಸ್ಕರಿಸುವ ಪರಿಪಾಠವನ್ನು ಅಂದೇ ಅವರು ಬೆಳೆಸಿಕೊಂಡು ಬಂದುದು ಮುಂದೆ ಇವರು ಆದರ್ಶ ಜೀವನವನ್ನು ಬದುಕಲು ಸಹಕಾರಿಯಾಯಿತು. ತಂದೆ ತಾಯಿಗಳ ಪ್ರೀತಿಯಲ್ಲಿ ಹಳ್ಳಿಯ ಸಂಸ್ಕಾರದ ಲೇಪವನ್ನು ಬಳಿದುಕೊಂಡು ಹಳ್ಳಿಗರೊಂದಿಗೆ ಬೆರೆತು ಸಹಜೀವನವನ್ನು ನಡೆಸುವ ಸುಂದರ ವ್ಯಕ್ತಿತ್ವವನ್ನು ತಮಗರಿವಿಲ್ಲದಂತೆ ರೂಪಿಸಿಕೊಳ್ಳುತ್ತ ಬಾಲ್ಯವನ್ನು ಕಳೆದರು. ಇದರ ಜೊತೆಯಲ್ಲಿ ಮನೆಯವರ ಪ್ರೋತ್ಸಾಹದಿಂದ ಇವರಿಗೆ ಶಿಕ್ಷಣದತ್ತ ಒಲವು ಮೂಡಿತು.

## ವಿದ್ಯಾಭ್ಯಾಸ

ಆಗ ವಿದ್ಯಾಭ್ಯಾಸಕ್ಕೆ ಇಂದಿನಷ್ಟು ಹೆಚ್ಚಿನ ಪ್ರೋತ್ಸಾಹ ಅನುಕೂಲತೆಗಳು ಇರಲಿಲ್ಲ ಪ್ರತಿಯೊಂದು ಹಳ್ಳಿಗಳಲ್ಲಿ ಗುಡಿ - ಗುಂಡಾರಗಳೆ ಶಾಲೆಗಳಾಗಿದ್ದವು ಅವು ಪ್ರಾಥಮಿಕ ಶಿಕ್ಷಣಕ್ಕೆ ಮಾತ್ರ ಮೀಸಲಾಗಿದ್ದವು. ಇಂದಿನಂತೆ ಇರುವ ಕಿರಿಯ ಪ್ರಾಥಮಿಕ ಶಾಲೆಗಳು (1 ರಿಂದ 4 ನೇಯ ತರಗತಿ) ಹಳ್ಳಿಗಳಲ್ಲಿ, ಮಾಧ್ಯಮಿಕ ಶಾಲೆಗಳು ದೊಡ್ಡ ದೊಡ್ಡ ಹಳ್ಳಿಗಳಲ್ಲಿ, ಪ್ರೌಢಶಾಲೆಗಳು ಮಾತ್ರ ದೊಡ್ಡ ದೊಡ್ಡ ನಗರಗಳಲ್ಲಿ ಕಂಡು ಬರುತ್ತಿದ್ದವು.

ಆಗ ನಿಡಗುಂದಿಯಲ್ಲಿಯೂ ಒಂದು ಪ್ರಾಥಮಿಕ ಶಾಲೆ ಇತ್ತು. ಮಣ್ಣಿನ ಮೇಲಮುದ್ದಿಯುಳ್ಳ ಶಾಲೆ ಅದು, ಅಲ್ಲಿ ಒಟ್ಟು ಮೂರು ಕೋಲಿಗಳಿದ್ದವು ಆರಂಭದಲ್ಲಿ ಈ ಶಾಲೆಗೆ ದಾಖಲಾದ ಭೂಸನೂರಮಠ ಅವರು ಅದರ ಚಿತ್ರಣ ಕೊಡುವುದು ಹೀಗೆ "ಶಾಲೆಯೆಂದರೆ ಮುಳ್ಳು, ದೊಡ್ಡ ಮಳೆಬಂದಾಗ ತೇವ, ನೆಲದ ಮೇಲೆ ಪ್ರತಿನಿತ್ಯ ಕುಳಿತುಕೊಳ್ಳಲು ಚೌಕಾಕಾರದ ಮೊಳದ ತಟ್ಟನ್ನು ಒಯ್ಯುತ್ತಿದ್ದರು, ಅಂಕಿ ಎಣಿಸಲು ಬಣ್ಣದ ಗುಂಡುಗಳ ಸಾಲು ಹಾಗೂ ಎತ್ತರದ ಕಟ್ಟಿಗೆಯ ಫಳವನ್ನು ಆಗ ಕೊಡುತ್ತಿದ್ದರು. ದೊಡ್ಡಹೆಡ್‌ಮಾಸ್ತರು, ಕುಡುವ ಖುರ್ಚಿ, ಜಾಗಟೆ, ಗಡಿಯಾರ, ಎದ್ದು ಬೇಗನೇ ಮೋರೆ ತೊಳೆಯುತ್ತಾ ಹಾಡುವದು. ಸಾಲಾಗಿ ಕುಡ್ರುವದು ಸಾಲಾಗಿ ನಿಲ್ಲುವದು ಮತ್ತು ಶಾಲೆ ಬಿಡುವ ಗಂಟೆಯಾದಾಗ ಸಾಲಾಗಿ ಶಾಲೆ ಬಿಟ್ಟು ಹೊರಡುವದು, ಶಾಲೆಯ ಮುಂದಿದ್ದ ದೊಡ್ಡ ಊರ ಕೆರೆ ಮತ್ತು ಅದೇ ಕೆರೆಯ ಬಂಡೆಯ ಮೇಲೆ ಬೆಳೆದಿದ್ದ ದೊಡ್ಡ ಅರಳಿಯ ಮರ. ಇವು ಅಂದಿನ ಚಿತ್ರಣಗಳು"ಎಂದು ನೆನಪಿಸಿಕೊಳ್ಳುತ್ತಾರೆ.

ಭೂಸನೂರಮಠ ಅವರು ಈ ಶಾಲೆಯಿಂದ ಒಂದು ಮತ್ತು ಎರಡನೇಯ ತರಗತಿಗಳನ್ನು ಪಾಸು ಮಾಡಿ ಮೂರನೆಯ ತರಗತಿಗೆ ಕಾಲಿಟ್ಟರು. ಆಗ ಗಣಿತದಲ್ಲಿ ಗುಣಾಕಾರ ಮತ್ತು ಭಾಗಾಕಾರ ಲೆಕ್ಕಗಳ ಅಭ್ಯಾಸವನ್ನು ಕಲಿಸಲಾಗುತ್ತಿತ್ತು.

ಅಲ್ಲಿಯ ಶಿಕ್ಷಕರ ಪಾಂಡಿತ್ಯದ ಅರಿವಾದಾಗ ಅವರಲ್ಲಿ ಪ್ರೀತಿ ಮೂಡಿ ಶಾಲೆಯ ಬಗ್ಗೆ ಆಸಕ್ತಿ ತಾನೇ ತಾನಾಗಿ ಮೂಡುತ್ತಿತ್ತು. ಮೂರು ವರ್ಷಗಳ ಕಾಲ ಟ್ರೇನೀಂಗ್ ಕಾಲೇಜಿನಲ್ಲಿ ತರಬೇತಿ ಪಡೆದು ಸಂಸ್ಕೃತ, ಕನ್ನಡ, ಗಣಿತ ಮುಂತಾದ ವಿಷಯಗಳಲ್ಲಿ ಪರಿಣಿತಿಯನ್ನು ಪಡೆದ ಸಮರ್ಥ ಶಿಕ್ಷಕರು ಅಲ್ಲಿ ಇರುತ್ತಿದ್ದರು. ಅವರು ಪ್ರಾಥಮಿಕ ಶಾಲೆಯಲ್ಲಿಯೇ ಶಿಕ್ಷಣದ ಭದ್ರ ತಳಪಾಯವನ್ನು ಹಾಕುತ್ತಿದ್ದರು. ಈ ಶಾಲೆಗಳಲ್ಲಿ ತಪ್ಪಿದ ಮಕ್ಕಳಿಗೆ ಉಗ್ರ ಶಿಕ್ಷೆ ಕೊಡುವ ಪದ್ಧತಿ ಇತ್ತು. ಶಿಕ್ಷಕರು ಸ್ವತಃ ಶಿಕ್ಷೆ ನೀಡುವುದರೊಂದಿಗೆ ಶಿಷ್ಯನಿಂದ ಶಿಷ್ಯರಿಗೆ ಕಪಾಳಮೋಕ್ಷ ಬೆನ್ನಮೇಲೆ ಗುದ್ದವದು ಮತ್ತೊಬ್ಬನನ್ನು ಬೆನ್ನ ಮೇಲೆ ಹತ್ತಿಸಿ ನಿಲ್ಲಿಸುವುದು ಇತ್ಯಾದಿ ಶಿಕ್ಷೆಗಳು ಅಂದು ಸಾಮಾನ್ಯವಾಗಿದ್ದವು. ಇದರಿಂದ ಕೆಲವರಿಗೆ ಶಾಲೆಯಂದರೆ ಅಲರ್ಜಿಯಾಗುತ್ತಿತ್ತು.

ಭೂಸನೂರಮಠ ಅವರೂ ಇಂಥ ಶಿಕ್ಷೆಯಿಂದ ಹೊರತಾಗಿರಲಿಲ್ಲ. ಆ ಒಂದು ಅನುಭವವನ್ನು ಅವರೇ ಹೀಗೆ ವಿವರಿಸಿದ್ದಾರೆ. "ಸಾಲಿ ಕಲಿವ ಎಚ್ಚರ ನನ್ನಲ್ಲಿ ಮೂಡಿದ್ದು ೩ ನೇ ಇಯತ್ತೆಯಲ್ಲಿ ಕಳಕನಗೌಡರೆಂಬ ಗಂಭೀರ ಮುಖಮುದ್ರೆಯ ಮಾಸ್ತರರು ಭಾಗಾಕಾರ ಕಲಿಸುವಾಗ ಗಣಿತದಲ್ಲಿ ನಾನು ಒಳ್ಳೆ ಚುರುಕು ಎಂಬ ಮಾತು ನನಗೆ ಹಿಂದುಗಡೆ ಮನವರಿಕೆಯಾದರೂ ಭಾಗಾಕಾರ ಆಗ ನನ್ನ ತಲೆಯಲ್ಲಿ ಹೋಗಲೇ ಇಲ್ಲ. ಅಂದಿನ ನನ್ನ ಚಿಕ್ಕ ವಯಸ್ಸು ಭಾಗಾಕಾರದ ಎತ್ತರಕ್ಕೆ ಬೆಳೆದಿರಲಿಲ್ಲವೆಂದು ನನಗೆ ಈಗ ಅನಿಸುತ್ತದೆ. ಮತ್ತೆ ಮತ್ತೆ ತಿಳಿಸುವ ಹವ್ಯಾಸದಲ್ಲಿದ್ದ ಮಾಸ್ತರು ತಮ್ಮ ಛಡಿಯಿಂದ ಹೊಡೆದರು, ಹೊಡೆಸಿಕೊಂಡಂತೆ ನನ್ನ ತಲೆ ಮಡ್ಡಾಗಿ, ಕಣ್ಣೆಲ್ಲ ನೀರು ಬಂದು ಮನೆಗೆ ಬಂದೆ; ಅಳು ಮೋರೆಯನ್ನು ನೋಡಿ ತಾಯಿಪೀಡಿಸಿ ಕೇಳಿದಾಗ ಭೋರೆಂದು ಅತ್ತು ಮಾಸ್ತರು ಜೋರಾಗಿ ಅಂಗೈಗೆ ಹೊಡೆದದ್ದು ತೋರಿಸಿದೆ. ಕೆಂಪಗಾದ ಬಲಗೈ ಸ್ವಲ್ಪ ಬಾತಂತಿತ್ತು. ತಾಯಿ ಅತಿ ನೊಂದುಕೊಂಡು ತಂದೆಯವರಿಗೆ ನಡೆದ ಸಂಗತಿ ತಿಳಿಸಿದರು. ಒಬ್ಬನೆ ಮಗ - ಅವರು ಸಿಟ್ಟಿಗೆದ್ದು ಮಾಸ್ತರರಿದ್ದಲ್ಲಿಗೆ ಮಧ್ಯಾಹ್ನವೇ ಹೋಗಿ ಮಗನನ್ನು ಹೊಡೆಯತಕ್ಕದ್ದಲ್ಲ ಎಂದು ಸಕ್ತ ಮನಾಯಿ ಮಾಡಿ ಬಂದರು. ಅದರ ಒಳ್ಳೆಯ ಪರಿಣಾಮ ಮರುದಿನ ಮುಂಜಾನೆ ಸ್ಪುಟವಾಗಿ ಪ್ರಕಟವಾಯಿತು. ಭಾಗಾಕಾರದ ಮಾಸ್ತರು ಸಿಟ್ಟು ತುಂಬಿಕೊಂಡಿದ್ದರು. ಎಲೆ, ಅಯ್ಯಾ ಸಾಲ್ಯಾಗ ಬಡದದ್ದು ಮನ್ಯಾಗ ಫಿರ್ಯಾದಿ ಹೇಳತಿಯಾ? ಎಂದರವರೆ ಮತ್ತೆ ಹೊಡೆದರು ಫಿರ್ಯಾದಿ ಕೊಟ್ಟಿದ್ದಕ್ಕಾಗಿ ಅಲ್ಲ, ಭಾಗಾಕಾರ ಬಾರದ್ದಕ್ಕೆ, ಅಂದಿನಿಂದ ನನ್ನ ಫಿರ್ಯಾದಿ ಬಂದಾದವು. ಆದರೆ ಏನೋ ಮಾಸ್ತರರಿಗೆ ದಯೆ ಮಾಯೆ ಮಾಡಿದಂತಾಯ್ತು ಏಕೆ ? ನೀವೇ ಊಹಿಸಿಕೊಳ್ಳಬೇಕು.

ಮತ್ತೊಂದು ನೆನಪಿನಲ್ಲಿ ಉಳಿದ ರೂಲು ಕಟ್ಟಿಗೆಯ ಕಥೆ ಒಮ್ಮೆ ಮುಂಜಾನೆ ತಡವಾಗಿ ಶಾಲಿಗೆ ಹೋದೆ ಹಾದುಹೋಗುವ ಹೆಬ್ಬಾಗಿಲಿನ ಎದುರಿಗೆ ಹೆಡ್‌ಮಾಸ್ತರ ಹೊಟ್ಟೆಬಾಳಪ್ಪನವರು ದೊಡ್ಡ ಖುರ್ಚಿ ಮೇಲೆ ಕುಳಿತಿದ್ದರು. ಇವರು ಒಳ್ಳೆ ಎತ್ತರವಾದ ವ್ಯಕ್ತಿ ಇಸ್ತ್ರಿಯಾಗಿದ್ದ ಬಟ್ಟೆ, ಉದ್ದನೆ ಕೋಟು, ಬಿಗುವಿನ ಆಕಾರ, ಇವರ ಮೇಲೆಯೇ ಗೋಡೆಗೆ ತೂಗು ಹಾಕಿದ್ದ ದೊಡ್ಡ ಗಡಿಯಾರ ಎದುರಿಗೆ ನುಸುಳಿಕೊಂಡು ಒಳಗೆ ನಮ್ಮ ವರ್ಗಕ್ಕೆ ಹೊರಳುವಷ್ಟರಲ್ಲಿ ಲೇ ಎಂದರು ಆಗ ನಾನು ನಡುಗುತ್ತಾ ಹೆದರುತ್ತ ಮುಂದೆ ಸರಿದೆ, ಲೇ ಮುಂದಕ ಬಾ ಎಂದು ಜೋರಾಗಿ ಕರೆದಾಗ ಸಮೀಪಕ್ಕೆ ಹೆಜ್ಜೆ ಇಟ್ಟೆ ಕೈ ಹಿಡಿ ಎಂದಾಗ ಬಲಗೈ ಮುಂದೆ ಮಾಡಿದೆ ಕಾಳಸರ್ಪದಂತೆ ಇರುವ ರೂಲ್ ಕಟ್ಟಿಗೆ

ದಪ್ಪನೆ ಎರುಗಿತು ಆಗ ನಾನೇನು ಮಾಡಿಕೊಂಡೆ ಹೇಳಲು ನಾಚಿಕೆ ಅವರೂ ಸಿಟ್ಟಿನಿಂದ ನಡಿ ನಿನ್ನ ಕ್ಲಾಸಿಗೆ ಎಂದು ಆದೇಶವಿತ್ತರು. ಅಲ್ಪಕಾಯ ಇನ್ನೂ ಅಲ್ಪವಾಗಿ ಅಳುಮೋರೆಯಲ್ಲಿ ನನ್ನ ವರ್ಗದಲ್ಲಿ ಕುಳಿತು ಕೊಂಡೆ ವರ್ಗದ ಶಿಕ್ಷಕರು ಸಿಟ್ಟು ಮಾಡಿದರು ಇದು ಅಂದಿನ ಗುರು - ಶಿಷ್ಯ ಸಂಬಂಧ; ಇದರರ್ಥ ಅಂದಿನ ಗುರುಗಳು ನಿರ್ದಯಿ, ಕಠೋರ, ಕ್ರೂರ ಎಂದು ನನ್ನರ್ಥವಲ್ಲ ಮಕ್ಕಳನ್ನು ಹೆಚ್ಚು ಹೆಚ್ಚು ಹೆದರಿಸಿ ಬಯ್ದು ಬಡಿದು ಹೆಚ್ಚು ಹೆಚ್ಚು ಕಲಿಯಬೇಕೆಂಬ ಭಾವನೆ ಅನೇಕರಲ್ಲಿ ಇತ್ತು ಎಂದು ನನ್ನ ಮನೋಭಾವ ಎಂದು ತಮ್ಮ ನೆನಪುಗಳನ್ನು ಬಿಚ್ಚಿಕೊಳ್ಳುತ್ತಾರೆ. ಇದು ಹಿಂದೆ ಶಿಕ್ಷಣವನ್ನು ನೀಡುತ್ತಿದ್ದ ಕ್ರಮ ಅದರಿಂದ ಭೂಸನೂರಮಠ ಅವರು ವಿಚಲಿತರಾಗದೆ ಎಲ್ಲವನ್ನು ಧೈರ್ಯದಿಂದ ಎದುರಿಸಿ ಗುರುಗಳ ಪ್ರೀತಿಗೆ ಪಾತ್ರರಾದರು.

## ಬಾಲ್ಯದಲ್ಲಿ ಲೆಕ್ಕ ಬಿಡಿಸುವ ಆಸಕ್ತಿ

ನಾಲ್ಕನೆಯ ಇಯತ್ತೆಗೆ ಬಂದಾಗ ಭೂಸನೂರಮಠರ ಗಣಿತವು ಸುಧಾರಿಸಿತ್ತು. ರಾಚಯ್ಯನವರು ತಮ್ಮ ಮನೆಗೆ ಬರುತ್ತಿದ್ದ ವ್ಯಾಪಾರಸ್ಥರಿಗೆ ತಮ್ಮ ಮಗನನ್ನು ಪರಿಚಯಿಸುತ್ತ "ನೀವು ಬೇಕಾದ ಲೆಕ್ಕ ಹೇಳಿ ಆತಗ" ಎಂದು ಹೇಳಿದಾಗ ಅವರು ತಮ್ಮಲ್ಲಿದ್ದ ಒಳ್ಳೆ ಕವಡುಕಂಠಕ ಲೆಕ್ಕಗಳನ್ನು ಇವರಿಗೆ ಕೇಳುತ್ತಿದ್ದರು. ಅವುಗಳನ್ನು ಬಿಡಿಸಿ ಹೇಳಿ ಅವರಿಂದ ಶಹಭಾಷಗಿರಿ ಪಡೆಯುತ್ತಿದ್ದರು. ಅಂತವುಗಳಲ್ಲಿ ಕೆಲವನ್ನು ಅಲ್ಲಿ ಉದಾಹರಿಸಲಾಗಿದೆ.

1)ಅಡವಿಯಲ್ಲಿ ಇದಿರಾ ಬದಿರಾಗಿದ್ದ ಎರಡು ಮರಗಳು ಒಂದು ಮರದ ಮೇಲೆ ಒಂದು ಗಿಳಿ ಎರಡನೆಯ ಮರದ ಮೇಲೆ ಗಿಳಿಯಗುಂಪು, ಒಂಟಿ ಗಿಳಿ ಮರದ ಗುಂಪನ್ನು ಕೇಳುತ್ತದೆ. ನೀವೆಷ್ಟುಮಂದಿಯೆಂದು, ಗುಂಪಿನ ನಾಯಕ ಉತ್ತರ ಕೊಡುತ್ತಾನೆ. ನಾವು, ನಮ್ಮಷ್ಟು ನಮ್ಮರ್ಧ, ನಮ್ಮ ಗಿರ್ದ ನೀನೊಬ್ಬ ನಮ್ಮನ್ನು ಕೂಡಿದರೆ 100 ಮಂದಿ ಆಗುತ್ತೇವೆ, ಎರಡನೇಯ ಮರದ ಮೇಲಿದ್ದ ಗುಂಪಿನ ಗಿಳಿಯ ಸಂಖ್ಯೆ ಎಷ್ಟು? ಎಂದು ಕೇಳಿದರು ಗಿಡ್ಡನ ಮೇಲೆ ಗಿದ್ನ ಅಕ್ಕಿ ಹೊರಿಸಿದಂತಾಯ್ತು, ಆದರೆ ಬಿಡುವುದು ಜಾಣತನಕ್ಕೆ ಭಂಗ ದೊಡ್ಡ ಅಪಮಾನ ನಾಳೆ ನಾಡದು ಬಿಡಿಸುತ್ತೇನೆ ಎನ್ನುವಂತಿಲ್ಲ. ಅವರು 3-4 ತಾಸು ಅಥವಾ ಒಂದು ದಿನದ ಅತಿಥಿಗಳು ತಲೆಯಲ್ಲಿ ಒದ್ದಾಡಿ, ಒದ್ದಾಡಿ ಲೆಕ್ಕಬಂತು. ಅಂದು ಬೀಜಗಣಿತದ ರೀತಿ ಗೊತ್ತಿಲದ್ದು, ಉತ್ತರ ನಾವು 36, ನಮ್ಮಷ್ಟು 36, ನಮರ್ಧ 18, ನಮ್ಮಗಿರ್ಧ 9, ಈ99 ಕ್ಕೆ ನೀನೊಬ್ಬ ಕೂಡಿದರೆ 100 ಅಲ್ಲವೇ ?

2) ಒಂದು ಒಲೆ ಹೂಡಲಿಕ್ಕೆ 3 ಗುಂಡು ಬೇಕು 10 ಒಲೆ ಹೂಡಲಿಕ್ಕೆ ಎಷ್ಟುಗುಂಡು ಬೇಕು? ಎಂದಾಗ ನಾನು 30 ಗುಂಡು ಎಂದೆ. ಅದು ತಪ್ಪು ಉತ್ತರ, ಸರಿಯಾದದ್ದು 21 ಗುಂಡು, ಸರಿಯಾದ ಉತ್ತರ ಏಕೆ ? ಎಂದು ಕೇಳಿದಾಗ ಒಲೆಗಳನ್ನು ಒಂದಕ್ಕೊಂದು ಜೋಡಿಸಿ ಹೂಡಿದರೆ ಮೊದಲೆಯ ಒಲೆಗೆ 3 ಗುಂಡು ಉಳಿದ ಒಂಬತ್ತು ಒಲೆಗೆ ಎರಡೆರಡರಂತೆ 18 ಗುಂಡುಗಳು ಇದು ಸರಿಯಾದ ಉತ್ತರ.

3) ಒಂದು ಅಂಕಣಕ್ಕೆ ಇದಿರುಬದಿರು 4 ಕಂಬ 20 ಅಂಕಣಕ್ಕೆ ಎಷ್ಟು ಕಂಬ ? 20 X 4 - 80 ಕಂಬ ಎಂದಾಗ ಅದು ತಪ್ಪು. ಏಕೆಂದರೆ ಒಂದಕ್ಕೊಂದು ಹತ್ತಿಕೊಂಡುಇರುವ 20 ಅಂಕಣಕ್ಕೆ 4 ಮತ್ತು 19 ಅಂಕಣಕ್ಕೆ 38 X 42 ಕಂಬ ಸರಿ ಉತ್ತರ.

ಇಂಥ ಹಲವಾರು ಉದಾಹರಣೆಗಳನ್ನು ಪ್ರೊ. ಭೂಸನೂರಮಠ ಅವರು ಹಲವು ಸಂದರ್ಭಗಳಲ್ಲಿ ಜ್ಞಾಪಿಸಿಕೊಂಡಿದ್ದಾರೆ. ಗ್ಯಾಸ ಒಲೆಯನ್ನು ಮಾತ್ರ ಕಂಡಿರುವ ನಮ್ಮ ಇಂದಿನ ಮಕ್ಕಳಿಗೆ ಶಾಲೆಯಲ್ಲಿ ಒಲೆಯ ಲೆಕ್ಕ ಹೇಳಿದರೆ ಅರ್ಥವೆ ಆಗಲಿಕ್ಕಿಲ್ಲ, ಹಾಗೆಯೇ ಆರ್.ಸಿ.ಸಿ. ಮನೆಗಳಲ್ಲಿ ವಾಸಮಾಡುವ ಮಕ್ಕಳಿಗೆ ಕಂಬ, ಬೋದು, ಹಂಚು, ತೊಲೆ ಇತ್ಯಾದಿ ಶಬ್ದಗಳ ಅರ್ಥವೆ ಗೊತ್ತಿರಲಿಕ್ಕಿಲ್ಲ. ಕಾಲಕ್ರಮೇಣ ಇಂಥಲೆಕ್ಕಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಕಂಪ್ಯೂಟರದಲ್ಲಿ ಲೀನವಾದರೂ ಅದರ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ, ಆದರೆ ಮಕ್ಕಳ ಬುದ್ಧಿಶಕ್ತಿಯನ್ನು ಒರೆಗೆ ಹಚ್ಚಲು ಇಂಥ ಲೆಕ್ಕಗಳ ಅವಶ್ಯಕತೆ ಸಾಕಷ್ಟಿದೆ ಒಗಟಿನ ರೂಪದ ಪ್ರಶ್ನೆಗಳಿಂದಲೂ ಮಕ್ಕಳಿಗೆ ವಿಚಾರ ಮಾಡುವ ಅವಕಾಶವನ್ನು ಒದಗಿಸಿದಂತಾಗುತ್ತದೆ. ಬದಲಾಗುತ್ತಿರುವ ಶಿಕ್ಷಣ ಪದ್ಧತಿಯಲ್ಲಿ ಗಣಕಯಂತ್ರದ ಮುಖಾಂತರವೇ ಎಲ್ಲ ಲೆಕ್ಕಗಳನ್ನು ಬಿಡಿಸುವಾಗ ವಿದ್ಯಾರ್ಥಿಗಳಿಗೆ ಗಣಿತವನ್ನು ಕಲಿಯುವ ಅವಶ್ಯಕತೆಯೂ ಬೀಳಲಿಕ್ಕಿಲ್ಲ.

ಹೀಗೆ ಭೂಸನೂರಮಠ ಅವರು ಶಾಲೆಯಲ್ಲಿ ಚುರುಕಿನ ವಿದ್ಯಾರ್ಥಿಯಾಗಿರುವುದರ ಜೊತೆಗೆ ಮನೆಗೆ ಬಂದ ಅತಿಥಿಗಳ ಪ್ರಶ್ನೆಗಳನ್ನು ಬಿಡಿಸಿ ಉತ್ತರ ಹೇಳುವ ಜಾಣ್ಮೆಯಿಂದ ಅವರ ಮೆಚ್ಚುಗೆ ಪಡೆದುಕೊಳ್ಳುತಿದ್ದರು. ಈ ಕೃಷಿಯೇ ಅವರ ವಿದ್ಯಾಭಿವೃದ್ಧಿಗೆ ಜ್ಞಾನಸಂಪಾದನೆಗೆ ಸಹಾಯಕಾರಿಯಾಗಿರಬೇಕು. ಅಂತೆಯೇ ಮುಂದಿನ ದಿನಗಳ ವ್ಯಾಸಂಗದಲ್ಲಿ ಹೆಚ್ಚಿನ ಅಸ್ಥೆವಹಿಸಿ ಮುನ್ನಡೆದರು.

ಆತ್ಮ ವಿಶ್ವಾಸ ಸ್ವಾಭಿಮಾನ ಪ್ರಯತ್ನಶೀಲತೆ ವಿಚಾರಪರತೆ, ಸ್ವಯಂಶಿಕ್ಷಣ ಈ ಎಲ್ಲ ಒಂದಾಗಿ ಕೂಡಿಕೊಂಡು ಅಭ್ಯಾಸದಲ್ಲಿ ಯಾವ ಪರಿಶ್ರಮವಿಲ್ಲದೆ ಬೆಳೆಯುತ್ತಿರುವಾಗ ಸುತ್ತು ಮುತ್ತಲಿನ ಓಣಿಯ ಜನರ ಕಣ್ಣಲ್ಲಿ ಇವರ ಬಗ್ಗೆ ಒಂದು ಪ್ರೇಮ ಆದರ ಭಾವ ಮಿಂಚುವಂತಿದ್ದವು. ತಾನು ಜಾಣನೆಂಬ ಹೆಮ್ಮೆಸೊಕ್ಕು ಎಂದೂ ಅವರ ಮನದಲ್ಲಿ ಸುಳಿಯದ ಕಾರಣ ನೆರೆ - ಹೊರೆಯವರ ಸಹಜಪ್ರೇಮ ಇವರ ಬಗ್ಗೆ ಅಭಿಮಾನದ ಹಂತಕ್ಕೇರಿತು. ಆದರೂ ಇಲ್ಲಿ ಒಂದು ಸಣ್ಣ ಸಂಗತಿಯ ದೊಡ್ಡ ಮಹತ್ವವನ್ನು ಬಿತ್ತರಿಸುತ್ತಾರೆ. ನಮ್ಮೂರ ಅಂದಾನಗೌಡರು ಮುಂಜಾನೆ ತಂಬಿಗೆ ತೊಗೊಂಡು ಹೋಗಿ ಬಂದು ನಮ್ಮಂಗಡಿಯ ಮುಂದಿರುವ ದೊಡ್ಡ ಕಟ್ಟೆಯ ಮೇಲೆ ಕುಳಿತು "ಎ ಸಂಗ್ಯಾ ಕೈಗೆ ನೀರು ತೊಗೊಂಡು ಬಾ" ಎಂದು ನನ್ನನ್ನು ಕರೆದರು ನಮ್ಮಲ್ಲಿ ಬಲುದೊಡ್ಡ ಜಮೀನ್ದಾರ, ಜಂಗಮಗೌಡ್ರು ಅವರನ್ನು ನಾನು ಮಾವಾ ಎಂದು ಕರೆಯುತ್ತಿದ್ದೆ. ಇದು ರಕ್ತ ಬಾಂಧವ್ಯದ ಮಾತಲ್ಲ ಹಳ್ಳಿಯವರ ನಿರರ್ಗಳ ಬಾಂಧವ್ಯ ಹೀಗೆ ಎರಡು - ಮೂರು ದಿನ ಮಾವನಿಗೆ ಕೈ ತೊಳೆಯಲು ನೀರು ತಂದು ಹಣಿಸಿದೆ. ಒಂದು ದಿನ ನಮ್ಮ ತಾಯಿ ಹೊಸ್ತಿಲ ತೊಳೆದು ಅಂಗಳ ಸಾರಿಸುತ್ತಿರುವಾಗ ತಾಯಿಯ ಕಿವಿಗೆ ಬಿತ್ತು ಸಂಗ್ಯಾ ಎಂಬ ಶಬ್ದ ; ಒಳಗೊಳಗೆ ಬಹಳ ಸಿಟ್ಟಾಗಿ ಹೊರಗೆ ಶಾಂತಿ ಸೈರಣೆ ಮೃದು ಹಾಸ್ಯದಿಂದ ನಮ್ಮ ತಾಯಿಯು ಗೌಡರಿಗೆ "ಎಣ್ಣಾ

ನೀನು ನಮ್ಮ ಸಂಗಪ್ಪನ್ನ ಸಂಗ್ಯಾ ಅಂತಾ ಕರಿತಿಯಲ್ಲಿ, ಆತ ಮಾಡೋ ಒಂದು ಲೆಕ್ಕಾ ನೀ ಮಾಡು ಆಮೇಲೆ ನೀನು ಸಂಗ್ಯಾ ಅಂತ ಕರಿ ಇಲ್ಲದಿದ್ರ ಸಂಗಪ್ಪ ಎಂದು ಕರಿ" ಎಂದು ಬಿಚ್ಚುಮಾತಿನಲ್ಲಿ ಹೇಳಿದಳು. ತಾಯಿಯ ಸಮಯೋಚಿತ ಜಾಣ್ನುಡಿ ಅಂದಿನಿಂದ ಅಂದಾನಗೌಡರು ಸಂಗಯ್ಯ , ಸಂಗಪ್ಪ ಎಂದು ಕರೆಯ ಹತ್ತಿದರು ಎಂದು ಭೂಸನೂಮಠರ ಬಾಲ್ಯದ ನೆನಪನ್ನು ನೆನಪಿಸಿಕೊಳ್ಳುತ್ತಾರೆ. ಅದರಲ್ಲಿಯೂ ವಿಶೇಷವಾಗಿ ಬಾಯಿ ಲೆಕ್ಕದಲ್ಲಿ ಇವರಿಗೆ ಹೆಚ್ಚಿನ ಪರಿಣಿತಿ, ಅವರು ಸೇವಾ ನಿವೃತ್ತರಾದ ಮೇಲೆಯು ಯಾವದೇ ರೀತಿಯ ಪೇಪರು ಪೆನ್ನು ಬಳಸಿ ಕೊಳ್ಳದೆ ಬಾಯಿ ಮಾತಿನಿಂದ ಲೆಕ್ಕವನ್ನು ಬಿಡಿಸುತ್ತಿದ್ದರೆಂದು ಗಣಿತದಲ್ಲಿಯ ಅವರ ವಿದ್ವತ್ತನ್ನು ಅವರ ಪುತ್ರ ಗಣಿತದ ಪ್ರಾಧ್ಯಾಪಕ ಸುಭಾಸ ಭೂಸನೂರಮಠ ಅವರು ಈಗಲೂ ಸ್ಮರಿಸುತ್ತಾರೆ.

ಭೂಸನೂರಮಠ ಅವರು ನಿಡಗುಂದಿಯಲ್ಲಿ ಕನ್ನಡ 5 ನೇಯ ತರಗತಿಯವರೆಗಿನ ಶಿಕಣ ಪೂರೈಸಿದರು. ಮುಂದೆ ನಿಡಗುಂದಿಯಲ್ಲಿ ಇಂಗ್ಲೀಷ ಕಲಿಯುವ ಅವಕಾಶ ಅವರಿಗೆ ದೊರೆಯಿತು. ಆಗ ಗುಡಿಗೇರಿ ಫಕೀರಯ್ಯನವರು ಇವರಿಗೆ ಇಂಗ್ಲೀಷ ಶಿಕ್ಷಕರು ಒಂದು ವರ್ಷದಲ್ಲಿ ಮೂರು ಎತ್ತೆಯ ಅಭ್ಯಾಸ ಮುಗಿಯಬೇಕು ಮುಂದೆ ಏಳೆಂಟು ತಿಂಗಳಲ್ಲಿಯೇ ಅಣ್ಣಪ್ಪ ಕುಲಕರ್ಣಿ ಎಂಬ ವಕೀಲರಿಂದ ಇವರ ಪರೀಕ್ಷೆ, ಆ ಪರೀಕ್ಷೆಯಲ್ಲಿ ಇವರು ಪಡೆದ ಗುಣಗಳು 25 ಕ್ಕೆ 24, ಈ ರೀತಿ ಇವರು ಇಂಗ್ಲೀಷಿನಲ್ಲಿಯೂ ಹೆಚ್ಚಿನಪ್ರತಿಭೆಯನ್ನು ತೋರಿದರು.

## ಗದುಗಿನಲ್ಲಿ ಶಿಕ್ಷಣ

ನಿಡಗುಂದಿಯಲ್ಲಿ ಶಿಕ್ಷಣ ಮುಗಿಸಿದ ನಂತರ ಅಲ್ಲಿಂದ 24 ಮೈಲು ದೂರದಲ್ಲಿರುವ ಗದುಗಿಗೆ ಮುಂದಿನ ಶಿಕ್ಷಣಕ್ಕೆ ಹೋಗಬೇಕಾಗಿತ್ತು. ಆದರೆ ಇವರು ಇಲ್ಲಿವರೆಗೆ ಮನೆಯಿಂದ ಹೊರಗೆ ಹೋದವರಲ್ಲ ಹೊರಗೆ ಹೋದರೆ ಖರ್ಚು ಬೇರೆ, ಆದರೂ ಇವರ ಉತ್ಕಟ ಇಚ್ಛೆಯನ್ನು ಅರಿತ ತಂದೆಯವರು ಒಬ್ಬನೆ ಮಗನಾದರೂ ದೂರದ ಗದುಗಿಗೆ ಅಭ್ಯಾಸಕ್ಕೆ ಕಳಿಸಲು ಒಪ್ಪಿಕೊಂಡರು. ಗದುಗಿನ ವಿದ್ಯಾದಾನ ಸಮಿತಿಯ ಎ.ವಿ. ಹೈಸ್ಕೂಲಿನಲ್ಲಿ ಇವರು ಪ್ರವೇಶ ಪಡೆದರು. ಅಲ್ಲಿಯೇ ಇದ್ದ ವೀರಭದ್ರದೇವರ ಗುಡಿಯ ಒಂದು ಖೋಲಿಯೇ ಇವರ ವಾಸಸ್ಥಳ, ಸ್ವಲ್ಪದಿನ ಇವರ ಅಜ್ಜಿಯೊಬ್ಬರು ಇವರಿಗಾಗಿಯೇ ಅಡಿಗೆ ಮಾಡಲು ಗದುಗಿಗೆ ಬಂದಿದ್ದರು. ಆಗ ಇವರು ಸ್ನಾನಮಾಡದೆ ಚಹ ಕೂಡಾ ಮುಟ್ಟುತ್ತಿರಲಿಲ್ಲ, ಗುಡಿಯ ಬಾವಿಯ ನೀರನ್ನೆ ಸೇದಿ ಸ್ನಾನಮಾಡಿದ ನಂತರವೇ ಚಹ ಸೇವಿಸುತ್ತಿದ್ದರು. ಅದುವರೆಗೂ ಮನೆಯಲ್ಲಿ ಉಂಡುಟ್ಟು ಸುಖವಾಗಿ ಕಾಲ ಕಳೆದಿದ್ದ ಅವರಿಗೆ ಗದುಗಿನ ವಾತಾವರಣ ಹಿಡಿಸಲಿಲ್ಲವೆಂದು ತೋರುತ್ತದೆ. ವಾರಕ್ಕೆರಡು ದಿನ ಸಿಹಿ ಅಡಿಗೆ ಮಾಡಿ ತುಪ್ಪ ಬಡಿಸಿ ಉಣಿಸುವ ತಾಯಿ ಅವರ ಹತ್ತಿರ ಇಲ್ಲದುದರಿಂದಲೋ ಏನೋ ತಂದೆ - ತಾಯಿಯ ಹತ್ತಿರ ತಿರುಗಿ ಬಂದರು. 3-4 ತಿಂಗಳು ಶಾಲೆಗೆ ಹೋಗಲಿಲ್ಲ, ತಂದೆಗೆ ಇದು ಸರಿ ಬರಲಿಲ್ಲ. ತಮ್ಮ ಮಗ ಇನ್ನೂ ಓದಬೇಕು ಎಂಬ ಆಸೆ ಅವರದು. ಅವರ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳಬಾರದೆಂಬ ಕಾರಣದಿಂದ ಮತ್ತೆ ಗದುಗಿನ ಶಾಲೆಗೆ ಬಂದು ಹಾಜರಾದರು.

ಆದರೆ ಅಷ್ಟೊಂದು ಮನಸ್ಸಿಟ್ಟು ಅಭ್ಯಾಸ ಮಾಡದೆ. ಶಾಲೆಗೆ ಯಾವಾಗಲೂ ಚಕ್ಕರ್ ಹೊಡೆಯುತ್ತಿದ್ದರು ಕಾಡೂ ದೇವರ ಕಾಟಕ್ಕಾಗಿ ಒಂದೆರಡು ಪೀರಿಯಡಗಳಿಗೆ ಮಾತ್ರ ಹಾಜರಾಗುತ್ತಿದ್ದರು. ಪರೀಕ್ಷೆಯಲ್ಲಿ ನಪಾಸ ಆಗಬೇಕೆಂದು ಬಯಸಿದ್ದರು. ಅಂದರೆ ಅಲ್ಲಿಗೆ ಶಿಕ್ಷಣ ನಿಂತುಹೋಗುತ್ತದೆಂಬ ಭಾವನೆ ಇವರದು. ನೆಪಕ್ಕೆ ಮಾತ್ರ ಮೂರೇ ತಿಂಗಳು ಅಭ್ಯಾಸ ಮಾಡಿದ್ದರೂ ಎಳೆಂಟು ವಿದ್ಯಾರ್ಥಿಗಳಲ್ಲಿ ಇವರೇ ಪ್ರಥಮಸ್ಥಾನ ಪಡೆದು ಪಾಸಾಗಿ ತಿರುಗಿ ಗದುಗಿಗೆ ಹೋಗಲಿಲ್ಲ. ಮಗನ ಇಚ್ಚೆಯನ್ನರಿತ ತಂದೆಯವರೂ ಸುಮ್ಮನಾದರು. ಹೀಗಾಗಿ ಸುಮಾರು ನಾಲ್ಕು ವರ್ಷ ಇವರ ಅಭ್ಯಾಸ ನಿಂತುಹೋಯಿತು.

## ಸಂಸ್ಕೃತ ಮತ್ತು ಸಂಗೀತ ಅಧ್ಯಯನ

ಗದುಗಿನ ಅಭ್ಯಾಸ ಅರ್ಧಕ್ಕೆ ನಿಂತು ಊರಿಗೆ ಬಂದಾಗ ಸಂಸ್ಕೃತ ಕಲಿಯುವ ಯೋಗ ದೊರೆಯಿತು. ಅಲ್ಲಿಯೇ ಇದ್ದ ಸಂಸ್ಕೃತ ಪಾಠಶಾಲೆಗೆ ಸೇರಿದರು. ಅದರ ಜೊತೆಯಲ್ಲಿಯೇ ಚನ್ನಬಸನಗೌಡ ಅವರಿಂದ ಮರಾಠಿ ಭಾಷೆಯನ್ನು ಕಲಿತರು. ಅಷ್ಟೇ ಅಲ್ಲ ಮರಾಠಿಯಲ್ಲಿರುವ ಗಡ ಅಲಾಪಣ, ಹಿಂಹಗೇಲಾ, ಸೂರ್ಯೋದಯ ಎಂಬ ಕಾದಂಬರಿಗಳನ್ನು ಎಕಚ ಪ್ಯಾಲಾ, ದೌಪತಿ ವಸ್ತ್ರಾಪಹರಣ, ಮುಂತಾದ ನಾಟಕಗಳನ್ನು ಓದಿ ಮುಗಿಸಿದರು. ಇದರೊಂದಿಗೆ ಹಳಗನ್ನಡದ ಜೈಮಿನಿ ಭಾರತ, ರಾಜಶೇಖರ ವಿಳಾಸ ಮುಂತಾದ ಕಾವ್ಯಗಳನ್ನು ಹಾಗೂ ಗಳಗನಾಥರ ಹಲವಾರು ಕಾದಂಬರಿಗಳನ್ನು ಓದಿದರು.

ಈ ಅವಧಿಯಲ್ಲಿ ಸಂಗೀತವನ್ನು ಅವರು ಅಭ್ಯಾಸ ಮಾಡಿದ್ದು ವಿಶೇಷ, 4 ನೇಯ ತರಗತಿಯಲ್ಲಿದ್ದಾಗಲೇ ವಿದ್ಯಾಪ್ರೇಮಿ ಹಾಗೂ ಕಲಾಪ್ರಿಯರಾದ ಇವರ ತಂದೆಯವರು ಒಂದು ಕಾಲಪೇಟಿ ಹಾರ್ಮೋನಿಯಂ ತಂದಿದ್ದರು. ದೇವೇಂದ್ರಪ್ಪ ಬಡಿಗೇರ ಅವರು ಇವರಿಗೆ ಸಂಗೀತ ಗುರುಗಳಾಗಿ ಸಂಗೀತ ಕಲಿಸತೊಡಗಿದರು. "ಚೋಟು ಕಿರಿ ಆಳು ನಾನು, ಕೈಗೆ ಮೇಲಿನಮನೆ (ಸೂರು) ಚೆನ್ನಾಗಿ ನಿಲುಕಲಿಲ್ಲ ತಿದಿ ಅಥವಾ ಬಾಳಿ ತುಳಿಯಲು ಕಾಲು ಮುಟ್ಟಲಿಲ್ಲ ಆದರೂ ಹಾರ್ಮೋನಿಯಂ ಬಾರಿಸುವ ಆಸೆ. ತಂದೆಯವರಿಗೆ ಕಲಿಸುವ ಹುಚ್ಚು ನಾಲ್ಕನೆಯ ಎತ್ತೆಯಲ್ಲಿದ್ದಾಗ ನಾಟಕ ಕಲಿಸುವ ದೇವೇಂದ್ರಪ್ಪನನ್ನು ನಾನು ಮಾವ ಎಂದು ಕರೆದರೆ ನಮ್ಮ ಅಪ್ಪನವರಿಗೆ ದೇವೇಂದ್ರಪ್ಪನವರು ಮಾವಾ ಎಂದು ಕರೆಯುತ್ತಿದ್ದ. ಈ ಅನಿಮಿತ್ತ ಬಾಂಧವ್ಯ ಹಳ್ಳಿಯಲ್ಲಿ ಬಹಳ ಸಹಜ ಕಲಿಸುವ ಮಾವನಿಗೆ ವರ್ಷಕ್ಕೆ 200 ರೂಪಾಯಿ ಕೊಡಬೇಕು. ನಾನು ಸಾಯಂಕಾಲ ಕನ್ನಡ ಸಾಲಿ ಬಿಟ್ಟು ಬಂದ ಮೇಲೆ 2 - 3 ತಾಸು ನನಗೆ ಒಂದೊಂದು ಹಾಡು ಕಲಿಸುತ್ತ ಅದನ್ನೆ ಪಿಯಾನಿನಲ್ಲಿ ಬಾರಿಸಲು ಕಲಿಸುವುದು ಈ ಗುರುವಿನ ಕೆಲಸ. ನನಗೆನೋ ವಿಚಿತ್ರ, ಅದ್ಭುತ, ಆನಂದದ, ಅನುಭವ ಪದ ಕಲಿಯುವುದು ತಡವಾಗುತ್ತಿರಲಿಲ್ಲ, ಬಾರಿಸಿಕೊಂಡು ಹಾಡುವುದು ಯಾವ ಶ್ರಮವಿಲ್ಲದೆ ನಡೆಯಿತು. ಈ ಚೋಟು ಮರಿ ಪಿಯಾನು ಬಾರಿಸುತ್ತ ಹಾಡುವ ಮೋಜನ್ನು ನೋಡಲು ಹತ್ತೆಂಟು ಜನ ತಪ್ಪದೆ ನಮ್ಮ ಮನೆಗೆ ಬಂದು ಖುಷಿಯಾಗಿ ಈ ಹುಡುಗ ಬಾಳ ಶ್ಯಾಣೆ ಅದಾನು ಎಂದು ಶಹಬಾಶಗಿರಿ ಕೊಟ್ಟು ಹೋಗುತ್ತಿದ್ದರು." ಹೀಗೆ 5 ನೇಯ ಇಯತ್ತೆಯಲ್ಲಿರುವಾಗಲೇ ಸಂಗೀತದ ಜ್ಞಾನ ಇವರಿಗಾಯಿತು ಅಷ್ಟೆ ಅಲ್ಲ ಯಾವುದೇ ಸಂಗೀತಗಾರರು ಹಾಡಲು ಕುಳಿತರೆ ಅವರು ಹಾಡುವರಾಗವನ್ನು

ಕೂಡಲೇ ಗುರುತಿಸುವಷ್ಟು ಸಂಗೀತದಲ್ಲಿ ಇವರು ಪರಿಣಿತಿಯನ್ನು ಪಡೆದರು. ಮುಂದೆ ಭಕ್ತಿ ಸುಧಾಸಾರವನ್ನು ಸಂಪಾದಿಸುವಾಗ ಈ ಜ್ಞಾನ ಅಲ್ಲಿ ಉಪಯೋಗವಾದದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

## ಪ್ರೌಢ ಶಿಕ್ಷಣ

ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಊರು ಸೇರಿದ ಭೂಸನೂರಮಠರು ತಮ್ಮ 17 ನೇಯ ವಯಸ್ಸಿನಲ್ಲಿಯೇ ಕುಸೂಗಲ್ಲಿನ ಪಾರ್ವತಿದೇವಿಯನ್ನು ಕೈ ಹಿಡಿದರು. ಇವರ ಮದುವೆಯಾದ ಮೇಲೆ ನಡೆದ ಒಂದು ಘಟನೆ ಭೂಸನೂರಮಠ ಅವರ ಜೀವನವನ್ನೆ ಬದಲಾಯಿಸಿತು. ಮದುವೆಯಾದ ಹೊಸತರಲ್ಲಿ ಕುಸೂಗಲ್ಲಿನ ಪತ್ನಿಯ ಮನೆಗೆ ಹೋಗಿದ್ದರು. ಪ್ರತಿದಿನ ಸಾಯಂಕಾಲ ತಂಬಿಗೆ ಹಿಡಿದುಕೊಂಡು ಹೊಲದಕಡೆ ತಿರುಗಾಡಿ ಬರುವ ಕ್ರಮ ಅವರದು. ಅದೇ ರೀತಿ ಒಂದು ದಿನ ಕೆರೆಯಲ್ಲಿ ತಂಬಿಗೆ ಬೆಳಗಿಕೊಂಡು ಬಂಡೆಯ ಮೇಲೆ ಆರಾಮು ಕುಳಿತುಕೊಂಡಿದ್ದರು. ಅಲ್ಲಿಗೆ ಒಬ್ಬ ಹಡಪಿಗ ಅವರ ಕಡೆ ಬಂದು ನೀವು ಯಾರು ? ಯಾವೂರವರು? ಇಲ್ಲಿಗೆ ಬಂದುದೇಕೆ ? ಎಂದು ಕೇಳಿದನು. ಇದನ್ನು ತಿಳಿಸಿದ ನಂತರ ಮುಂದೆ ಕಲಿತದ್ದು ಏನು? ಮುಂದೆ ಮಾಡುವುದೇನು? ಎಂಬ ಪ್ರಶ್ನೆ ಕೇಳಿದನು. ಅವರು ಅದನ್ನು ಹೆಮ್ಮೆಯಿಂದ ಹೇಳಿಕೊಂಡರು. ಆದರೆ ಆತ ಮತ್ತೆ ಪ್ರಶ್ನೆ ಹಾಕಿದ ನೀವು ಕಲಿತದ್ದೆಲ್ಲ ವ್ಯರ್ಥ. ಮುಂದೇನು ಮಾಡಬಲ್ಲಿರಿ ? ನನ್ನ ತಮ್ಮ ಮ್ಯಾಟ್ರಿಕ್ ಆಗಿ ಈಗ ನೌಕರಿಯಲ್ಲಿದ್ದಾನೆಂದು ಅವರ ಮುಖದ ಮೇಲೆ ಹೊಡೆದಂತೆ ಹೇಳಿದನು. ಈ ಮಾತು ಗಾಯದ ಮೇಲೆ ಬರೆ ಕೊಟಂತಾಯಿತು. 5 ನೇ ಇಯತ್ತೆಯ ಕನ್ನಡ ಕಲಿತು ಸುಸಂಸ್ಕೃತಳಾಗಿದ್ದ ಅವರ ಹೆಂಡತಿ ತವರೂರಲ್ಲಿ ಆಡಿದ ಒಂದು ಮಾತು ನೆನಪಿಗೆ ಬಂತು. ಹುಬ್ಬಳ್ಳಿಯಲ್ಲಿ ಅವರ ಹೆಂಡತಿ ಅಣ್ಣಂದಿರು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಇದ್ದುದನ್ನೂ ತಿಳಿದು ನಾನು ಏಕೆ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಬಾರದು? ಎಂಬ ಆತಂಕ ಅವರನ್ನು ಸಾಕಷ್ಟು ಸಂಕೋಚಗೊಳಿಸಿತು. ಅವರು ಮ್ಯಾಟ್ರಿಕ್ ಆಗದಿದ್ದರೆ ಹೆಂಡತಿಯ ಪ್ರೇಮ ಕೊರತೆಯಾಗಿಯೇ ಉಳಿಯಬಹುದಲ್ಲವೆ? ಎಂದು ಬಗೆದು ಮನೆಗೆ ಬಂದರು ಚಿಕ್ಕ ಅಂಗಡಿಯ ವ್ಯಾಪಾರ ಮಾಡುತ್ತಿದ್ದ ಅವರ ಹೆಂಡತಿಯ ಹೆಣ್ಣಜ್ಜ ಶ್ರೀ ಸಿದ್ದಗಿರಿಮಠದ ಧೂಳಯ್ಯನವರ ಅಂಗಡಿಗೆ ಅದೇ ಗೃಹಸ್ಥ ಹಡಪಿಗೆ ಬಂದ ಇದರ ಪ್ರಸ್ತಾಪ ಮಾಡಿದ್ದನು. ಬೀಗರ ಮುಂದೆ ಅವರ ವಿದ್ಯಾಭ್ಯಾಸವನ್ನು ಮುಂದುವರೆಸುವ ತವಕವನ್ನು ಸೂಚಿಸಿದರು. ಹುಬ್ಬಳ್ಳಿಯಲ್ಲಿಯೇ ಅವರ ವಿದ್ಯಾಭ್ಯಾಸ ಮುಂದುವರೆದರೆ ಹೇಗೆ ? ಎಂದು ಅವರ ಮಾವಂದಿರಾದ ಹಿರೇಮಠ ಹೆಡ್ ಮಾಸ್ತರರು, ಅವರ ಅಣ್ಣಂದಿರು ಪ್ರಸಿದ್ಧ ರಮಲ ಶಾಸ್ತ್ರಜ್ಞರನ್ನು ಕೇಳಿದರು ಅವರು ಹುಬ್ಬಳ್ಳಿಯಲ್ಲಿ ಅಭ್ಯಾಸ ಮುಂದುವರಿಸಬಹುದೆಂದು ಹೇಳಿದರು ಅದರಂತೆ ಅವರನ್ನು ಹುಬ್ಬಳ್ಳಿಗೆ ಕಳುಹಿಸಿದರು.

ಹೀಗೆ ಅರ್ಧಕ್ಕೆ ನಿಂತುಹೋದ ಶಿಕ್ಷಣ ನ್ಯೂ ಇಂಗ್ಲೀಷ ಹೈಸ್ಕೂಲ್ ಹುಬ್ಬಳ್ಳಿಯಲ್ಲಿ ದಿನಾಂಕ : 09-01-1930 ರಿಂದ ಮುಂದುವರೆಯಿತು. ಬೀಗರ ಮನೆಯಲ್ಲಿದ್ದುಕೊಂಡು ಶಿಕ್ಷಣವನ್ನು ಮುಂದುವರೆಸುವುದು ಭೂಸನೂರಮಠ

ಅವರ ತಂದೆಗೆ ಅಷ್ಟೊಂದು ಸರಿಬರಲಿಲ್ಲ. ಆದರೂ ನಿಡಗುಂದಿಯ ಹಿರಿಯರಾದ ವಿರೂಪಾಕ್ಷಗೌಡರು ಹಾಗೂ ಬಡಿಗೇರ ಮಾನಪ್ಪನವರು ಸೇರಿ ತಂದೆಯ ಮನವನ್ನು ಒಲಿಸಿದರು.

ಮನೆ ಅಳಿಯನ ಮೇಲೆ ಎಲ್ಲರದೂ ಅತೀವ ಪ್ರೀತಿ. ಆದರೂ ಭೂಸನೂರಮಠ ಅವರಿಗೆ ಸಂಕೋಚ, ಹೆಂಡತಿಯ ಮನೆಯ ವಾಸ ಇವರಿಗೆ ಇಷ್ಟವಿರದಿದ್ದರೂ ಅನಿವಾರ್ಯವಾಗಿ ಇದ್ದರು. ಕಲಿಯಲೇಬೇಕೆಂಬ ಛಲವೇ ಬಲವಾಗಿದ್ದುದರಿಂದ ಹಲವಾರು ಸಮಸ್ಯೆಗಳಿದ್ದರೂ ಅವುಗಳನ್ನೆಲ್ಲ ಎದುರಿಸಿದರು. ಮನೆಯಿಂದ ಶಾಲೆ ಎರಡು ಮೈಲು ದೂರದಲ್ಲಿತ್ತು. ಪ್ರತಿ ದಿನವೂ ನಡೆದುಕೊಂಡೆ ಹೋಗಿ ಬರುತ್ತಿದ್ದರು. ನಿಡಗುಂದಿಯಲ್ಲಿ ಇದೂವರೆಗೂ ಸುಖವಾಗಿ ಬೆಳೆದಿದ್ದ ಇವರಿಗೆ ಈಗ ಸ್ವಲ್ಪ ಕಷ್ಟವಾಯಿತು. ಆದರೂ ಅಭ್ಯಾಸದತ್ತ ಒಲವು, "ಸಾಲೆ ಬಿಟ್ಟ ಮೇಲೆ ಮನೆಗೆ ಬಂದು ಹೊಲದ ಕಡೆ ಪುಸ್ತಕ ತೆಗೆದುಕೊಂಡು ಹೋಗಿ ಮಬ್ಬಾಗಿ ಕಣ್ಣು ಕಾಣಿಸುವವರೆಗೆ ಓದುತ್ತಿದ್ದೆ. ಈ ರೀತಿಯ ಸತತಾಭ್ಯಾಸವನ್ನು ನನ್ನ ಇಡೀ ಜೀವಮಾನದಲ್ಲಿ ಎಂದೂ ನಾನು ಮಾಡಿಲ್ಲವೆಂದು ನನಗೆ ಗೊತ್ತು, ಒಮ್ಮೊಮ್ಮೆ ತಲೆಭಾರವಾಗಿ ಕೆಟ್ಟುಹೋಗುವುದೇನೋ ಎಂಬ ಹೆದರಿಕೆ ಒಳಗೊಳಗೆ ಆದರೂ ಛಲದ ಬೆಂಬತ್ತಿ ನಡೆದೆ, ಟ್ಯೂಷನ್ ಹೇಳಿಸಿಕೊಂಡ ಗಣಿತ, ಇಂಗ್ಲೀಷ ಮುಂತಾದ ವಿಷಯಗಳಲ್ಲಿ ಇತಿಹಾಸ, ಭೂಗೋಳ, ವಿಜ್ಞಾನಗಳ ಬಗ್ಗೆ ನನಗೆ ನನ್ನಲ್ಲಿ ಅತ್ಯಂತ ಅನಾದರವಿದ್ದರೂ ಅವನ್ನು ಓದಿ ತಿಳಿದುಕೊಳ್ಳಲು ಪ್ರಯತ್ನ ಮಾಡಿದೆ " ಎಂದು ಒಂದು ಕಡೆಗೆ ಅವರು ಹೇಳಿಕೊಳ್ಳುತ್ತಾರೆ.

೬ನೇಯ ತರಗತಿಯಲ್ಲಿ ಎರಡು ವರ್ಗಗಳು ಒಟ್ಟು ನೂರಿಪ್ಪತ್ತು ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ ದ್ವಿತೀಯ ಸ್ಥಾನ ಪಡೆದು ಭೂಸನೂರ ಮಠ ಅವರು ಪಾಸಾದಾಗ ಅವರಿಗಾದ ಆನಂದ ಅಷ್ಟಿಷ್ಟಲ್ಲ. ಈ ರ್‍ಯಾಂಕಿಗಾಗಿ ಅವರು ಬಹುಮಾನವನ್ನು ಪಡೆದರು. ಹೆಚ್ಚಿನ ಅಭ್ಯಾಸವನ್ನು ಮುಂದುವರೆಸಿದರು. ಓದುತ್ತ ಹೋದಂತೆ ತಿಳಿಯದ ವಿಷಯಗಳು ತಾನಾಗಿಯೇ ತಿಳಿಯುತ್ತದೆಂಬ ನಂಬಿಕೆ ಅವರದು. ಇದಕ್ಕೆ ಪೂರಕವಾದ ಒಂದು ಘಟನೆಯನ್ನು ಅವರೇ ಹೀಗೆ ಹೇಳಿದ್ದಾರೆ. "ಮ್ಯಾಟ್ರಿಕ್ ಪರೀಕ್ಷೆ ಒಂದೆರಡು ತಿಂಗಳು ಇರುವಾಗ; ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವ ಕೆಲಸ ನಡೆಯಿತು. ಈ ಸಂದರ್ಭದಲ್ಲಿ ನನ್ನ ದೃಷ್ಟಿಯ ಒಂದು ಮಹತ್ವದ ಸಂಗತಿ, ಭೂಮಿತಿಯ ಪ್ರಶ್ನೆ ಪತ್ರಿಕೆಯಲ್ಲಿ ಒಂದು ಲೆಕ್ಕ ಬಿಡಿಸಲು ನಾವೆಲ್ಲ ಹವಣಿಸಿದೆವು. ಸಾಧ್ಯವಾಗಲಿಲ್ಲ. ಮರುದಿನ ಕಾಲೇಜನಲ್ಲಿ ಆಗ ಅಭ್ಯಾಸ ಮಾಡುತ್ತಿದ್ದ ಬುಲುಬುಲೆ ಎಂಬವರೂ ಲೆಕ್ಕ ಬಿಡಿಸಲು ಪ್ರಯತ್ನ ಮಾಡಿದರು. ಇದಕ್ಕೆ ಮೊದಲು ಲ್ಯಾಮಿಂಗಟನ್ ಹೈಸ್ಕೂಲಿನ ಗಣಿತಶಾಸ್ತ್ರದ ತಜ್ಞ ಶಿಕ್ಷಕರಾದ ಪೋದ್ದಾರ ಅವರನ್ನು ಕೇಳಿದರೂ ಅವರಿಗೂ ಬಗೆ ಹರಿದಿರಲಿಲ್ಲ ಈ ಲೆಕ್ಕ, ಆದರೆ ಕಾಲೇಜಿನ ಮಟ್ಟದಲ್ಲಿ ನಡೆದ ಗಣಿತಶಾಸ್ತ್ರದ ರೀತಿಯಿಂದ ಬಿಡಿಸಬಹುದೆಂದು ಅವರ ಸಲಹೆ ಮಾಡಿದರು. ಮನೆಯಲ್ಲಿ ನಾವು ಈ ಲೆಕ್ಕವನ್ನು ಬಿಡಿಸುತ್ತಿದ್ದಾಗ ಪೋದ್ದಾರ ಮಾಸ್ತರರ ಸಲಹೆ ನನಗೆ ಸರಿ ಬರಲಿಲ್ಲ. ಕಾಲೇಜು ಮಟ್ಟದ ಲೆಕ್ಕವು ಮ್ಯಾಟ್ರಿಕ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಬಂದುದೇಕೆ? ಪರೀಕ್ಷಕರದೇ ತಪ್ಪೆಂಬ ಮಾತು ನನಗೆ ಸಮಂಜಸವೆನಿಸಲಿಲ್ಲ. ಅಟ್ಟದ ಮೇಲಿಂದ ನಾನು ಕೆಳಗೆ ಇಳಿದು ಬಂದು ಸಲ ಅಡ್ಡಾಡಿ ಲೆಕ್ಕಕ್ಕೆ ಉತ್ತರವನ್ನು

ತಲೆಯಲ್ಲಿ ಹುಡುಕಿದಾಗ ಏನೋ ಉತ್ತರ ಹೊಳೆದಂತಾಯಿತು. ಮೇಲೆ ಬಂದು ತಲೆಗೆ ಹೊಳೆದ ನನ್ನ ರೀತಿಯನ್ನು ಪ್ರಯೋಗಮಾಡಿ ನೋಡಿದರೆ ಉತ್ತರ ಬಂತು ಅವರೆಲ್ಲರೂ ಬೆರಗಾದರು. ಆಗ ನಾನು ಆನಂದವಾದೆನು. ಎಲ್ಲ ವಿಷಯಗಳನ್ನು ಸ್ವಂತ ತಿಳಿದುಕೊಳ್ಳುವ ಈ ಹವ್ಯಾಸದಿಂದ ನನ್ನ ಅಭ್ಯಾಸಕ್ಕೆ ಕಳೆಯೇರಿತು." ಎಂದು ಸ್ಮರಿಸಿಕೊಳ್ಳುತ್ತಾರೆ. ಹೀಗೆ ಸ್ವಂತ ಪ್ರಯತ್ನಿಸಿದಾಗ ಬೇಕಾದ ವಿಷಯವನ್ನು ತಿಳಿಯಬಹುದೆಂಬ ಆತ್ಮ ವಿಶ್ವಾಸ ಅವರದು. ಇದನ್ನು ಜೀವನದುದ್ದಕ್ಕೂ ಅವರು ಅಳವಡಿಸಿಕೊಂಡರು. ಇದಕ್ಕೆ ಇನ್ನೊಂದು ಉದಾಹರಣೆಯನ್ನು ನಾವು ನೋಡಬಹುದು.

ಪ್ರೊ.ಭೂಸನೂರಮಠ ಅವರ ದ್ವಿತೀಯ ಪುತ್ರ ಸುಭಾಸ ಅವರು ಗಣಿತ ವಿಷಯದಲ್ಲಿ ಪಿಎಚ್.ಡಿ. ಮಾಡುತ್ತಿದ್ದರು. ಅವರಿಗೆ ಡಾ. ಸಿಂಗ್ ಅವರು ಮಾರ್ಗದರ್ಶಕರಾಗಿದ್ದರು ಇದಾದ ಕೆಲವೇ ದಿನದಲ್ಲಿ ಡಾ. ಸಿಂಗ್ ಅವರು ಅಮೇರಿಕೆಗೆ ಹೋಗುವ ಸಂದರ್ಭಬಂತು. ಹೀಗಾಗಿ ಎರಡು ವರ್ಷ ಸುಭಾಸ ಅವರಿಗೆ ಅಭ್ಯಾಸನಿಂತು ಹೋಗುವ ಭಯವಾಯಿತು. ಇದನ್ನು ತಿಳಿದ ಭೂಸನೂರಮಠ ಅವರು ತಮ್ಮ ಮಗನನ್ನು ಕರೆದು ನೀನು ನಿನ್ನ ಅಭ್ಯಾಸವನ್ನು ನಿಲ್ಲಿಸಬೇಡ ಸ್ವಪ್ರಯತ್ನದಿಂದ ಅದನ್ನು ಮುಂದುವರೆಸು ಎಂದು ಪ್ರೇರೆಪಿಸಿದರು. ಸುಭಾಸ ಅವರೂ ಆಸ್ಥೆಯಿಂದ ಅಧ್ಯಯನ ಮಾಡಿ ಎರಡು ವರ್ಷ ಪೂರ್ವ ಸಿದ್ಧತೆ ಮಾಡಿಕೊಂಡರು ಮುಂದೆ ಡಾ. ಸಿಂಗ್ ಅವರ ಸಲಹೆಯ ಮೇರೆಗೆ ಡಾ. ಗೋಪಾಲಕೃಷ್ಣ ಅವರ ಮಾರ್ಗದರ್ಶನದಲ್ಲಿ ತಮ್ಮ ಪಿಎಚ್.ಡಿ. ಪಡೆದರು. ಹೀಗೆ ಪ್ರೊ.ಭೂಸನೂರಮಠರವರು ಬಾಲ್ಯದಲ್ಲಿ ಅಳವಡಿಸಿಕೊಂಡ ಪ್ರಯತ್ನಶೀಲತೆಯನ್ನು ಕೊನೆಯವರೆಗೂ ಉಳಿಸಿಕೊಂಡು ಬಂದರು ಅದನ್ನು ತಮ್ಮ ಮಕ್ಕಳಿಗೂ ತುಂಬಲು ಪ್ರಯತ್ನಿಸಿದರು.

1931 ರಲ್ಲಿ ಧಾರವಾಡ ಜಿಲ್ಲೆಗೆ ಕರ್ನಾಟಕ ಕಾಲೇಜ ಮಾತ್ರ ಪರೀಕ್ಷಾ ಕೇಂದ್ರವಾಗಿತ್ತು ಅದನ್ನು ಮುಂಬೈ ವಿಶ್ವವಿದ್ಯಾಲಯ ಮ್ಯಾಟ್ರಿಕ್ ಪರೀಕ್ಷೆಯನ್ನು ನಡೆಸುತ್ತಿತ್ತು ಅದರ ಫಲವಾಗಿ ಇವರು ಆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

## ಉನ್ನತ ಶಿಕ್ಷಣ

ಮ್ಯಾಟ್ರಿಕ್ ಪರೀಕ್ಷೆಗೆ ಕರ್ನಾಟಕ ಕಾಲೇಜಿಗೆ ಬಂದಾಗಲೇ ಆ ಕಾಲೇಜು ಇವರನ್ನು ಆಕರ್ಷಿಸಿತು. ಇಲ್ಲಿಯೇ ತಮ್ಮ ಶಿಕ್ಷಣವನ್ನು ಮುಂದುವರೆಸಲು ಅಪೇಕ್ಷೆ ಪಟ್ಟು ಪ್ರಥಮ ವರ್ಷದ ಆರ್ಟ್ಸ್ ವರ್ಗಕ್ಕೆ ಸೇದಿದರು ಒಂದು ಚಿಕ್ಕ ಕೋಣೆಯಲ್ಲಿ ವಾಸ. ಎಸ್.ಎಫ್. ಬೆಂತೂರ ಇವರೊಡನೆ ಇದ್ದರು. ಹಿರಿಯರಾದ ಬೆಂತೂರು ಭೂಸನೂರಮಠ ಅವರನ್ನು ತಮ್ಮ ಸಹೋದರನಂತೆ ಪ್ರೇಮದಿಂದ ಕಂಡರು.

ಇಲ್ಲಿ ಒಂದು ಗಮನಾರ್ಹ ವಿಷಯ ಭಾಸನ ಸ್ವಪ್ನವಾಸವ ದತ್ತ, ಕಾಳಿದಾಸನ ಮೇಘಧೂತ ಮತ್ತು ಸಂಸ್ಕೃತವನ್ನು, ಅಭ್ಯಾಸ ಮಾಡಬೇಕಾಯಿತು. ಆ ಪ್ರಸಂಗವನ್ನು ಪ್ರೊ.ಭೂಸನೂರಮಠರು ಹೀಗೆ ಹೇಳುತ್ತಾರೆ ನಾನು ಇಲ್ಲಿಯೂ ನನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡೆ ಅಭ್ಯಾಸ ನಡೆಸಿದೆ. ಈ ನಾಟಕ ಖಂಡ ಕಾವ್ಯ ಮತ್ತು ಸಂಸ್ಕೃತ ಸಂಗ್ರಹಗಳನ್ನು ಕಾಲೇಜಿನಲ್ಲಿ ಶಿಕ್ಷಕರು ಕಲಿಸಿದರೂ ಆ ಶಿಕ್ಷಣ ಹೆಚ್ಚಾಗಿ ನನ್ನ ತಲೆಯೊಳಗೆ ಹೋಗುತ್ತಿರಲಿಲ್ಲ ಸಂಸ್ಕೃತಿ ವ್ಯಾಕರಣದ ನಿಕಟ ಪರಿಚಯ ನನಗಿಲ್ಲದಿದ್ದರೂ ಈ ಎಲ್ಲಾ ಗ್ರಂಥಗಳನ್ನು ನಾನೇ ಮೊದಲಲ್ಲಿ ಓದಬೇಕು ಮೂಲ ಪಠ್ಯಗಳ ತಿಳಿವಳಿಕೆಯಾಗದಿದ್ದರೆ ಅದಕ್ಕೆ ಬರೆದ ಸಂಸ್ಕೃತ ಟೀಕೆ ಟಿಪ್ಪಣಿಗಳನ್ನು ಓದಿ ತಿಳಿದುಕೊಳ್ಳಬೇಕು ಕಾಲೇಜಿನ ಶಿಕ್ಷಣದುದ್ದಕ್ಕೂ ಈ ಸ್ವಂತ ತಿಳುವಳಿಕೆಯ ಕ್ರಮವನ್ನು ಛಲದಿಂದ ಉಳಿದ ವಿಷಯಗಳ ಪಠ್ಯಪುಸ್ತಕಗಳಿಗೂ ಹಬ್ಬಿಕೊಂಡಿತು. ಹೀಗೆ ಸ್ವತಂತ್ರ್ಯ ವಿಚಾರ ಮಾಡುವ ಪ್ರವೃತ್ತಿಗೆ ಅದೇ ವರ್ಷ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ಆಗಮಿಸಿದ ಮಹಾವ್ಯಕ್ತಿ ಸಿ.ಆರ್. ರೆಡ್ಡಿ ಅವರಿಂದ ಹೆಚ್ಚಳವಾಯಿತು. ಅವರು ತಮ್ಮ ಅಂದಿನ ಅತಿಥಿ ಭಾಷಣದುದ್ದಕ್ಕೂ ಸ್ವಾತಂತ್ರ್ಯದ ಬಗ್ಗೆ ಮಾತನಾಡಿದ ವಿಷಯ ಇಂದಿಗೂ ನನ್ನ ವಿದ್ಯಾಬುದ್ಧಿಗೆ, ಮನಕ್ಕೆ ಬ್ರಹ್ಮಸೂತ್ರವಿದ್ದಂತಿದೆ. ಕಲಿಸಿದರೆ ತಿಳಿದುಕೊಂಡು ಕಲಿಯುವ ಸ್ವಭಾವ ನನ್ನದಲ್ಲ ನನ್ನೊಳಗಿಂದಲೇ ನನಗೆ ತಿಳವಳಿಕೆ ಮೂಡಬೇಕು. ಇದು ನನ್ನ ವಿಶ್ವಾಸ, ಏಕೈಕ ನಿಷ್ಠೆ ಎಂದು ಹೇಳುತ್ತಾರೆ.

1932 ರಲ್ಲಿ ಪರೀಕ್ಷೆ ಪಾಸಾಗಿ ಇಂಟರ ಮೀಡಿಯಟ್ ವರ್ಗಕ್ಕೆ ಬಂದರು. ಹೆಚ್ಚು ಅಂಕಗಳನ್ನು ಪಡೆದಿದ್ದರಿಂದ ಫೀ ಮಾಫಿಆಗಿ, ಸಿರಸಂಗಿ ದೇಸಾಯಿಯವರ ಶಿಷ್ಯವೇತನವೂ ದೊರೆಯಿತು, ಈ ಮಧ್ಯ ಅಸ್ತಮಾದಿಂದ ತಂದೆಯನ್ನು ಕಳೆದುಕೊಂಡರು. ತಾಯಿಯ ಧೈರ್ಯದಿಂದ ಶಿಕ್ಷಣವನ್ನು ಮುಂದುವರಿಸಿದರು.

ಅಂತೂ ಇಂಟರ ಪರೀಕ್ಷೆಯಲ್ಲಿ 7 ನೇಯ ರ್‍ಯಾಂಕ್ ಪಡೆದು ಪಾಸಾದರು ಪರಿಣಾಮವಾಗಿ ಕಾಲೇಜಿನ ಮುಕ್ತ ಶಿಷ್ಯವೇತನ ತಿಂಗಳಿಗೆ ಹತ್ತು ರೂಪಾಯಿ ದೊರೆಯಿತು. ಬಿ.ಎ. ವರ್ಗಕ್ಕೆ ಪ್ರವೇಶ ಪಡೆದರು. ಸೂಟಿಯಲ್ಲಿ ಮುಖ್ಯ ವಿಷಯವಾಗಿದ್ದ ಕನ್ನಡದಲ್ಲಿದ್ದ ವಿಕ್ರಮಾರ್ಜುನ ವಿಜಯವನ್ನು ಯಾರ ಸಹಾಯವಿಲ್ಲದೆ ಓದಿ ಮುಗಿಸಿದರು. ಇದು ಇವರ ಮನೋಬಲವನ್ನು ಮತ್ತಷ್ಟು ಹೆಚ್ಚಿಸಿತ್ತು .ಗುರುಗಳೊಡನೆ ಹಲವಾರು ಬಾರಿ ಚಿಂತನೆ ಮಾಡುತ್ತಿದ್ದರು. ವ್ಯಾಕರಣ ವಿಷಯ ಕಲಿಸುವ ಪ್ರಾಧ್ಯಾಪಕರೊಂದಿಗೆ ವರ್ಗದಲ್ಲಿಯೇ ಚರ್ಚೆನಡೆಸುತ್ತಿದ್ದರು. ಕನ್ನಡ ಪ್ರಾಧ್ಯಾಪಕರಾಗಿದ್ದ ಎ.ಟಿ. ಸಾಸನೂರ ಅವರು ಅಂದು ಹೆಸರುಗಳಿಸಿದ್ದರು. ಇವರು ವರ್ಗದಲ್ಲಿ ಕಾವ್ಯ ವ್ಯಾಕರಣ, ಛಂದಸ್ಸು ಮುಂತಾದ ವಿಷಯಗಳನ್ನು ಕಲಿಸುತ್ತಿದ್ದಾಗ ಅವರಿಗೆ ಮತ್ತು ಭೂಸನೂರಮಠರವರಿಗೆ ಆಗಾಗ ಸ್ವಲ್ಪ ಚಕಮಕಿಯಾಗುತ್ತಿತ್ತು. ಅವರು ಅರ್ಥಮಾಡಿಕೊಂಡು ವಿವರಿಸುತ್ತಿರುವಾಗ ಆ ವಿವರಣೆ ಅಷ್ಟೊಂದು ಸರಿಯಲ್ಲವೆಂದು ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಯಾಗಿದ್ದರು. ಅವರದೇ ಸರಿಯೆಂದು ಅವರನ್ನು ಬೆಂಬಲಿಸುತ್ತಿದ್ದ ವಿದ್ಯಾರ್ಥಿಗಳು ಒಬ್ಬಿಬ್ಬರು ಎಷ್ಟೋ ಸಾರಿ ಇವರ ವಿಶ್ಲೇಷಣೆ ಸರಿ ಎನಿಸಿದಾಗ ಗುರುಗಳು ಹೌದೆಂದು ಒಪ್ಪಿಕೊಳ್ಳುವ ದೊಡ್ಡಮನಸ್ಸನ್ನು ತೋರುತ್ತಿದ್ದರು. ಬೆಂಬಲಿಸಿದ ವಿದ್ಯಾರ್ಥಿಗಳು ಮುಖ ಭಂಗಿತರಾಗುತ್ತಿದ್ದರು. ತಪ್ಪನ್ನು ಬೆಂಬಲಿಸುವ ಅವರ ಧೋರಣೆ, ಮುಂದೆ ಪರೀಕ್ಷೆಯಲ್ಲಿ ಗುರುಗಳ ಕೃಪಾಕಟಾಕ್ಷ ತಮ್ಮ ಮೇಲಿರಲೆಂದೆ

ಅವರ ಮುಂಧೋರಣೆ, ಅನ್ಯಾಯವಾಗಿ ಕೃಪಾಕಾಂಕ್ಷೆಯನ್ನು ಮಾಡುವ ಸಣ್ಣಮನಕ್ಕೆ ಎಂದೂ ಒಪ್ಪುತ್ತಿರಲಿಲ್ಲ. ಇಂದಿಗೂ ಈ ಕರ್ಕಶ ನನ್ನಲ್ಲಿ ಉಳಿದಿದೆ. ಇದರಿಂದ ನನಗೆ ಹಾನಿ ಹೆಚ್ಚು, ಲಾಭ ಕಡಿಮೆ. ಆದರೂ ಅದು ನನಗೆ ಗೌಣ, ನನ್ನ ಸ್ವತಂತ್ರ ವ್ಯಕ್ತಿತ್ವಕ್ಕೆ ಭಂಗ ಹೀಗೆ ತಮ್ಮಲ್ಲಿ ಕರ್ಕಶ ಪ್ರವೃತ್ತಿ, ನಿಷ್ಠುರ ಮನೋಭಾವ ಸ್ವತಂತ್ರ ವ್ಯಕ್ತಿತ್ವ ರೂಪುಗೊಂಡ ಬಗೆಯನ್ನು ಭೂಸನೂರಮಠ ನೆನಪಿಸಿಕೊಳ್ಳುತ್ತಾರೆ.

ಬಿ.ಎ ವರ್ಗದ ಕೊನೆಯ ಪರೀಕ್ಷೆಯಲ್ಲಿಯೂ ಭೂಸನೂರಮಠ ಅವರು ಮುಂಬೈ ವಿಶ್ವವಿದ್ಯಾಲಯಕ್ಕೆ ಪ್ರಥಮರಾಗಿ ಪಾಸಾದರು. ಇದರಿಂದ ಅಂದು ಅತ್ಯಂತ ಪ್ರಸಿದ್ಧವಾಗಿದ್ದ ದಕ್ಷಿಣ ಫೆಲೋಶಿಫ್ ಇವರಿಗೆ ದೊರೆಯಿತು. ಜೊತೆಗೆ ಅಂದಿನ ಮುಂಬೈ ಸರಕಾರದಲ್ಲಿ ಶಿಕ್ಷಣ ಮಂತ್ರಿಗಳಾಗಿದ್ದ ಸರ್ ಸಿದ್ಧಪ್ಪ ಕಂಬಳಿಯವರು ಇವರನ್ನು ಸನ್ಮಾನಿಸಿದ್ದು ವಿಶೇಷ

ಮುಂದೆ ಎಂ.ಎ. ಗೆ ಪ್ರವೇಶ ಪಡೆದರು, ಅಂದು ಎಂ. ಎ. ಗೆ ಪ್ರಾಧ್ಯಾಪಕರು ಕಡ್ಡಾಯವಾಗಿ ಪಾಠ ಮಾಡುತ್ತಿರಲಿಲ್ಲ, ಕೇವಲ ಮಾರ್ಗದರ್ಶನ ಮಾಡುತ್ತಿದ್ದರು. ಎಂ.ಎ. ಸೀನಿಯರ ಅಭ್ಯಾಸಕ್ಕಾಗಿ ಮಾರ್ಗದರ್ಶನ ಮಾಡಲು ಧಾರವಾಡದಲ್ಲಿ ಪ್ರಾಧ್ಯಾಪಕರು ಇಲ್ಲದೇ ಇದ್ದುದರಿಂದ ಭೂಸನೂರಮಠ ಅವರು ಅನಿವಾರ್ಯವಾಗಿ ಕೊಲ್ಲಾಪುರಕ್ಕೆ ಪ್ರೊ. ಕೆ.ಜಿ. ಕುಂದಣಗಾರ ಅವರ ಹತ್ತಿರ ಹೋದರು. ಕುಂದಣಗಾರ ಅವರು ಆಗ ರಾಜಾರಾಮ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಭೂಸನೂರಮಠರು ಕೊಲ್ಲಾಪೂರದಲ್ಲಿ ಚಿತ್ರದುರ್ಗದ ಜಗದ್ಗುರು ಜಯದೇವ ಮಹಾಸ್ವಾಮಿಗಳ ಹಾಸ್ಟೆಲಿನಲ್ಲಿದ್ದು, ಖಾನಾವಳಿಯಲ್ಲಿ ಊಟ ಮಾಡಿಕೊಂಡು ವ್ಯಾಸಂಗವನ್ನು ಮುಂದುವರೆಸಿದರು. ಗುರುಗಳಾದ ಕುಂದಣಗಾರ ಅವರ ಸಾತ್ವಿಕ, ಸರಳ, ಉದಾರ, ವಿನಮ್ರತೆಗೆ ಮಾರು ಹೋದರು. ಅವರ ಬಗೆಗೆ ಬರೆಯುತ್ತ "ಯಾವಾಗಲೂ ಮೊಗದಲ್ಲಿ ನಗೆ, ಮಾತಿನಲ್ಲಿ ಜೇನು, ಕೈಯಲ್ಲಿ ಉಪಕಾರ, ಇಂಥ ಸಾತ್ವಿಕ ವ್ಯಕ್ತಿಗಳ ವಂಶ ಇಂದು ಕ್ರಮೇಣ ಮಾಯವಾಗುತ್ತ ನಡೆದಿದೆಯೆಂದು ಹೇಳಬಹುದು. ಕಾಲೇಜಿನ ಕೆಲಸ ಮುಗಿಸಿಕೊಂಡು ಮನೆಗೆ ಬರುವಾಗ ನನಗೆ ಉಪಯುಕ್ತವಾಗುವ ನಾಲ್ಕೆಂಟು ದೊಡ್ಡ ದೊಡ್ಡ ಪುಸ್ತಕಗಳನ್ನು ಹೊತ್ತು ಕೊಂಡು ನಮ್ಮ ಹಾಸ್ಟೆಲಿಗೆ ಬಂದು ಆ ಗ್ರಂಥಗಳಲ್ಲಿ ನಾನು ಓದಬೇಕಾದ ವಿಷಯಗಳನ್ನೆಲ್ಲ ಗುರುತು ಹಾಕಿಕೊಟ್ಟು ತಮ್ಮ ಮನೆಗೆ ಹೋಗುತ್ತಿದ್ದರು. ಎರಡು, ಮೂರು, ನಾಲ್ಕು ದಿನಗಳಲ್ಲಿ ಒಮ್ಮೆಯಾದರೂ ಸಾಯಂಕಾಲ ನಾನು ಅವರ ಮನೆಗೆ ಹೋಗಿ ಅವರ ಸಲಹೆ ಪಡೆದು ಬರುತ್ತಿದ್ದೆ ಬಹುಮಟ್ಟಿಗೆ ನನಗೆ ಕೊಟ್ಟಗ್ರಂಥಗಳನ್ನು ತಿರುಗಿ ವಾಚನಾಲಯಕ್ಕೆ ಮುಟ್ಟಿಸುವವರೂ ಅವರೆ. ಅಭ್ಯಾಸದಲ್ಲಿ ಮುಳುಗಿದ್ದ ನನ್ನ ಸಮಯ ವಾಚನಾಲಯದಲ್ಲಿ ವ್ಯರ್ಥವಾಗಿ ಕಳೆದು ಹೋಗಬಾರದೆಂಬುದೆ ಗುರುಗಳಾದ ಕುಂದಣಗಾರರ ಆಕಾಂಕ್ಷೆಯಾಗಿತ್ತು. ಸಂಶೋಧನೆ ಕ್ಷೇತ್ರದಲ್ಲಿ ಅವರಿಗೆ ಅಪಾರ ಆಸಕ್ತಿ ಈ ಕ್ಷೇತ್ರದಲ್ಲಿ ನನ್ನ ಶಕ್ತಿಗನುಗುಣವಾಗಿ ಅವರಿಗೆ ಸೇವೆ ಸಲ್ಲಿಸಿದೆ. ಈ ಸೇವೆ ಅವರ ಶಿಷ್ಯ ವಾತ್ಸಲ್ಯಕ್ಕೆ ಎಂದೂ ಸಮನಾಗದು." ಎಂದು ನುಡಿದಿದ್ದಾರೆ.

_1935 ರಲ್ಲಿ ಎಂ. ಎ. ಪರೀಕ್ಷೆಗೆ ಹಾಜರಾಗಲು ಮುಂಬೈಗೆ ಹೋದರು ಏಕೆಂದರೆ ಆಗ ಅದೊಂದೇ ಪರೀಕ್ಷಾ ಕೇಂದ್ರವಾಗಿತ್ತು. ವಿಶ್ವ ವಿದ್ಯಾಲಯಕ್ಕೆ ಪ್ರಥಮಸ್ಥಾನವನ್ನು ಪಡೆದು ಪಾಸಾದರು. ಅಲ್ಲಿ ನೂರಕ್ಕೆ ಅರವತ್ತಮೂರು ಗುಣಗಳನ್ನು ಪಡೆದಿದ್ದರು.

## ಅಧ್ಯಾಪಕರಾಗಿ

ಎಂ.ಎ. ಪಾಸಾದೊಡನೆ ಕರ್ನಾಟಕ ಕಾಲೇಜಿನಲ್ಲಿ ನೌಕರಿ ಮಾಡಬೇಕೆಂಬ ಆಸೆ ಬಲವಾಗಿದ್ದಿತು. ಆದರೂ ಅವರು ನೌಕರಿಗಾಗಿ ಸಾಕಷ್ಟು ಅಲೆದಾಡಬೇಕಾಯಿತು. ಲಿಂಗರಾಜ ಕಾಲೇಜಿನಲ್ಲಿ ಸಂಬಳವಿಲ್ಲದೆ ದುಡಿದರು. 1939ರಲ್ಲಿ ಪ್ರೊ. ಸ.ಸ. ಮಾಳವಾಡ ಅವರು ತಾವು ಕಾರ್ಯ ಮಾಡುತ್ತಿದ್ದ ಕರ್ನಾಟಕ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕ ಜಾಗೆ ಸೃಷ್ಟಿಸಿ ಭೂಸನೂರಮಠ ಅವರು ಅದಕ್ಕೆ ಸೇರುವಂತೆ ಮಾಡಿದರು. ಆಗ 75 ರೂ. ವೇತನ ದೊರೆಯುತ್ತಿತ್ತು. ಪ್ರೊ. ಶಿ.ಶಿ. ಬಸವನಾಳರ ಬಂಗಲೆಯ ಹೊರಭಾಗದಲ್ಲಿ ವಾಸ; ಅಲ್ಲಿ ಹಾಲಭಾವಿಯವರು, ಜೆ.ಎ. ಹಿರೇಮಠ, ಬುದ್ಧಯ್ಯನವರುಪುರಾಣಿಕ, ಪ್ರೊ. ಶಿ.ಶಿ. ಬಸವನಾಳ, ಮಾಜಿ ಮಂತ್ರಿ, ಕೆ.ಎಫ್. ಪಾಟೀಲ ಮುಂತಾದವರೊಂದಿಗೆ ಚರ್ಚೆ ನಡೆಸುವ ಯೋಗವೂ ದೊರೆಯಿತು. ಹೀಗೆಯೇ ಮೂರು ವರ್ಷ ಕಳೆದರು. ಆ ಸಮಯದಲ್ಲಿ ಮತ್ತೊಂದು ತೊಂದರೆ ಎದುರಾಯಿತು. ಮಂದದೃಷ್ಟಿಯು ಇವನ್ನು ಕಾಲೇಜಿನಲ್ಲಿ ಮುಂದುವರಿಯದಂತೆ ಮಾಡಿತು. ಡಾ. ಡಿ.ಸಿ. ಪಾವಟೆ ಅವರ ಪ್ರಯತ್ನದಿಂದ ಒಂದು ವರ್ಷ ಮುಂದುವರೆದರೂ ಅದು ತಾತ್ಪೂರ್ತಿಕವಾಯಿತು. ಇದೆ ಸಮಯದಲ್ಲಿ ನಾಲ್ಕು ಮಕ್ಕಳನ್ನು ಹೆತ್ತ ಇವರ ಹೆಂಡತಿಯು ಕ್ಷಯದಿಂದ ನಿಧನರಾದರು.

ಈ ಎಲ್ಲ ಕಷ್ಟಗಳನ್ನು ಸಹಿಸಿಕೊಂಡು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ 1943 ರಲ್ಲಿ ಅಧ್ಯಾಪಕರಾಗಿ ಸೇರಿಕೊಂಡರು. ಆಗ ಡಾ. ಎಸ್.ಜಿ. ನಂದೀಮಠ ಅವರು ಅಲ್ಲಿ ಪ್ರಾಚಾರ್ಯರಾಗಿದ್ದರು. ಕೆ.ಎಲ್. ಇ. ಸೊಸೈಟಿಯ ಲಿಂಗರಾಜ ಕಾಲೇಜು ಶಿಕ್ಷಕ ವೃತ್ತಿಯ ಬೆಳವಣಿಗೆಗೆ ಕರ್ನಾಟಕ ಕಾಲೇಜಿಗಿಂತ ಹೆಚ್ಚು ಒಳ್ಳೆಯದೆಂಬ ಭಾವನೆ ಅವರದಾಗಿತ್ತು. ಇದಕ್ಕೆ ಅವರು ಕೊಡುವ ಕಾರಣ ಹೀಗಿದೆ. "ಕರ್ನಾಟಕ ಕಾಲೇಜಿನಲ್ಲಿ ಗೌರಮೆಂಟ್ ಕಾಲೇಜ ಎಂಬ ಹೆಮ್ಮೆಹೆಚ್ಚು ಮತ್ತು ಸಮ, ವಿಷಮ ಭಾವದ ರೋಗ ಉಲ್ಬಣ ಇಲ್ಲಿ ಎರಡು ಸಾವಿರ ರೂಪಾಯಿಯ ಪ್ರಿನ್ಸಿಪಾಲರಿಗೂ 75 ರೂಪಾಯಿ, ನನಗೂ ಇವರಿಗೂ ಗಾವುದ ದೂರ, ಆದರೆ ಕೆ.ಎಲ್. ಇ ಸೊಸಾಯಿಟಿಯ ಲಿಂಗರಾಜ ಕಾಲೇಜು ಶಿಕ್ಷಕರಲ್ಲಿ ಆದಷ್ಟು ಸಮತಾಭಾವ. ಶಿಕ್ಷಕರ ಪಗಾರ ಬಹಳ ಹೆಚ್ಚುಕಡಿಮೆ ಇಲ್ಲದೆ ಇದಕ್ಕೆ ಕಾರಣವಿರಬಹುದು. ಸೊಸೈಟಿಯ ಆಜೀವ ಸದಸ್ಯರಾಗಿದ್ದ ಪ್ರಿನ್ಸಿಪಾಲರಿಗೆ 150 ರೂಪಾಯಿ ನನ್ನದು 125 ಇಲ್ಲಿಯ ಮತ್ತೊಂದು ಕಲ್ಯಾಣ ಕಾರಕ ಪರಿಸ್ಥಿತಿಯೆಂದರೆ ವಿದ್ಯಾರ್ಥಿಗಳು ಸಂಕೋಚವಿಲ್ಲದೆ ಶಿಕ್ಷಕರ ಕಡೆ ಹೋಗಿ ಬರಬಹುದಿತ್ತು. ಈ ಸಮತಾಭಾವವು ವ್ಯಕ್ತಿತ್ವ ಹಿಗ್ಗಲು ಸಾಕಷ್ಟು ಅವಕಾಶ ದೊರೆಯಿತು. ನನಗೆ ಇಲ್ಲಿ ಪ್ರೊ. ವೈ.ಜಿ ಕುಲಕರ್ಣಿಯವರು

ಕೊಟ್ಟ ವಿಷಯಗಳನ್ನೆಲ್ಲ ನಾನೇ ಕಲಿಸುತ್ತಿದ್ದೆ ಹುಡಗರಲ್ಲಿ ಕಲಿಯಬೇಕೆಂಬ ಉತ್ಸಾಹ, ನಮಗೆ ಕಲಿಸಬೇಕೆಂಬ ಉತ್ಸಾಹ" ಎನ್ನುತ್ತಾರೆ. ಇಂಥ ಉತ್ತಮ ವಾತಾವರಣದಲ್ಲಿ ಒಳ್ಳೆಯ ಸಂತೃಪ್ತಿಯಿಂದ 23 ವರ್ಷಗಳ ಕಾಲ ಸಮರ್ಥ ಶಿಕ್ಷಕರಾಗಿ ಕಾರ್ಯಮಾಡಿದರು.

## ವೈವಾಹಿಕ ಜೀವನ :

17 ನೆಯ ವಯಸ್ಸಿನಲ್ಲಾದ ತಮ್ಮ ಲಗ್ನದ ವಿಷಯವಾಗಿ ಬರೆದ ಈ ಮಾತುಗಳನ್ನು ಇಲ್ಲಿ ನೋಡಬಹುದು." ನನಗೆ ಹದಿನೇಳು ವರ್ಷ ತುಂಬಿರಬಹುದು. ತಂದೆಯವರಿಗೆ ನನ್ನ ಲಗ್ನ ಮಾಡುವ ಉತ್ಸಾಹ; ಹುಬ್ಬಳ್ಳಿಯ ಬಳಿ ಕೂಸೂಗಲ್ಲಿನ ಕನ್ಯೆಯ ತಾಯಿಯ ತವರೂರವರು ಕನ್ಯ ನೋಡಿದರು. ತಂದೆ ತಾಯಿಯವರಿಗೆ ಆಕೆ ಮನಸ್ಸಿಗೆ ಬಂದಳು ನಮ್ಮ ಮನೆತನವನ್ನು ನೋಡಿಕೊಳ್ಳಲಿಕ್ಕೆ ಬಂದ ಕನ್ಯೆಯ ತಂದೆ ಮತ್ತು ಹೆಣ್ಣಿನವರಿಗೆ ಬೀಗತನ ಸರಿಯೆನಿಸಿದರೂ ವರನ ವಿಷಯಕ್ಕೆ ಅವರಿಗೆ ಸಂದೇಹ, ಸಂಕೋಚ, ಅವರ ಮುಂದೆ ನಾನು ಹಾಡಿದೆ; ಪಿಯಾನೋ ಬಾರಿಸಿದೆ. ಮರಾಠಿ, ಇಂಗ್ಲೀಷ ಓದಿದೆ, ಹಿರಿಯರು ಕಾವ್ಯ ಮತ್ತು ಸಂಸ್ಕೃತ ಅಭ್ಯಾಸದ ಪರಿಚಯ ಮಾಡಿ ಕೊಟ್ಟರು. ಆದರೆ ಇದಕ್ಕೇನು ಮಹತ್ವ ಕೊಡಲಿಲ್ಲ, ಏಕೆಂದರೆ ಅವರ ದೃಷ್ಟಿಯಲ್ಲಿ ನಾನು ಹಳ್ಳಿಯಲ್ಲಿ ಹುಂಬನಾಗಿದ್ದೆ. ಆದರೂ ಇಂಥ ಮನೆತನದವರ ಸಿಗಲಿಕ್ಕಿಲ್ಲವೆಂಬ ಭಯದಿಂದ ಅವರು ಒಪ್ಪಿಕೊಂಡರು. ಮದುವೆಯಾಯಿತು ಇದರಿಂದ ತಮ್ಮ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದರು.

ಪತ್ನಿ ಪಾರ್ವತಿದೇವಿಯ ಅಣ್ಣಂದಿರು ಮ್ಯಾಟ್ರಿಕ್ ಪರೀಕ್ಷೆಯಲ್ಲಿದ್ದರು. ತಾವು ಈ ರೀತಿ ಮಧ್ಯದಲ್ಲಿ ಶಿಕ್ಷಣ ನಿಲ್ಲಿಸಿದ್ದನ್ನು ಮುಂದುವರೆಸಲು ಅವರ ಪತ್ನಿ ಸಲಹೆ ನೀಡಿದರು. ಈ ಸಲಹೆಯನ್ನು ಒಪ್ಪಿಕೊಳ್ಳದಿದ್ದರೆ ತಮ್ಮ ಹೆಂಡತಿಯ ಇಚ್ಛೆಇಡೇರಿಸಲು ಆಗುವದಿಲ್ಲವೆಂದು ಅವರಿಗೆ ಆತಂಕ. ಇದೇ ಸಮಯದಲ್ಲಿಯೇ ಈ ಹಿಂದೆ ಕೂಸೂಗಲ್ಲಿನ ಸಭ್ಯಗೃಹಸ್ಥನೊಬ್ಬನ ಮಾತು - ಇವರು ಮತ್ತೆ ಶಿಕ್ಷಣವನ್ನು ಮುಂದುವರೆಸುವಂತೆ ಮಾಡಿತು. ಇಲ್ಲದಿದ್ದರೆ ಪ್ರೊ. ಭೂಸನೂರಮಠ ಅವರು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿರಲಿಲ್ಲ. ಅವರಿಂದ ಕನ್ನಡ ಸಾಹಿತ್ಯಕ್ಕೆ ಅಮೋಘ ಸೇವೆ ದೊರೆಯುತ್ತಿರಲಿಲ್ಲ

ಮಾವನ ಮನೆಯಲ್ಲಿಯೇ ಇದ್ದುಕೊಂಡು ಇವರು ಶಿಕ್ಷಣವನ್ನು ಮುಂದುವರೆಸಲು ಇವರ ಪತ್ನಿಯೇ ಕಾರಣ. ಮೃದುಸ್ವಭಾವದ ಪಾರ್ವತಿದೇವಿಯ ಮೇಲೆ ಮನೆಯರೆಲ್ಲರ ಗಾಢವಾದ ಪ್ರೇಮ. ಇದೇ ರೀತಿಯ ಪ್ರೇಮ ಪ್ರೊ. ಭೂಸನೂರಮಠ ಅವರಿಗೂ ಆ ಮನೆಯಲ್ಲಿ ದೊರೆಯಿತು. ಮೊದಮೊದಲು ಅದು ಹಂಗಿನಮನೆ ಎಂಬ ಭಾವನೆ ಮನದಲ್ಲಿ ಮೂಡಿದರೂ, ಬೀಗರ ಮನೆಯವರೆಲ್ಲ ಇವರೊಡನೆ ನಡೆದುಕೊಂಡ ರೀತಿ, ನೀಡಿದ ಗೌರವಾದರಗಳಿಂದಾಗಿ ಅಭ್ಯಾಸಕ್ಕೆ ಮಾನಸಿಕ ಶಾಂತಿ ಮನೆಯಲ್ಲಿ ದೊರಕಿತು. ಮಾವನವರ ಮಾತಿನಿಂದ ಸ್ಫೂರ್ತಿ ಪಡೆದು ಶಿಕ್ಷಣ ಮುಂದುವರೆಸಿ ಅವರು ಅದರಲ್ಲಿ ಯಶ ಪಡೆದರು.

1933 ರಲ್ಲಿ ಹಿರಿಯ ಮಗಳು ಅನ್ನಪೂರ್ಣಾದೇವಿಯ ಜನನವಾಯಿತು. 1936 ರಲ್ಲಿ ರಾಜಶೇಖರ, 1940 ರಲ್ಲಿ ದಾಕ್ಷಾಯಿಣಿ, 1941 ರಲ್ಲಿ ಮಹಾದೇವಿ ಜನಿಸಿದರು. ಅಂದರೆ ಕೇವಲ ಎಂಟು ವರ್ಷಗಳ ಅಂತರದಲ್ಲಿ ನಾಲ್ಕು ಜನ ಮಕ್ಕಳು ಜನಿಸಿದರು. ಈ ಪ್ರಸವದ ಭಾರದಿಂದ ಅವರ ಹೆಂಡತಿಯು ಕ್ಷಯರೋಗಕ್ಕೆ ತುತ್ತಾಗಿ 1942 ರಲ್ಲಿ ತೀರಿಕೊಂಡರು. ಇದೇ ಸಮಯದಲ್ಲಿ ನೌಕರಿ ಕಳೆದುಕೊಂಡ ಚಿಂತೆ, ಭಾರವಾದ ಕುಟುಂಬ, ಮಡದಿಯ ಸಾವು ಇವುಗಳನ್ನೆಲ್ಲ ಅತ್ಯಂತ ಧೈರ್ಯದಿಂದ ಎದುರಿಸಿದರು.

ನಂತರ 1943 ರಲ್ಲಿ ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಕೆಲಸ ದೊರೆಯಿತು. ಆಗ ಇವರಿಗೆ 125 ರೂಪಾಯಿ ತಿಂಗಳಿಗೆ ವರಮಾನ, ತಾವೊಬ್ಬರೆ ಮಕ್ಕಳನ್ನು ಸಾಕಿ ಸಲುಹುವುದು ಕಷ್ಟ ಸಾಧ್ಯವಾಯಿತು. ಅಲ್ಲದೆ ಆ ಮಕ್ಕಳನ್ನು ಪ್ರೀತಿಸುವ ತಾಯಿಯ ಅವಶ್ಯಕತೆ ಇತ್ತು ಈ ಕಾರಣದಿಂದ ಮತ್ತೆ ಲಗ್ನವಾಗಿ ದಾಂಪತ್ಯ ಜೀವನವನ್ನು ನಡೆಸಿಕೊಂಡು ಹೋಗಬೇಕೆಂಬ ವಿಚಾರ ಹೊಳೆಯಿತು.

ಕನ್ಯೆಗಾಗಿ ಎರಡು ವರ್ಷ ಹುಡುಕಾಡಿದರು. ಕೊನೆಗೆ ಕೊಟಬಾಗಿಯ ಹಿರೇಮಠದ ಪಟ್ಟದ ದೇವರಾಗಿದ್ದ ಶ್ರೀ ಷಣ್ಮುಖ ಸ್ವಾಮಿಗಳ ಮಧ್ಯಸ್ಥಿಕೆಯಲ್ಲಿ ಅಲ್ಲಿಯ ಹಿರೇಮಠದ ಗೌರಾದೇವಿಯನ್ನು 1944 ರಲ್ಲಿ ವಿವಾಹವಾದರು. ಬೆಳಗಾವಿಯ ಟಿಳಕವಾಡಿಯ ಅಟ್ಟದ ಮನೆಯೊಂದರಲ್ಲಿ ಇವರ ಸಂಸಾರ ಪ್ರಾರಂಭವಾಯಿತು. ಮೊದಲಿನ ನಾಲ್ಕು ಜನ ಮಕ್ಕಳನ್ನು ತನ್ನ ಸ್ವಂತ ಮಕ್ಕಳಂತೆ ಅತ್ಯಂತ ಪ್ರೀತಿಯಿಂದಲೇ ಗೌರಾದೇವಿಯರು ಬೆಳೆಸಿದರು. ಮನೆಯ ಮುಂದೆ ಎರಡು ವಿಶಾಲವಾದ ಮಾವಿನ ಮರಗಳು, ಅದರ ಅಡಿಯಲ್ಲಿಯೇ ಪ್ರೊ. ಭೂಸನೂರಮಠ ಅವರ ಸಾಹಿತ್ಯ ಚಿಂತನೆ ನಡೆಯುತ್ತಿತ್ತು. ಇದಕ್ಕೆಲ್ಲ ಗೌರಾದೇವಿಯವರು ಸಂಪೂರ್ಣ ಸಹಕಾರ ನೀಡುತ್ತಿದ್ದರು.

ಹಿರಿಯ ಮಗಳು ಅನ್ನಪೂರ್ಣ ಬಿ.ಎಸ್.ಸಿ. ಪರೀಕ್ಷೆಯನ್ನು, ಎರಡನೇಯ ಮಗಳು ದಾಕ್ಷಾಯಿಣಿ ಬಿ.ಎ. ಪರೀಕ್ಷೆಯನ್ನು ಮುಗಿಸಿದರು. ಈ ಮಧ್ಯ ಎರಡನೇಯ ಹೆಂಡತಿ ಗೌರಾದೇವಿಯಿಂದ ಮೂರು ಮಕ್ಕಳ ಜನನವಾಯಿತು. ಹಿರಿಯ ಮಗ ಸುಭಾಸ, ಎರಡನೆಯ ಮಗಳು ವಿಜಯ, ಮೂರನೆಯ ಮಗ ಬಸವರಾಜ. ಇವರೆಲ್ಲರಲ್ಲಿ ಬಸವರಾಜ ಅತ್ಯಂತ ಪ್ರತಿಭಾವಂತನಾಗಿದ್ದ. ಆದರೆ ಆತ ಹನ್ನೊಂದನೆಯ ವಯಸ್ಸಿಗೆ ಕಾಲಿಡುವಷ್ಟರಲ್ಲಿ ಕಾಮಣಿ ರೋಗದಿಂದ ನಿಧನನಾದನು. ಇದು ಭೂಸನೂರಮಠ ಅವರ ಮನದ ಮೇಲೆ ವಜ್ರಾಘಾತದ ಪರಿಣಾಮ ಬೀರಿತು. ಜೀವನದ ಕೊನೆಯವರೆಗೂ ಅವರು ಅವನನ್ನು ಮನದಲ್ಲಿ ತುಂಬಿಕೊಂಡು ಸದಾ ಕೊರಗಿದರು.

ಅನ್ನಪೂರ್ಣ, ದಾಕ್ಷಾಯಿಣಿ ಹಾಗೂ ವಿಜಯ ಈ ಮೂರು ಜನ ಹೆಣ್ಣು ಮಕ್ಕಳನ್ನು ಇವರು ಬೆಳಗಾವಿಯಲ್ಲಿ ನೌಕರಿಯಲ್ಲಿದ್ದಾಗಲೆ ಮದುವೆ ಮಾಡಿಕೊಟ್ಟರು. ಹಿರಿಯ ಮಗ ರಾಜಶೇಖರನ ಮೇಲೆ ಇವರಿಗೆ ಅಪಾರವಾದ ವಿಶ್ವಾಸ, ಆತನಲ್ಲಿರುವ ಜಾಣತನ, ವಿದ್ಯಾ ಬುದ್ಧಿಶಕ್ತಿ ಈ ವಿಶ್ವಾಸಕ್ಕೆ ಕಾರಣವಾಗಿತ್ತು. ತಿಂಗಳಿಗೆ ಕೇವಲ 125 ರೂಪಾಯಿ ಸಂಬಳ, ಹಿರಿದಾದ ಸಂಸಾರ ಇವುಗಳಿಂದ ತಮಗೆ ಎಷ್ಟೇ ತೊಂದರೆ ಬಂದರೂ ಲೆಕ್ಕಿಸದೇ ರಾಜಶೇಖರನಲ್ಲಿರುವ ವಿಜ್ಞಾನದ ಅಭಿರುಚಿಯನ್ನು ಅರಿತು ಆತನನ್ನು ಮುಂಬೈ ರಾಯಲ್ ಇನ್ ಸ್ಟಿಟ್ಯೂಟ್ ಆಫ್

ಸೈನ್ಸ್ ಬಿ.ಎಸ್.ಸಿ. ಓದಲು ಕಳಿಸಿದರು. ಆತನೊಬ್ಬ ದೊಡ್ಡ ವಿಜ್ಞಾನಿಯಾಗಬೇಕೆಂಬ ಬಲವಾದ ಆಶೆ ಅವರದಾಗಿತ್ತು. ಆದರೆ ರಾಜಶೇಖರನ ಪರೀಕ್ಷೆಯ ಪರಿಣಾಮ ಭೂಸನೂರಮಠ ಅವರು ಅಂದುಕೊಂಡಷ್ಟು ಉತ್ತೇಜನಕಾರಿಯಾಗಲಿಲ್ಲ ಆದರೂ ಎಂ.ಎಸ್.ಸಿ. ಅಭ್ಯಾಸಕ್ಕಾಗಿ ಆತನನ್ನು ಬನಾರಸಿಗೆ ಕಳುಹಿಸಿದರು. ಅಲ್ಲಿ ಆತ ಪ್ರಥಮ ವರ್ಗದಲ್ಲಿ ಪಾಸಾಗಿ ಬೆಳಗಾವಿಗೆ ಬಂದು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾದರು ನಂತರ ಕಾಲೇಜಿನ ಪ್ರಾಚಾರ್ಯರಾಗಿ ಸೇವೆಸಲ್ಲಿಸಿ ನಿವೃತ್ತರಾದರು.

ರಾಜಶೇಖರ ಅವರು ಕರ್ನಾಟಕ ಕಾಲೇಜಿಗೆ ಬಂದ ಮೇಲೆ ಕನ್ನಡದಲ್ಲಿ ಅನೇಕ ವೈಜ್ಞಾನಿಕ ಲೇಖನಗಳನ್ನು ಬರೆಯಹತ್ತಿದರು. ಅದನ್ನು ನೋಡಿ ಅವರು ಕನ್ನಡ ವಿಷಯದಲ್ಲೇಕೆ ಪಿಎಚ್.ಡಿ. ಮಾಡಬಾರದು? ಎಂದು ಕೆಲವರು ವಿಚಾರಿಸುತ್ತಿದ್ದಂತೆ ಅದನ್ನು ಭೂಸನೂರಮಠ ಅವರು ಕೇಳಿ ಅತ್ಯಂತ ಗಂಭೀರವಾಗಿ ನೀವೆಲ್ಲ ಏನು ಮಾಡುತ್ತಿರುವಿರಿ? ಅವರ ಅಭಿರುಚಿಗಳೇನು? ಎಂಬುದನ್ನು ವಿಚಾರಿಸದೆ ವಿಜ್ಞಾನದ ಒಬ್ಬ ವಿದ್ಯಾರ್ಥಿಯನ್ನು ಒತ್ತಾಯ ಪೂರ್ವಕವಾಗಿ ಕನ್ನಡಕ್ಕೆ ಎಳೆತಂದು ಪಿಎಚ್.ಡಿ. ಮಾಡಿಸುವುದರಿಂದ ಏನು ಫಲ? ಆತನಿಂದ ನೀವು ಪಿಎಚ್.ಡಿ. ಮಾಡಿಸಲೇಬೇಕೆಂದು ಬಯಸಿದರೆ ಭೌತಶಾಸ್ತ್ರದಲ್ಲಿ ಮಾಡಿಸಿ ಇದು ಅವನ ಒಲವು ಎಂದು ಖಡಾಖಂಡಿತವಾಗಿ ಹೇಳಿದರು. ಆದರೆ ರಾಜಶೇಖರನಲ್ಲಿ ಅವರು ಒಬ್ಬ ವಿಜ್ಞಾನಿಯನ್ನು ಕಂಡಿದ್ದರು. ಅಷ್ಟೆ ಅಲ್ಲ ಅವರೊಂದಿಗೆ ಎಷ್ಟೋ ವೈಜ್ಞಾನಿಕ ಅಂಶಗಳನ್ನು ಪ್ರತಿನಿತ್ಯವೂ ಚರ್ಚಿಸುತ್ತಿದ್ದರು. ಇದರ ಪರಿಣಾಮವಾಗಿ ಭೂಸನೂರಮಠರವರ ಪರಾಮರ್ಶೆ ಹಾಗೂ ಭವ್ಯ ಮಾನವಕೃತಿಗಳಲ್ಲಿ ಅದು ಸ್ಪಷ್ಟವಾಗಿ ಒಡಮೂಡಿದೆ.

ಅವರ ಎರಡನೇಯ ಮಗ ಸುಭಾಸ ಅವರು ವಿಜ್ಞಾನದ ವಿದ್ಯಾರ್ಥಿ ಇವರು ಧಾರವಾಡದ ಕರ್ನಾಟಕ ಮಹಾವಿದ್ಯಾಲಯದಲ್ಲಿ ಶಿಕ್ಷಣ ಮುಗಿಸಿ, ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಗಣಿತ ವಿಷಯದಲ್ಲಿ ರ್‍ಯಾಂಕ್ ಪಡೆದರು. ಮುಂದೆ ಇದೇ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪಡೆದು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಸ್ವಲ್ಪದಿನ ಕಾರ್ಯಮಾಡಿ ನಂತರ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಗಣಿತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಪ್ರೊ. ಭೂಸನೂರಮಠ ಅವರು ಇವರೊಡನೆ ಹಲವಾರು ವಿಜ್ಞಾನ, ಗಣಿತಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರತಿ ದಿನವೂ ಚರ್ಚಿಸುತ್ತಿದ್ದನು.

## ಆಸಕ್ತಿ - ಸ್ವಭಾವ

ಸದಾ ಓದುವದು ಭೂಸನೂರಮಠರ ಹವ್ಯಾಸ ಅದು ಅವರಿಗೆ ಸದಾಶಿವನ ಪೂಜೆ. ಸದಾಕಾಲವೂ ಓದಿನಲ್ಲಿಯೇ ಜೀವವನ್ನು ಸವೆಸಿದ ಜೀವ ಅವರದು. ಅನ್ಯಾಯವನ್ನು ಸಹಿಸದೆ, ಜಾತಿ, ಮತ ಪಂಥಗಳನ್ನು ಎಣಿಸದೆ, ಪ್ರತಿಭೆ ಇದ್ದವರನ್ನು ಗುರುತಿಸಿ ಎಲ್ಲ ರೀತಿಯ ಸಹಾಯ ಸಹಕಾರವನ್ನು ನೀಡುತ್ತಿದ್ದರು. ಅವರು ಕುಟುಂಬ ವತ್ಸಲರು, ಸ್ನೇಹಜೀವಿಗಳು, ಅಂತಃಕರಣ ಪೂರ್ವಕವಾಗಿ ಎಲ್ಲರ ಕ್ಷೇಮ ಸಮಾಚಾರವನ್ನು

ವಿಚಾರಿಸುತ್ತಿದ್ದರು. ಪ್ರೊ. ಭೂಸನೂರಮಠ ಅವರನ್ನು ಕುರಿತು. ಡಾ. ಸಾ.ಶಿ. ಮರುಳಯ್ಯನವರು ಒಂದೆಡೆ ಹೀಗೆ ಬರೆದಿದ್ದಾರೆ. "ಆಡಂಬರವಿಲ್ಲದ ಸರಳ ಜೀವನ ಇವರದು ಸಾಹಿತ್ಯವೆ ಸಂಸಾರ, ಆಧ್ಯಾತ್ಮ, ಆಚಾರ ಯಾವುದೇ ವಿಷಯವಿರಲಿ ಅದನ್ನು ಕುರಿತು ಮಾತನಾಡುವಾಗ ತಮ್ಮದೇ ಆದ ಸ್ಪಷ್ಟ ನಿಲುವು ತಳೆದ, ಆದರೆ ಅನ್ಯರನ್ನು ಪ್ರಲೋಭಿಸಿದ ಸಾತ್ವಿಕ ಸ್ವಭಾವದವರು. ಇವರಲ್ಲಿ ಪಡೆದ ಪ್ರತಿಭೆಯೂ ಇದೆ. ದುಡಿದ ಪಾಂಡಿತ್ಯವೂ ಇದೆ. ವಿದ್ವತ್ತಿನಲ್ಲಿ ಅದ್ವಿತೀಯರು. ಅಷ್ಟೇ ಪ್ರಗಲ್ಭರು, ಧರ್ಮದರ್ಶನ ಸ್ವೀಕೃತಿಯಲ್ಲಿ ಸಮದರ್ಶಿಗಳು, ದೈವಭಕ್ತ, ಧರ್ಮಬೀರು; ಅನುಭಾವಿ, ಶಿಕ್ಷಣತಜ್ಞ ರಸಿಕ ಸ್ನೇಹಜೀವಿ, ಸುಸಂಸ್ಕೃತ, ಸಜ್ಜನಿಕೆಯ ಸಾಕಾರ ಮೂರ್ತಿ ಅಪರಿಚಿತರಿಗೆ ಅವರು ಸಾಕ್ಷಾತ್ ಮರುಳುಶಂಕರದೇವ, ಸುಪರಿಚಿತರಿಗೆ ಪ್ರಕಾಂಡ ಪಂಡಿತ ದಾರ್ಶನಿಕ, ಋಷಿ, ಕವಿ, ನಿಷ್ಠಾವಂತ ಸಂಶೋಧಕ, ವಿಚಾರವಾದಿ", ಈ ಸಾಲುಗಳನ್ನು ಓದಿದರೆ ಸಾಕು ಭೂಸನೂರಮಠ ಅವರ ಗುಣಸ್ವಭಾವದ ಪೂರ್ಣ ಪರಿಚಯ ದೊರೆತಂತಾಗುತ್ತದೆ. ಅವರ ವ್ಯಕ್ತಿತ್ವವನ್ನು ಕನ್ನಡಿಯಲ್ಲಿ ಹಿಡಿದು ತೋರಿಸಿದಂತೆ, ಶ್ರೀ ವಿ.ಜಿ. ಹಿರೇಮಠ ಅವರು "ಪ್ರೊ. ಭೂಸನೂರಮಠ ಅವರು ಹಾಳು ಹರಟೆಯಲ್ಲಿ ವ್ಯರ್ಥ ವಿನೋದ ವಿಹಾರಗಳಲ್ಲಿ ಅಸ್ತೆಯುಳ್ಳವರಲ್ಲ, ಯಾವಾಗಲೂ ಗಂಭೀರ ವಿಚಾರದಲ್ಲಿ ಮಗ್ನರಾದವರು. ಆದರೆ ಈ ಗಂಭೀರ ಪ್ರವೃತ್ತಿ ಅವರನ್ನು ಸಮೂಹ ವಿಮುಖರನ್ನಾಗಿ ಮಾಡಿಲ್ಲ ಕಾಲೇಜಿನ ಆಟ ಪಾಠಗಳಲ್ಲಿ ವಿವಿಧ ವಿನೋದಾವಳಿಗಳಲ್ಲಿ ಕರ್ನಾಟಕ ಸಂಘದ ಉತ್ಸವಗಳಲ್ಲಿ ಅಸ್ಥೆಯಿಂದ ಭಾಗವಹಿಸುತ್ತಿದ್ದರು. ಆದರೆ ಒಮ್ಮೊಮ್ಮೆ ಅವರ ಪ್ರಾಮಾಣಿಕ ಅಭಿಪ್ರಾಯಗಳು ಕೆಲವರಿಗೆ ಅಪ್ರಿಯವೆನಿಸುತ್ತಿದ್ದವು. ಪ್ರಾಮಾಣಿಕತೆ ಮತ್ತು ಪ್ರಾಮಾಣಿಕ ವಿಚಾರಗಳನ್ನು ಭೀತಿಯಿಲ್ಲದೆ ಪ್ರಕಟಪಡಿಸುವ ಅವರ ಪ್ರವೃತ್ತಿ, ಇಂಥಹ ಪ್ರವೃತ್ತಿಯೂ ಕೆಲವು ಸಲ ಅವರ ವಿಷಯವಾಗಿ ತಪ್ಪು ತಿಳುವಳಿಕೆಯನ್ನುಂಟು ಮಾಡುತ್ತಿತ್ತು. ಅವರ ಹೃದಯದಲ್ಲಿ ಯಾವ ರೀತಿಯಿಂದ ಕಲ್ಮಷ, ದ್ವೇಷ, ಅಸಹನೆ ಎಂದೂ ಇರಲಿಲ್ಲ ಆದ್ದರಿಂದ ಎಲ್ಲರಲ್ಲಿಯೂ ಅವರ ಬಗೆಗೆ ಆದರ ಭಾವವಿತ್ತು." ಎಂದಿದ್ದಾರೆ. ಪ್ರೊ. ಭೂಸನೂರಮಠ ಅವರು ನೇರ ಮಾತಿನವರು. ತಮಗೆ ತೋಚಿದ್ದನ್ನು ನೇರವಾಗಿ ಮಾತನಾಡಿ ತೋರಿಸುತ್ತಿದ್ದರು. ಆದರೆ ಈ ರೀತಿಯಾಗಿ ತಮ್ಮ ವಿಚಾರಗಳನ್ನು ಮಂಡಿಸುವಾಗ ಸಾರಾಸಾರ ವಿಚಾರ ಮಾಡಿ ಅದರ ಬಗ್ಗೆ ಪೂರ್ಣ ಸತ್ಯವೆಂದು ತೋರಿದಾಗ ಮಾತ್ರ ಮಾತನಾಡುತ್ತಿದ್ದರು. ತುಂಬಿದ ಬದುಕು. ಚಿಂತನ ಶೀಲತೆ, ವಿದ್ವತ್ತಿನಿಂದಲೂ ಮಾಗಿದ ಮನಸ್ಸು ಅವರದು.

ಒಳ್ಳೆಯದು ಯಾವ ನಿಟ್ಟಿನಿಂದ ಬಂದರೂ ಅದನ್ನು ಸ್ವೀಕರಿಸುವ, ಮೆಚ್ಚಿಕೊಳ್ಳುವ ಸ್ವಭಾವ ಅವರದು, ಮಿತ್ರರಲ್ಲಿ ಹಿತೈಶಿಗಳಲ್ಲಿ ಸೌಹಾರ್ದಯುತ ಸಂಬಂಧವನ್ನು ಸದಾಕಾಲವೂ ಇರಿಸಿಕೊಂಡು ಬಂದವರು. ಈರ್ಷೆ, ಅಸೂಯೆ, ಅಸಹನೆ, ಸ್ವಪ್ರತಿಷ್ಠೆ ಇವುಗಳಿಂದ ಸದಾ ದೂರವಿರುವ ಪ್ರೊ. ಭೂಸನೂರಮಠ ಅವರು ವಿಶ್ವಮಾನವನನ್ನು ಭವ್ಯ ಮಾನವನಂತೆ ಕಂಡಂತೆಯೇ ಬಾಳಿದವರು. ಪರವನ್ನು ಧರೆಗಿಳಿಸುವದು. ಮರ್ತ್ಯವನ್ನು ಅಮರ್ತ್ಯಕ್ಕೇರಿಸುವುದೇ ವೀರಶೈವದ ಗುರಿ ಎಂಬ ಮಾತು ಅಕ್ಷರಶಃ ಅವರಿಗೆ ಒಪ್ಪುತ್ತದೆ. ಅವರ ಪ್ರಭಾವಲಯಕ್ಕೆ ಸಿಕ್ಕ ಯಾರೇ ಆಗಲಿ ಕಷ್ಟದಲ್ಲಿದ್ದಾಗ ಅವರಿಗೆ ಸಹಾಯ ಮಾಡುವ ಪ್ರವೃತ್ತಿ ಅವರದು. ತಮ್ಮ ಶಿಷ್ಯರ ಬಗೆಗೆ ಹೊಂದಿದ ಕಳಕಳಿಯನ್ನೆ ಇತರರಲ್ಲಿಯೂ ಹೊಂದಿದ್ದರು. ಈ ಗುಣ ಅವರನ್ನು ಮತ್ತಷ್ಟು ಹಿರಿಯರನ್ನಾಗಿಸಿತು. ಈ

ಬಗ್ಗೆ ಡಾ. ಬಿ.ಸಿ. ಜವಳಿ ಅವರ ಅಭಿಪ್ರಾಯ ಹೀಗಿದೆ. "ಪ್ರೊ. ಭೂಸನೂರಮಠ ಅವರು ಪಂಡಿತರು, ಚಿಂತಕರು, ನಮ್ಮ ಧರ್ಮ ಸಾಹಿತ್ಯಗಳ ಅಭಿಮಾನಿಗಳೆಂಬುದು ನಿಜ. ಇದೆಲ್ಲಕ್ಕಿಂತ ಹೆಚ್ಚಾಗಿ ಅವರಲ್ಲಿ ಶಿಷ್ಯರ ಬಗೆಗೆ ಕಳಕಳಿ, ವಾತ್ಸಲ್ಯ ಹೆಚ್ಚಾಗಿ ಕಂಡು ಬರುತ್ತಿದ್ದವು ನಿಷ್ಠುರ ಸ್ವಭಾವ ಅವರಿಗೆ ಬಹಳ ಹಿಡಿಸಿತ್ತು. ಅವರಲ್ಲಿ ನನಗೆ ಕಪಟ, ನಾಜೂಕು ಮಾತಿನ ವಂಚನೆ ಇಲ್ಲದೆ ನಿರ್ದಾಕ್ಷಿಣ್ಯವಾಗಿ ಹೇಳುತ್ತಿದ್ದರು. ಹೀಗಾಗಿ ನನ್ನ ಅವರ ಒಡನಾಟ ಅನ್ಯೋನ್ಯವಾಗಿ ಕಂಡು ನಾನೊಬ್ಬ ಅವರ ಪರಿವಾರದವನಾದೆ. ಕ್ರಿ.ಶ. 1971 ರಲ್ಲಿ ನಾನು ಮನೆ ಕಟ್ಟಿಸಿ ಕೈ ಬರಿದು ಮಾಡಿಕೊಂಡಿದ್ದೆ. ನನ್ನ ಆರೋಗ್ಯವೂ ಅಷ್ಟೊಂದು ಚೆನ್ನಾಗಿ ಇರಲಿಲ್ಲ, ಭೇದಿಯಿಂದಾಗಿ ತತ್ತರಿಸಿ ಬಳಲಿ ಹೋಗಿದ್ದೆ ಒಂದು ದಿನ ಮುಂಜಾನೆ ನಮ್ಮ ಮನೆಯ ಹತ್ತಿರ ಅಡ್ಡಾಡುತ್ತ ಬಂದು, ನನ್ನ ಆರೋಗ್ಯ, ಹಣಕಾಸಿನ ಸ್ಥಿತಿಯ ಬಗ್ಗೆ ವಿಚಾರಿಸಿದರು. ಎರಡೂ ಅಷ್ಟೊಂದು ಚೆನ್ನಾಗಿರಲಿಲ್ಲವೆಂದು ತಿಳಿದ ಅವರು ಮಮ್ಮಲನೆ ಮರುಗಿದರು. ನನ್ನಲ್ಲಿ ಹಣ ಇದೆ. ನೀನು ನಂತರ ನಿಧಾನವಾಗಿ ಕೊಡು ಎಂದರು. ನಾನು ಅವರಿಂದ ಹಣ ಪಡೆಯಲಿಲ್ಲ, ಅವರ ವಾತ್ಸಲ್ಯಕ್ಕೆ ಕಷ್ಟ ಕಾಲದಲ್ಲಿದ್ದವರಿಗೆ ಸಹಾಯ ಕೇಳುವ ಸ್ವಭಾವಕ್ಕೆ ನಾನು ಮಣಿದು ಹೋದೆ. ಹತ್ತು ಹನ್ನೆರಡು ವರ್ಷಗಳಿಂದಲೂ ಅತ್ಯಂತ ಶ್ರೇಷ್ಠವೈದ್ಯರಿಂದ ಪರೀಕ್ಷಿಸಿಕೊಂಡು ಉಪಚಾರ ಹೊಂದಿದರೂ ನನ್ನ ಭೇದಿಯು ಗುಣವಾಗಿರಲಿಲ್ಲ ಆಗ ಸಂ.ಶಿ. ಭೂಸನೂರಮಠ ಅವರು 1971 ರ ಆಗಷ್ಟ ತಿಂಗಳಲ್ಲಿ ಪಂಚಮಿ ಹಬ್ಬದ ನಿಮಿತ್ತ ಉಂಡಿ ತಿನ್ನಲು ನನ್ನನ್ನು ಆಮಂತ್ರಿಸಿದ್ದರು. ನಿನ್ನ ರೋಗ ವಾಸಿ ಮಾಡುವ ವೈದ್ಯರೊಬ್ಬರನ್ನು ಪರಿಚಯ ಮಾಡಿಕೊಡುತ್ತೇನೆಂದು ಹೇಳಿ, ಆ ವೈದ್ಯರನ್ನು ತಮ್ಮ ಮನೆಗೆ ಬರಲು ಹೇಳಿದ ದಿವಸವೇ ನನಗೆ ಬರಲು ಕಾಗದ ಬರೆದು ಕರೆಸಿದ್ದರು. ಅವರಿಗೆ ಈ ಹುಡುಗ ನನಗೆ ಬಹಳೇ ಬೇಕಾದವ ಅವನ ಆರೋಗ್ಯ ನೋಡಿ ನನಗೆ ಕಳವಳವಾಗಿದೆ. ಇವನೊಬ್ಬನನ್ನು ಗುಣ ಪಡಿಸಿದರೆ, ನಿಮಗೆ ಪುಣ್ಯ ಬರುತ್ತದೆ ಎಂದು ಆಡಿದರು. ಆ ವೈದ್ಯರ ಹೆಸರು ಡಾ. ಬಸವರಾಜ, ಎಸ್. ಪ್ರಭಯ್ಯನಮಠ ಎಂದು, ಆ ವೈದ್ಯರು ಹೇಳಿದಂತೆ ನನ್ನ ಭೇದಿರೋಗ ಕಣ್ಮರೆಯಾಗಿ ನಾನೊಬ್ಬ ಹೊಸ ಮನುಷ್ಯನಾದೆ. ಹೀಗೆ ರೋಗಿಯಾಗಿದ್ದ ನನಗೆ ಅವರು ಸಂಜೀವಿನಿಯಾದರು. ಅದರಿಂದಾಗಿ ನಾನು ಅವರ ಹಿತಚಿಂತಕನಾದೆನು. ಈ ಘಟನೆ ನನ್ನ ಮತ್ತು ಅವರ ಪರಸ್ಪರ ಸಂಬಂಧ ವೃದ್ಧಿಯಾಗಲು ಕಾರಣವಾಯಿತು. ಇದಲ್ಲದೆ ನಂತರ ಡಾ. ಪ್ರಭಯ್ಯನಮಠ ಅವರು ನಮ್ಮ ಮನೆ ವೈದ್ಯರು, ಪರಮಸ್ನೇಹಿತರು ಆದರು. ನನ್ನ ಹಿತಚಿಂತಕರ ಬಳಗಕ್ಕೆ ಇನ್ನೊಬ್ಬರನ್ನು ನಮ್ಮ ಗುರುಗಳು ಸೇರಿಸಿದರು. ಹೀಗೆ ಪ್ರೊ. ಸಂ.ಶಿ. ಭೂಸನೂರಮಠ ಇವರ ಸ್ವಭಾವ ಎಲ್ಲರ ಮನವನ್ನು ಆಕರ್ಷಿಸಿತ್ತು. ಬೇರೆಯವರೆಲ್ಲ ಸುಖವಾಗಿ, ಸಂತೋಷದಿಂದ ಇರಲಿ ಎಂಬ ಭಾವವನ್ನು ಮನದಲ್ಲಿ ತುಂಬಿಕೊಂಡ ಕಾರಣವೇ ಅನೇಕ ವಿದ್ವಾಂಸರು ಇಂದಿಗೂ ಅಭಿಮಾನದಿಂದ ನೆನೆಯುತ್ತಾರೆ. ಅವರೊಂದಿಗೆ ಕಳೆದ ರಸ ನಿಮಿಷಗಳನ್ನು ಜ್ಞಾಪಿಸಿಕೊಳ್ಳುತ್ತಾರೆ. ಅವರ ಹಿರಿತನಕ್ಕೆ, ಹಿರಿದಾದ ಗುಣಕ್ಕೆ ತಲೆಬಾಗುತ್ತಾರೆ.

ಪ್ರೊ. ಭೂಸನೂರಮಠ ಅವರು ಮೇಲುನೋಟಕ್ಕೆ ತಮ್ಮ ಬೌದ್ಧಿಕ ಪ್ರಪಂಚದಲ್ಲಿಯೇ ತಲ್ಲೀನರಾದರೆಂದು ಸಾಮಾನ್ಯ ವ್ಯವಹಾರದಲ್ಲಿ ಅನಾಸಕ್ತರೆಂದು ಕಾಣುತ್ತಿದ್ದರು. ಅವರಲ್ಲಿ ವ್ಯವಹಾರ ಕುಶಲತೆ ಸಾಕಷ್ಟು ಇತ್ತು. ಅನಾವಶ್ಯಕವಾದ ದುಂದು ವೆಚ್ಚವನ್ನು ಅವರು ಎಂದೂ ಮಾಡುತ್ತಿರಲಿಲ್ಲ, ಪರ ಊರಿಗೆ ಹೋಗಿ ಧಾರವಾಡಕ್ಕೆ

ತಿರುಗಿ ಬಂದಾಗ ಬಸ್ ನಿಲ್ದಾಣದಿಂದ ಅವರ ಮನೆ ಪರಂಜ್ಯೋತಿಯವರೆಗೂ ನಡೆದೆ ಬರುತ್ತಿದ್ದರು. ಒಂದು ರೂಪಾಯಿಯ ಕೊತ್ತಂಬರಿ ಪೆಂಡಿಯನ್ನು ಮೂರು ರೂಪಾಯಿಗೆ ತರುವುದು ಶ್ರೀಮತಿಕೆಯ ಲಕ್ಷಣವಾಗಲಿ, ಜಾಣತನವಾಗಲಿ ಅಲ್ಲ ಎಂದು ಉದಾಹರಣೆಯಿಂದ ಹೇಳುತ್ತಿದ್ದರು. ಅದರೆ ಬೇರೆಯವರಿಗೆ ಸಹಾಯ ಮಾಡುವ ಪ್ರಸಂಗ ಬಂದಾಗ ಧಾರಾಳರಾಗುತ್ತಿದ್ದರು. ತಮ್ಮ ವಿದ್ಯಾರ್ಥಿಗಳಲ್ಲಿ ಪ್ರತಿಭೆ ಇದ್ದವರನ್ನು ಗುರುತಿಸುವ ಕಲೆ ಅವರಿಗೆ ಚೆನ್ನಾಗಿ ಗೊತ್ತಿತ್ತು. ಅಂಥವರಿಗೆ ಸಾಕಷ್ಟು ರೀತಿಯ ಸಹಾಯ ಮಾಡುತ್ತಿದ್ದರು. "ನನ್ನ ಎಂ.ಎ. ವ್ಯಾಸಂಗಕ್ಕೆ ತೊಂದರೆಯಾದಾಗ ಈ ವಿಷಯವನ್ನು ತಿಳಿದ ಅವರು ನೀವು ಯಾವುದೇ ಚಿಂತೆ ಮಾಡಬೇಡಿ. ಧಾರವಾಡದಲ್ಲಿ ಇರುವ ವ್ಯವಸ್ಥೆಯ ಬಗ್ಗೆ ಚಿಂತೆ ಬೇಡ ಎಂದು ಹೇಳಿ ತಮ್ಮ ಮಗನೊಂದಿಗೆ ನನಗೂ ವಾಸಿಸಲು ಅನುಕೂಲ ಮಾಡಿಕೊಟ್ಟರು. ತಮ್ಮ ಮಗನಂತೆಯೇ ನನ್ನಲ್ಲಿಯೂ ಪ್ರೀತಿ ತೋರಿ ನನ್ನ ಅಧ್ಯಯನಕ್ಕೆ ಎಲ್ಲ ರೀತಿಯ ಸಹಾಯ ಸಹಕಾರ ಸಲ್ಲಿಸಿದ್ದನ್ನು ಮರೆಯಲಾರೆ." ಎಂದು ಡಾ. ಚಂದ್ರಶೇಖರ ಕಂಬಾರ ಅವರು ತಮ್ಮ ಗುರುಗಳಿಂದ ಪಡೆದ ಸ್ಫೂರ್ತಿ ಹಾಗೂ ಸಹಾಯ ಸಹಕಾರಗಳನ್ನು ಈಗಲೂ ಅತ್ಯಂತ ಭಾವುಕರಾಗಿ ನೆನೆಯುತ್ತಾರೆ. ಅಷ್ಟೊಂದು ಗಾಢವಾದ ಪರಿಣಾಮ ಅವರ ಮೇಲೆ ಆಗಿದೆ.

ತಂದೆ ತಾಯಿಯರಲ್ಲಿ ವಿಶೇಷವಾದ ಗೌರವಾದರಗಳನ್ನು ಹೊಂದಿದ್ದ ಭೂಸನೂರಮಠ ಅವರು ಸದಾ ಅವರ ನೆರಳಿನಲ್ಲಿಯೇ ಬೆಳೆದವರು. ತಂದೆಯನ್ನು ಕಳೆದುಕೊಂಡ ಮೇಲೆ ಮನೆತನವನ್ನು ಉರ್ಜಿತಾವಸ್ಥೆಗೆ ತಂದು ಬಿ.ಎ. ದಿಂದ ಎಂ.ಎ ವರೆಗೆ ಶಿಕ್ಷಣದ ಭಾರವನ್ನು ಹೊತ್ತು ನೌಕರಿಗಾಗಿ ಅಲೆದಾಡಿದ ಎಲ್ಲಾ ವೆಚ್ಚವನ್ನು ಸಮರ್ಥವಾಗಿ ನಿರ್ವಹಿಸಿದ ತಾಯಿಯವರು. ವಿದ್ಯಾಬುದ್ಧಿ ಶಕ್ತಿ ಸಾಹಸ, ಸ್ವಾಭಿಮಾನ ಆತ್ಮಗೌರವ, ಧರ್ಮನೀತಿ, ಗುಣಶೀಲ, ಉಪಕಾರ ಕಲ್ಯಾಣಭಾವಕ್ಕೆ ಪ್ರೇರಕ ಶಕ್ತಿಯಾಗಿದ್ದ ಆ ತಾಯಿಯವರು 1969ರಲ್ಲಿ ಶಿವಾಧೀನರಾದರು. ಆಗ ತಂದೆ - ತಾಯಿಯರ ಅಸಾಮಾನ್ಯವಾದ ಸೌಭಾಗ್ಯ ಸಂಪತ್ತು ಕಳೆದುಹೋಯಿತು. "ಈ ಮಹಾತಾಯಿ ಮತ್ತು ತಂದೆಯವರು ನನ್ನ ಜೀವನಕ್ಕೆ ಧಾರಾಳವಾಗಿ ಎರೆದ; ನಿರರ್ಗಳವಾಗಿ ಸುರಿದ ಪ್ರಾಣರಕ್ತ ಇಂದಿಗೂ ನನ್ನಲ್ಲಿ ಜೀವಿಸುತ್ತಿದೆ. ಮೂಲತಃ ಅವರಿಂದ ನಾನಾದೆ. ಇಂದಿಗೂ ನನ್ನಲ್ಲಿರುವ ಮಾತೃದೇವೋಭವ ಎಂಬ ಉಪನಿಷದ್ವಾಕ್ಯದ ನಿಜಾರ್ಥ ನನ್ನ ಜೀವನ ಪಥವನ್ನು ಪ್ರಕಾಶಗೊಳಿಸುತ್ತಾ ಬಂದಿದೆ." ಈ ಮಾತಿನಿಂದ ಅವರು ತಮ್ಮ ತಂದೆ - ತಾಯಿಯರಲ್ಲಿಟ್ಟಿದ್ದ ಪ್ರೇಮ ಆದರ ಅಭಿಮಾನಗಳುಸ್ಪಷ್ಟವಾಗುತ್ತವೆ. ತಾವು ಬೆಳೆದ ಮೇಲೆ ಹೆತ್ತವರನ್ನೆ ಮರೆಯುವ ಎಷ್ಟೋ ಜನರಿರುವ ಈ ಕಾಲದಲ್ಲಿ ಇವರ ತಂದೆ - ತಾಯಿಗಳ ಪ್ರೇಮ ಆದರ್ಶಪ್ರಾಯವಾದದ್ದು.

ಅತಿಥಿ ಸತ್ಕಾರಕ್ಕಾಗಿ ಅವರ ಮನ ಮನೆ ಸದಾ ತೆರೆದಿರುತ್ತಿದ್ದವು. ಇದಕ್ಕೆ ನಿದರ್ಶನವೆನ್ನುವಂತೆ ಭೂಸನೂರಮಠ ಅವರ ನೆಚ್ಚಿನ ಶಿಷ್ಯರಿಂದ ಡಾ. ವಾರಿ ಅವರ ಈ ಮಾತುಗಳನ್ನು ನೋಡಬಹುದು. "ಹರಿಜನ ಗಿರಿಜನ, ಉಚ್ಚನೀಚ ಎಂಬ ಭಾವನೆಯನ್ನು ಮನದಲ್ಲಿ ತಂದುಕೊಳ್ಳದೇ ಮನೆಗೆ ಬಂದ ಅತಿಥಿಗಳನ್ನೆಲ್ಲ ಒಂದೇ ಪಂಕ್ತಿಯಲ್ಲಿಯೇ ಕೊಡ್ರಿಸಿ ಊಟ ಮಾಡಿಸುವ ಉದಾರ ಮನೋಭಾವ ಪ್ರೊ. ಭೂಸನೂರಮಠ ಅವರದು ಜಾತಿ,

ಮತ ಪಂಥದ ಬಗ್ಗೆ ಕೀಳರಿಮೆ ಅವರ ಮನದಲ್ಲಿ ಎಂದೂ ಸುಳಿಯುತ್ತಿರಲಿಲ್ಲ." ಅವರದು ಗುರುವಿನ ಮನೆತನ, ವೀರಶೈವರಲ್ಲಿ ಗುರುವಿಗೆ ಅಗಾಧವಾದ ಸ್ಥಾನ, ಸಮಾಜದ ಮಡಿವಂತಿಕೆಯನ್ನು ಕಂದಾಚಾರವನ್ನು ಬೆಳೆಸಿಕೊಂಡು ಬರಬೇಕಾದವರು ಅವರೇ, ಆದರೆ ಅವೆಲ್ಲ ಗೊಡ್ಡು ಆಚರಣೆ ವಿಚಾರಗಳೆಂದು ಸಾರಿದ ವಚನಕಾರರ ತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಪ್ರೊ. ಭೂಸನೂರಮಠರ ಮನೆಗೆ ಬಂದ ಅತಿಥಿಗಳು ಹಾಗೆಯೇ ಹೊರಹೋಗುವಂತಿಲ್ಲ, ಈ ಅತಿಥಿ ಸತ್ಕಾರದಲ್ಲಿ ಅವರ ಧರ್ಮಪತ್ನಿ ಗೌರಾದೇವಿಯವರ ಮನಸ್ಸು ಅಷ್ಟೇ ಹಿರಿದಾಗಿತ್ತು. ರಾತ್ರಿ 10 ಗಂಟೆಯವರೆಗೂ ಅವರೊಡನೆ ಹಲವಾರು ವಿಚಾರಗಳನ್ನು ಚರ್ಚೆ ಮಾಡಿ ಮುಗಿಸುವವರೆಗೂ ಆ ತಾಯಿ ಅಡುಗೆ ಸಿದ್ದಪಡಿಸಿ ಪ್ರೀತಿಯಿಂದ ಉಣಬಡಿಸುತ್ತಿದ್ದಳು. ಈಗಲೂ ಸಹ ಇದೇ ರೀತಿ, ನೀತಿ, ಪರಂಜ್ಯೋತಿಯಲ್ಲಿ ಮುಂದುವರೆದಿದೆ. ಈ ವಿಚಾರ ಪರಂಜ್ಯೋತಿಗೆ ಭೇಟಿ ಕೊಟ್ಟ ಪ್ರತಿಯೊಬ್ಬರ ಅನುಭವಕ್ಕೂ ಬಾರದೇ ಇರದು. ಅತಿಥಿ ದೇವೋಭವ ಎಂಬ ಮಾತು ಅವರಲ್ಲಿ ಆಳವಾಗಿ ಬೇರೂರಿದ್ದಿತು. ಸದಾಕಾಲ ತಮ್ಮ ಮನೆಗೆ ಯಾರಾದರೂ ಬರಬೇಕು ಬಂದವರೊಡನೆ ಪ್ರಸಾದವನ್ನು ಸ್ವೀಕರಿಸಬೇಕೆಂಬ ಇಚ್ಚೆ ಅವರಲ್ಲಿ ಸದಾ ನೆಲೆಸಿರುತ್ತಿತ್ತು. ಸರಿಯಾಗಿ ಊಟ ಸಿದ್ಧವಾಗದಿದ್ದರೆ ಅವರಿಗೆ ಆಗುತ್ತಿರಲಿಲ್ಲ. ಗೋಧಿಯ ಆಹಾರದ ಮೇಲೆ ಅವರಿಗೆ ಪ್ರೀತಿ ಹೆಚ್ಚು, ಸಿಹಿ ಅಂತೂ ಅವರಿಗೆ ಅಚ್ಚುಮೆಚ್ಚು; ಬಾಲ್ಯದಲ್ಲಿದ್ದಾಗ ಅವರ ತಾಯಿ ಉಣಿಸಿದ ಆ ಹೆಸರುಂಡೆ, ತುಪ್ಪ ಸಿಹಿಯೂಟವನ್ನು ಕೊನೆಯವರೆಗೂ ಬಯಸುತ್ತಿದ್ದರು. ಮನೆಗೆ ಬಂದ ಅತಿಥಿಗಳಿಗೆ ವಿಶೇಷ ಸಿಹಿ ಅಡಿಗೆ ಸಿದ್ಧವಾಗಬೇಕು. ಯಾವಾಗಲೂ ಅಡಿಗೆ ಬಿಸಿಯಾಗಿಯೇ ಇರಬೇಕು. ಹಾಲು ಮೊಸರು ತುಪ್ಪದ ಮೇಲೆ ವಿಶೇಷವಾದ ಪ್ರೀತಿ ಇದ್ದ ಅವರು ಒಂದು ದಿನವೂ ಇವುಗಳ ಪೂರೈಕೆಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದರು. ಬಂದ ಅತಿಥಿಗಳಿಗೆ ಮೊದಲು ಭೋಜನ ಆಮೇಲೆಯೇ ಬಂದ ಕಾರ್ಯದ ಬಗ್ಗೆ ಚರ್ಚಿಸುತ್ತಿದ್ದರು. ಬಂದವರು ಊಟ ಮಾಡದೆ ಹೋದರೆ ಇವರಿಗೆ ಸಮಾಧಾನವಾಗುತ್ತಿರಲಿಲ್ಲ, ಅವರು ಊಟ ಮಾಡಿದರೆ ಇವರಿಗೆ ಅತ್ಯಂತ ತೃಪ್ತಿ ಎಂದೂ ಅತಿಥಿ ಸತ್ಕಾರ ಮಾಡುತ್ತಿದ್ದ ಅವರ ಧರ್ಮಪತ್ನಿ ಗೌರಾದೇವಿಯವರು ಅಭಿಪ್ರಾಯ ಪಡುತ್ತಾರೆ.

ಸಂಗೀತದಲ್ಲಿ ಅವರಿಗೆ ವಿಶೇಷವಾದ ಆಸಕ್ತಿ, ಬಾಲ್ಯದಲ್ಲಿಯೇ ಸಂಗೀತ ಅಭ್ಯಾಸ ಮಾಡಿದ್ದರು. ರಾಗಗಳನ್ನು ಸ್ಪಷ್ಟವಾಗಿ ಗುರುತಿಸುತ್ತಿದ್ದರು. ಹಾರ್ಮೋನಿಯಂ, ತಬಲಾ, ತಗ್ಗಾಗಳನ್ನು ಆಗಾಗ ಬಾರಿಸುತ್ತಿದ್ದರು. ನಾಟಕಗಳನ್ನು ಭಾವುಕರಾಗಿ ನೋಡುತ್ತಿದ್ದರು. ಆಡುತ್ತಿದ್ದರು, ಭವ್ಯ ಮಾನವದ ಪ್ರಥಮ ಕಾಂಡವನ್ನಾಧರಿಸಿ "ಮಂಗಳದ ಮುಂಬೆಳಗು" ಎಂಬ ನಾಟಕವನ್ನು ಬರೆಯಿಸಿ ಆಡಿಸಿದ್ದಾರೆ. ಈ ಸಂದರ್ಭದಲ್ಲಿ ಅಲ್ಲಮಪ್ರಭುವಿನ ಪಾತ್ರಧಾರಿ, ತನ್ನ ಪಾತ್ರ ಮುಗಿದ ಮೇಲೆ ಶೂನ್ಯ ಸಿಂಹಾಸನದ ಮೇಲೆ ಕುಳಿತುಕೊಂಡೆ ಸಿಗರೇಟು ಸೇದುತ್ತಿದ್ದನು. ಇದನ್ನು ನೋಡಿದ ಭೂಸನೂರಮಠ ಅವರಿಗೆ ಬಹಳ ವಿಷಾದ ಹಾಗೂ ಕೋಪ ಒಮ್ಮೆಲೇ ಉಂಟಾಯಿತು. ಕೂಡಲೇ ಆ ಪ್ರಾತ್ರಧಾರಿಯನ್ನು ಆ ಆಸನದಿಂದಲೇ ಎಬ್ಬಿಸಿ ಹೊರಗೆ ಕಳುಹಿಸಿದರು. ಇಂತಹ ಭಾವುಕತೆ ಅವರಲ್ಲಿತ್ತು.

## ವಿವಿಧ ಕ್ಷೇತ್ರಗಳಲ್ಲಿ ಭೂಸನೂರಮಠರ ಸಾಧನೆ

**ಆದರ್ಶ ಪ್ರಾಧ್ಯಾಪಕ:**

ಪ್ರೊ. ಭೂಸನೂರಮಠರು ಹಂಗಾಮಿ ಉಪನ್ಯಾಸಕರಾಗಿ ಕರ್ನಾಟಕ ಕಾಲೇಜಿನಲ್ಲಿ 1939 ಸಪ್ಟೆಂಬರದಲ್ಲಿ ನೌಕರಿ ಪ್ರಾರಂಭಿಸಿದರು. ಆಗ ಅವರ ವೇತನ ತಿಂಗಳಿಗೆ 15 ರೂಪಾಯಿಗಳು. ಅವರೇ ಹೇಳುವಂತೆ "ಬಿ.ಎ. ಆನರ್ಸ ಮತ್ತು ಎಂ.ಎ. ವರ್ಗದಲ್ಲಿ ಕನಡವೇ ಪ್ರಧಾನ ವಿಷಯವಾಗಿದ್ದ ನನಗೆ ಕಾಲೇಜಿನಲ್ಲಿ ಯಾವ ವರ್ಗವೆ ಇರಲಿ ಕಲಿಸುವದು ಕಠಿಣವೆನಿಸಲಿಲ್ಲ. ಮಾಳವಾಡರು. ನನಗೆ ಯಾವ ಯಾವ ವಿಷಯಗಳನ್ನು ಯಾವ ಯಾವ ವರ್ಗಗಳಿಗೆ ಕಲಿಸುತ್ತೀರಿ? ಎಂದು ಕೇಳಿದರೆ ನೀವು ಕೊಟ್ಟ ವಿಷಯಗಳನ್ನು, ಎಂದು ನನ್ನ ಉತ್ತರ, ಅವರಿಗೆ ಸಂತೋಷ ನನಗೆ ಆನಂದ, ಮೂರುವರೆ ವರ್ಷ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ ನನಗೆ ಒಂದು ವಿಶೇಷ ಅಭಿಮಾನ ಏಕೆಂದರೆ ಪ್ರಥಮ ವರ್ಷದ ಆರ್ಟ್ಸ್ ದಿಂದ ಬಿ.ಎ ವರೆಗೆ ಎಲ್ಲಾ ವಿದ್ಯಾರ್ಥಿಗಳಲ್ಲಿ ನನ್ನ ಬಗ್ಗೆ ವಿಶೇಷ ಆದರ ಆಸಕ್ತಿ. ಇಂದಿಗೂ ನನ್ನ ಸಮ್ಮುಖದಲ್ಲಿ ತಮ್ಮ ಮೆಚ್ಚುಗೆಯನ್ನು ನೀಡುವ ಅಂದಿನ ವಿದ್ಯಾರ್ಥಿಗಳಿದ್ದಾರೆ. ನಿಜವಾದ ಸಂಪತ್ತು ಇದೇ ಎಂಬುದು ನನ್ನ ದೃಢಭಾವನೆ. ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದುದು ಇಲ್ಲಿ ಸಿಗುವ ಆ ಸುಖ ಬೇರೆ ವೃತ್ತಿಗಳಲ್ಲಿ ಸಿಗಲಾರದು ಮತ್ತು ಪವಿತ್ರವಾದದ್ದು. ಇಲ್ಲಿ ಸಿಗುವ ಆ ಸುಖವೇ ಬೇರೆ, ಆದ್ದರಿಂದಲೇ ವಿದ್ಯಾದಾನವು ಅತ್ಯಂತ ಶ್ರೇಷ್ಠ, ಎಂದೆನಿಸಿಕೊಂಡಿದೆ." ಎಂದು ತಿಳಿದವರು ಆ ಭಾವನೆಯಿಂದಲೇ ವೃತ್ತಿ ಪ್ರಾರಂಭಿಸಿ ಅದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರಂತೆ ದುರಾದೃಷ್ಟಕ್ಕೆ ಇದೇ ಅವರ ಮುಂದಿನ ವೃತ್ತಿ ಜೀವನಕ್ಕೆ ಮುಳುವಾಯಿತು. ಸರಕಾರಿ ಸಂಸ್ಥೆಯಾಗಿದ್ದ ಕರ್ನಾಟಕ ಕಾಲೇಜಿನಲ್ಲಿ ಇವರ ಉದ್ಯೋಗ ಮುಂದುವರೆಯಲಿಲ್ಲ,

1943 ರಲ್ಲಿ ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಹೊಸದಾಗಿ ಶಿಕ್ಷಕ ವೃತ್ತಿ ಆರಭಿಸಿದರು. ಲಿಂಗರಾಜ ಮಹಾವಿದ್ಯಾಲಯ ಪತ್ರಿಕೆಯಲ್ಲಿ ಅದರ ಸಂಪಾದಕರಾದ ವ್ಹಿ.ಜಿ. ಕುಲಕರ್ಣಿ ಅವರು ಪ್ರೊ. ಭೂಸನೂರಮಠ ಅವರನ್ನು ಹೀಗೆ ಸ್ವಾಗತಿಸಿದ್ದಾರೆ. "ಈ ವರ್ಷ ನಮ್ಮ ಕಾಲೇಜಿಗೆ ಹೊಸದಾಗಿ ಕೆಲವು ಜನ ಅಧ್ಯಾಪಕರು ಬಂದಿದ್ದಾರೆ. ಇವರಿಗೆ ನಾವು ಸ್ವಾಗತವನ್ನು ಬಯಸುತ್ತೇವೆ. ಇವರಲ್ಲಿ ನಮ್ಮ ಸಹ ಪ್ರಾಧ್ಯಾಪಕರಾದ ಪ್ರೊ. ಭೂಸನೂರಮಠ ಇವರ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇವೆ. ನಮ್ಮ ಕಾಲೇಜಿನ ಕನ್ನಡ ವಿಭಾಗದ ಭಾರವನ್ನು ನಮ್ಮ ಜೊತೆಗಾರರಾಗಿ ಬಂದ ಇವರಿಗೆ ನಾವು ವೈಯಕ್ತಿಕವಾಗಿಯೂ, ಕನ್ನಡ ವಿದ್ಯಾರ್ಥಿಗಳ ಪರವಾಗಿಯೂ ಸ್ವಾಗತವನ್ನು ಕೋರುತ್ತೇವೆ. ಪ್ರೊ. ಭೂಸನೂರಮಠರು ಅನುಭವಿಕರಾದ ಪ್ರಾಧ್ಯಾಪಕರೂ, ಸಾಹಿತ್ಯದಲ್ಲಿ ಉತ್ಸಾಹವನ್ನು ತಳೆದು, ಪರಿಶ್ರಮ ಪಟ್ಟು ಅಭ್ಯಾಸ ಮಾಡುವ ಒಲವುಳ್ಳವರೂ ಆಗಿದ್ದಾರೆ. ಈಗಾಗಲೇ ಅವರು ನಮ್ಮ ವಿದ್ಯಾರ್ಥಿಗಳಲ್ಲಿ ತಮ್ಮ ಆಳವಾದ ಸಾಹಿತ್ಯಾಭ್ಯಾಸದಿಂದಲೂ ಒಳ್ಳೆಯ ಸ್ವಭಾವದಿಂದಲೂ ಮನ್ನಣೆ ಪಡೆದಿದ್ದಾರೆ. ಕರ್ನಾಟಕ ಸಾಹಿತ್ಯ ಸಂಘದ ಚಟುವಟಿಕೆಗಳಲ್ಲಿ ಆಸ್ಥೆಯಿಂದ ಭಾಗವಹಿಸಿ

ಮಾರ್ಗದರ್ಶಕರಾಗಿದ್ದಾರೆ. ಇಂಥ ಪಂಡಿತರೂ ಉತ್ಸಾಹಿಗಳು ನಮ್ಮ ಕಾಲೇಜಿಗೆ ಬಂದದ್ದರಿಂದ ನಾವು ಬಹಳ ಸಂತೋಷಿಸುತ್ತೇವೆ." ಎಂದು ಅಭಿಪ್ರಾಯ ಪಡುತ್ತಾರೆ.

ಪ್ರೊ. ವ್ಹಿ.ಜಿ. ಕುಲಕರ್ಣಿ ಅವರು ಇವರನ್ನು ಕುರಿತು ಸಾಹಿತ್ಯದಲ್ಲಿ ಉತ್ಸಾಹ ಹೊಂದಿದವರೆಂದು ಹೇಳಿದ ಮಾತು ನಿಜವೆನಿಸುತ್ತದೆ. ಅಧ್ಯಯನದಲ್ಲಿ ಅವರು ಎಂದೂ ಆಸಕ್ತಿಯನ್ನು ಕಳೆದುಕೊಂಡವರಲ್ಲ. ಪ್ರಾಧ್ಯಾಪಕರಾದಾಗ ಹಲವಾರು ಆಧಾರ ಗ್ರಂಥಗಳನ್ನು ಅಧ್ಯಯನ ಮಾಡಿದ್ದಾರೆ. 1944-45 ರ ಶೈಕ್ಷಣಿಕ ವರ್ಷದಲ್ಲಿ ಸುಮಾರು 125 ಗ್ರಂಥಗಳನ್ನು ಕಾಲೇಜಿನ ವಾಚನಾಲಯದಿಂದ ಪಡೆದು ಓದಿದ ಬಗ್ಗೆ ದಾಖಲೆಯೇ ಇದೆ. ಈ ಪುಸ್ತಕಗಳ ಯಾದಿಯನ್ನು ಪರಿಶೀಲಿಸಿದಾಗ ಅವರ ಒಲವು ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಕನ್ನಡ ಸಾಹಿತ್ಯ ಪ್ರಾಚೀನ ಗ್ರಂಥಗಳು, ಆಂಗ್ಲ ಸಾಹಿತ್ಯ, ವೈಜ್ಞಾನಿಕ ಪುಸ್ತಕಗಳು, ಸಂಸ್ಕೃತ ಗ್ರಂಥಗಳನ್ನು ಓದಿದ್ದಾರೆ. ಈ ರೀತಿಯ ಅಧ್ಯಯನದ ಫಲಶೃತಿಯೇ ಅವರ ಶೂನ್ಯ ಸಂಪಾದನೆಯ ಪರಾಮರ್ಶೆ ಮತ್ತು ಭವ್ಯ ಮಾನವ ರಚನೆಯೆಂದು ಹೇಳಬಹುದು.

ಬೆಳಗಾವಿಯಲ್ಲಿ 23 ವರ್ಷ ಶಿಕ್ಷಕ ವೃತ್ತಿಗೆ ಗೌರವ ತರುವಂತೆ ಸೇವೆ ಸಲ್ಲಿಸಿ ನಿವೃತ್ತರಾದರು. ಆ ಕಾಲದಲ್ಲಿ ಅವರಿಂದ ಉಪಕೃತರಾದವರು ಎಷ್ಟೋ ಜನ "ಶಿಷ್ಯರನ್ನು ನೋಡಿ ಗುರುವನ್ನು ತಿಳಿ" ಎಂಬುದೊಂದು ಗಾದೆ. ಅದಕ್ಕೆ ತಕ್ಕಂತೆ ಪ್ರೊ. ಭೂಸನೂರಮಠ ಅವರು ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ವೇಳೆಯಲ್ಲಿ ಡಾ. ಆರ್.ಸಿ. ಹಿರೇಮಠ, ಡಾ. ಎಂ.ಎಸ್. ಸುಂಕಾಪೂರ ಮೊದಲಾದವರು ಆ ಗರಡಿಯಲ್ಲಿ ಪಳಗಿದರು ಎಂಬುದನ್ನು ಕೇಳಿದರೆ ಎಷ್ಟೋ ಹೆಮ್ಮೆ ಎನ್ನಿಸುತ್ತದೆ ಎಂಬ ಡಾ. ಬಿ.ವಿ ಶಿರೂರ ಅವರ ಮಾತುಗಳನ್ನು ಇಲ್ಲಿ ನೆನೆಯಬಹುದಾಗಿದೆ.

ಪ್ರೊ. ಭೂಸನೂರಮಠ ಅವರ ಶಿಷ್ಯ ಬಳಗದಲ್ಲಿ ಪ್ರಾ. ಎಸ್.ಜಿ. ವಾರಿ, ಡಾ. ಚಂದ್ರಶೇಖರ ಕಂಬಾರ ಅವರನ್ನು ಮರೆಯುವಂತಿಲ್ಲ ಇವರೆಲ್ಲ ಭೂಸನೂರಮಠ ಅವರ ಪಾಠ ಪ್ರವಚನಗಳನ್ನು ಅತ್ಯಂತ ಹತ್ತಿರದಿಂದ ಕೇಳಿದವರು. ವಿದ್ಯಾರ್ಥಿಗಳು ತಮ್ಮಲ್ಲಿ ಯೋಗ್ಯತೆ ಇದ್ದಷ್ಟು ಅವರಿಂದ ಜ್ಞಾನವನ್ನು ಪಡೆಯುತ್ತಿದ್ದರು. "ಕೆಲವೊಮ್ಮೆ ಒಬ್ಬರೇ ಇದ್ದರೂ ಕೂಡಾ ಕ್ಲಾಸನ್ನು ತೆಗೆದುಕೊಳ್ಳುತ್ತಿದ್ದರು. ಆ ಪಾಠಗಳು ಮಾತ್ರ ಅದ್ಭುತ ಆಗ ಕಣ್ಣು ಮುಚ್ಚಿಕೊಂಡು ಅವರು ಪಾಠ ಮಾಡುತ್ತಿದ್ದರು. ಹೇಳ್ತಾ ಹೇಳ್ತಾ ಎಲ್ಲೋ ಒಂದೂ ಚೂರು ವಚನಕಾರರ, ಶೂನ್ಯ ಸಂಪಾದನೆಯ ಉಲ್ಲೇಖ ಬಂದಿತೆಂದರೆ ಸಾಕು ನಾನೂ ಕೂಡ ಅಂಥ ಕ್ಷಣಕ್ಕಾಗಿಯೇ ಕಾಯುತ್ತಿದ್ದೆ, ಅವರು ಹೇಳುವ ವಿಚಾರಗಳೆಲ್ಲ ಪುಸ್ತಕಗಳಲ್ಲಿ ದೊರೆಯುತ್ತಿರಲಿಲ್ಲ, ವಚನಕಾರರು, ಕನ್ನಡ ಸಾಹಿತ್ಯ, ಸಂಸ್ಕೃತ ಸಾಹಿತ್ಯ, ವಿಜ್ಞಾನ ಇವೆಲ್ಲವನ್ನು ಸೇರಿಸಿ ವಿಷಯವನ್ನು ಕಟ್ಟುತ್ತಾ ಸಾಗುತ್ತಿದ್ದರು. ಅಂಥ ಕೆಲವು ಕ್ಲಾಸಗಳನ್ನು ಕೇಳಿದರೆ ಸಾಕು ಧನ್ಯ ಎನಿಸುತ್ತಿತ್ತು. ಇಂಥ ಸಮಯದಲ್ಲಿ ಅವರು ಭೂಸನೂರಮಠರೇ ಅಲ್ಲ, ಸಾಕ್ಷಾತ ಅಲ್ಲಮ ಪ್ರಭು ಅಥವಾ ದೇವರು ಆಗುತ್ತಿದ್ದರು. ನಾನು ಅವರನ್ನು ಅನಗತ್ಯವಾಗಿ ದೇವರನ್ನಾಗಿ ಮಾಡುತ್ತಿದ್ದೇನೆಂದು ಭಾವಿಸಬೇಡಿ, ನನ್ನ ಅವರ ಸಂಬಂಧ ಎರಡು ಲೋಕಗಳ ಕನಸುಗಳಿಗೆ ಸಂಬಂಧಪಟ್ಟದ್ದು ನನ್ನ ಜೀವಮಾನದಲ್ಲಿ ಮತ್ತೆ ಅಂಥಹದು

ಘಟಿಸುವುದು ಸಾಧ್ಯವೇ ಇಲ್ಲ. ಅಂಥ ಅಗಾಧವಾದ ಅನುಭವವನ್ನು ನನಗೆ ಪ್ರೊ. ಭೂಸನೂರಮಠ ಅವರು ಕೊಟ್ಟರು. ಅದೇ ನನ್ನ ಬದುಕಿನ ಪರಮೋತ್ಕೃಷ್ಟ ಕ್ಷಣ. ಅವರು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತಿದ್ದರು. ಜ್ಞಾನದ ಹಸಿವನ್ನು ಕೆರಳಿಸುತ್ತಿದ್ದರು. ಅವರಲ್ಲಿ ಕನಸುಗಳನ್ನು ಸೃಷ್ಟಿಸುತ್ತಿದ್ದರು. ನಾನು ಇಲ್ಲಿಯವರೆಗೆ ಬರೆದಿದ್ದೆನಲ್ಲಾ ಅದು ಅವರೇ ಕೆರಳಿಸಿದ್ದು, ಪ್ರತಿಭೆ ಇದ್ದರೆ ಸಾಕು ಜಾತಿಮತ ಪಂಥಗಳ ಬೇಧವಿಲ್ಲದೆ ಅಂಥವರಿಗೆ ಪ್ರೋತ್ಸಾಹ ಕೊಡುತ್ತಿದ್ದರು. ಎಲ್ಲ ರೀತಿಯ ಸಹಾಯವನ್ನು ನೀಡುತ್ತಿದ್ದರು ವಿಶೇಷವಾಗಿ ಪ್ರತಿಭೆಯನ್ನು ಗುರುತಿಸುವ ಕಲೆ ಅವರಿಗೆ ಗೊತ್ತಿತ್ತು ಬೇರೆಯವರಿಗೆ ಒಳ್ಳೆಯದಾದರೆ ತಾವು ಸಂತೋಷಪಡುತ್ತಿದ್ದರು. ಹೂವು ಅರಳಿದಂತೆ ಅರಳುತ್ತಿದ್ದರು. ಅವರ ಹೃದಯ ಅರಳುವುದನ್ನು ಕಣ್ಣಾರೆ ಕಾಣಬಹುದಿತ್ತು" ಎಂದು ಅವರ ಶಿಷ್ಯರಾದ ಡಾ. ಚಂದ್ರಶೇಖರ ಕಂಬಾರವರು ಅಭಿಪ್ರಾಯ ಪಡುತ್ತಾರೆ.

ಪ್ರೊ. ಭೂಸನೂರಮಠ ಅವರು ತರಗತಿಯಲ್ಲಿ ಭಾವುಕತೆಯಿಂದ ವಿಷಯ ವಿವರಣೆ ಮಾಡುತ್ತಿದ್ದರು. ಅವರು ಪಾಠ ಪ್ರವಚನದಲ್ಲಿ ಹೇಗೆ ತಲ್ಲೀನರಾಗುತ್ತಿದ್ದರು ಎಂಬ ಅಂಶ ಇದರಿಂದ ಸ್ಪಷ್ಟವಾಗುತ್ತಿದೆ. ಇಂಥ ಅನುಭವಗಳು ಡಾ. ವಾರಿ ಅವರಿಗೂ ಆಗಿವೆ. ಈ ಕಾರಣದಿಂದಲೇ ಅವರೊಬ್ಬ ಆದರ್ಶ ಪ್ರಾಧ್ಯಾಪಕ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ತಾವು ಹಿಡಿದ ಈ ಉದ್ಯೋಗದ ಬಗ್ಗೆ ಸ್ವಂತಃ ಭೂಸನೂರಮಠ ಅವರಿಗೆ ಅತ್ಯಂತ ತೃಪ್ತಿ ಇತ್ತು. ಈ ಕಾರಣದಿಂದಲೇ ಅವರು ಕುಲ, ಜಾತಿ, ಮತ, ಪಂಥಗಳನ್ನು ಎಣಿಸದೆ ಎಲ್ಲರಿಗೂ ಸಮನಾದ ವಿದ್ಯಾದಾನ ಮಾಡುತ್ತಿದ್ದರು. "ಇಂಥ ಅನುಕೂಲ ವಾತಾವರಣದಲ್ಲಿ 23 ವರ್ಷ ಶಿಕ್ಷಕನಾಗಿ, ಆತ್ಮೀಯ ಸೇವೆ ಸಲ್ಲಿಸಿದೆ. ಅಂದು ಕರ್ನಾಟಕ ಕಾಲೇಜಿಗಿಂತ ಲಿಂಗರಾಜ ಕಾಲೇಜ ಒಳ್ಳೆಯ ಪ್ರಗತಿಯ ಮಾರ್ಗದಲ್ಲಿ ಧಾವಿಸಿತ್ತು. ನಮ್ಮ ಕನ್ನಡ ಆನರ್ಸ ವಿಷಯದ ವಿದ್ಯಾರ್ಥಿಗಳ ಸಂಖ್ಯೆ: ಬೆರಳೆಣಿಕೆಯಷ್ಟು ಇತ್ತು ಈಗ ನಮ್ಮವರೇ ಇಂದಿನ ಬಹಳಷ್ಟು ವಿಶ್ವ ವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಈ ಹೆಮ್ಮೆ ಈ ತೃಪ್ತಿ ಇಂದಿಗೂ ನನಗೆ ಇದೆ. ಈ ಸಂದರ್ಭದಲ್ಲಿ ನನ್ನ ಬಗ್ಗೆ ಇನ್ನೊಂದು ಮಾತು ಹೇಳಬೇಕು ಕುಲಜಾತಿ ಯಾವುದೆ ಇರಲಿ ಬಡವ ಬಲ್ಲಿದರಿರಲಿ, ಸಜ್ಜನ ವಿದ್ಯಾರ್ಥಿಗಳ ಬಗ್ಗೆ ನನ್ನ ಆಸಕ್ತಿ ಹೆಚ್ಚು ಅವರಿಗೆ ಏನೇ ಕಷ್ಟ ನಷ್ಟಗಳ ಪ್ರಸಂಗ ಒದಗಿದರೂ ಅವರ ಯೋಗಕ್ಷೇಮ ನನ್ನದೆಂಬ ಭಾವನೆಯಿಂದ ಅವರ ಕಷ್ಟ ನಷ್ಟಗಳನ್ನು ಪರಿಹರಿಸಿ ಕಲ್ಯಾಣ ಮಾಡಲು ನಾನು ಹವಣಿಸುತ್ತಿದ್ದೆ ಈ ನನ್ನ ಸಂಪ್ರದಾಯ ಜೀವನದುದ್ದಕ್ಕೂ ಹರಿದು ಬಂದಿದೆ. ನನಗೆ ಇದು ಒಂದು ವಿಶೇಷ ತೃಪ್ತಿ. ನನ್ನ ಕಕ್ಷೆಯಲ್ಲಿ ಬಂದ ವಿದ್ಯಾರ್ಥಿಗಳು ಇಂದಿಗೂ ತಮ್ಮ ಕೃತಜ್ಞತಾಭಾವವನ್ನು ಇರಿಸಿಕೊಂಡಿದ್ದಾರೆ." ಎಂದು ಭೂಸನೂರಮಠ ಅವರೇ ಅಭಿಪ್ರಾಯಪಟ್ಟಿದ್ದಾರೆ.

ಅವರ ಶಿಷ್ಯರಲ್ಲಿ ಒಬ್ಬರಾದ ಡಾ. ಗಂಗಮ್ಮ ಸತ್ಯಂಪೇಟೆ ಎಂಬವರು "ಪ್ರೊ. ಭೂಸನೂರಮಠ ಅವರು ನನ್ನ ವಿದ್ಯಾ ಗುರುಗಳು ಮಾತ್ರ ಅಲ್ಲ, ನನ್ನ ಬದುಕಿಗೆ ವಚನಸಾಹಿತ್ಯದ ಕಟ್ಟು ಒದಗಿಸಿ, ಅದರ ಬೆಳಕನ್ನು ನೀಡಿದ ಗುರುಗಳೂ ಹೌದು, ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪು ಎತ್ತಣಿಂದೆತ್ತ ಸಂಬಂಧವಯ್ಯಾ ಎನ್ನುವಂತೆ ಹಾಸನ ಜಿಲ್ಲೆಯವಳಾದ ನನಗೆ ಧಾರವಾಡ ಜಿಲ್ಲೆಯ ಈ ಅನುಭಾವಿ ಸಂ.ಶಿ. ಭೂಸನೂರಮಠರ ಶಿಷ್ಯಳಾಗಿ ಅಭ್ಯಾಸ

ಮಾಡುವ ಯೋಗ ಬಂದುದು ನನ್ನ ಜೀವನದ ಮಹತ್ವದ ಘಟ್ಟವೆಂದೇ ನಾನು ಭಾವಿಸಿದ್ದೇನೆ. ಪೂಜ್ಯ ಭೂಸನೂರಮಠರರು ಸಾಮಾನ್ಯ ವ್ಯಕ್ತಿಗಳಾಗಿರಲಿಲ್ಲ. ಹನ್ನೆರಡನೆಯ ಶತಮಾನದ ಪಳಿಯುಳಿಕೆಯೊಂದು ಮೈವೆತ್ತಿ ಬಂದಂತೆ; ಅದೇ ಬದುಕನ್ನು ಮತ್ತೆ ಈ ಇಪ್ಪತ್ತನೆಯ ಶತಮಾನದಲ್ಲಿ ಬದುಕಿಹೋದ ಮಹಾಶಿವಶರಣರು ಅನೇಕರಿಗೆ ಈ ಮಾತು ಅತಿಶಯೋಕ್ತಿಯಾಗಿ ಕಾಣಬಹುದು. ಆದರೆ ಅವರನ್ನು ಹತ್ತಿರದಿಂದ ಕಂಡ ನನಗೆ ಭೂಸನೂರಮಠರು ನಿಜಕ್ಕೂ ಹನ್ನೆರಡನೆಯ ಶತಮಾನದ ದಿವ್ಯ ಚೇತನವೆಂದು ಅಭಿಪ್ರಾಯ ಪಡುತ್ತಾರೆ. ಡಾ. ಗಂಗಮ್ಮ ಅವರು ಕೇವಲ ಶಿಷ್ಯಳೆಂಬ ಅಭಿಮಾನದಿಂದ ಹೇಳಿದ ಮಾತುಗಳಲ್ಲ. ಅವರ ಕೈಯಲ್ಲಿ ಕಲಿತ ಎಲ್ಲರಿಗೂ ಅನ್ವಯಿಸುವ ಮಾತಾಗಿದೆ. ಎಂಬುದು ಪ್ರೊ. ಭೂಸನೂರಮಠರವರನ್ನು ಬಲ್ಲ ಎಲ್ಲರಿಗೂ ತಿಳಿದ ವಿಷಯವಾಗಿದೆ.

ಪ್ರೊ. ಭೂಸನೂರಮಠ ಅವರಲ್ಲಿ ವಿದ್ಯಾರ್ಥಿಗಳು ಎಂಥ ಭಕ್ತಿ ಗೌರವಾದರಗಳನ್ನು ಇರಿಸಿಕೊಂಡಿರುವರೋ ಅದಕ್ಕಿಂತಲೂ ಹೆಚ್ಚಿನ ಗೌರವಾದರಗಳನ್ನು ಭೂಸನೂರಮಠ ಅವರು ತಮ್ಮ ಗುರುಗಳಲ್ಲಿ ಇರಿಸಿಕೊಂಡಿದ್ದರು. ಇದಕ್ಕೆ ಉದಾಹರಣೆಯಾಗಿ ಡಾ. ಮ.ಗುಂ. ಬಿರಾದಾರ ಅವರು ಉಲ್ಲೇಖಿಸುವ ಈ ಒಂದು ಘಟನೆಯನ್ನು ಹೇಳಬಹುದು. “ನಾನು ಪಿ. ಎಚ್.ಡಿ. ಮಾಡುವಾಗ ಒಂದು ಸಮಸ್ಯೆ ಕುರಿತು ಸುದೀರ್ಘ ವಿಚಾರ ವಿನಿಮಯ ನಡೆಯಿತು ರತ್ನಾಕರವರ್ಣಿ ವೀರಶೈವನಾಗಿದ್ದಾನೆ? ಎಂಬ ಪ್ರಶ್ನೆ ಕುರಿತಂತೆ ಹಲವಾರು ಪಂಡಿತರ ಜೊತೆಗೆ ಚರ್ಚಿಸಿದನು ಆದರೂ ಪ್ರೊ. ಕುಂದಣಗಾರ ಅವರಿಗೆ ಬೆಳಗಾಂವದಲ್ಲಿಯೇ ಇದ್ದ ತಮ್ಮ ವಿದ್ಯಾರ್ಥಿ, ಪಂಡಿತರೂ ವೀರಶೈವ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿ ಅರಗಿಸಿಕೊಂಡರು ಪ್ರೊ. ಎಸ್.ಎಸ್. ಭೂಸನೂರಮಠ ರ ಮನೆಗೆ ಹೋಗಿ ಅವರಿಗೆ ಅನುಕೂಲವಾಗುವ ದಿನ, ಕೇಳಿ ಒಂದು ಮುಂಜಾನೆ ಅವರ ಮನೆ ಹುಡುಕಿಕೊಂಡು ಹೋದಾಗ ಆರ್.ಪಿ.ಡಿ ಕಾಲೇಜಿನಲ್ಲಿ ಪರೀಕ್ಷೆಯ ಕೆಲಸದಲ್ಲಿದ್ದುದು ತಿಳಿಯಿತು. ಬಹಳ ಒಳ್ಳೆಯದಾಯ್ತು ಎಂದು ನೇರವಾಗಿ ಕಾಲೇಜಿಗೆ ಹೋಗಿ ವಿಷಯ ನಿವೇದಿಸಿದೆ. ತಮ್ಮ ಮನೆಗೆ ಬರುತ್ತಾರೆಂಬುದನ್ನು ತಿಳಿದು, ಕುತೂಹಲಗೊಂಡ ಅವರು ಅವರ್ಯಾಕೆ ಬರ್ತಾರಂತೆ? ಅವರು ನನ್ನ ಗುರುಗಳು, ನಾನೇ ಅವರ ಮನೆಗೆ ಬರುತ್ತೇನೆ ಎಂದು ಹೇಳಿದರು. ಅದರಂತೆ ಡಾ. ಬಿರಾದಾರರು ಬಂದು ಗುರುಗಳಿಗೆ ವರದಿ ಒಪ್ಪಿಸಿದೆ. ಪ್ರೊ. ಕುಂದಣಗಾರರು ಏನೋ ಅಘಾತವಾದಂತೆ ಬ್ಯಾಡ ಬ್ಯಾಡ ಅವ್ರ ಬರೂದ ಬ್ಯಾಡ ಅವ್ರ ನನ್ನ ವಿದ್ಯಾರ್ಥಿ ಆದ್ರೇನಾತು ಅವ್ರು ದೊಡ್ಡ ವಿದ್ವಾಂಸರು, ನಾವೀಗ ವಿದ್ಯಾರ್ಥಿಗಳಾಗಿ ಅವ್ರ ಕಡೆಗಿ ಹೋಗಬೇಕು ನಾವು ಯಾವಾಗ ಬರಬೇಕು ಇನ್ನೊಮ್ಮೆ ಕೇಳಿ ಬರಿ ಎಂದು ಕಳಿಸಿದರು. ನಾನು ಮತ್ತೆ ಕಾಲೇಜಿಗೆ ಹೋಗಿ ಇಲ್ಲಾ ಸರ್ ಅವ್ರ ಮನಿಗೆ ಬರ್ತಾರಂತೆ ಸಮಯ ಕೇಳಿಕೊಂಡು ಬರಲು ಹೇಳಿದರು ಎಂದೆನು. ತೀರ ಗಾಬರಿಯಾದ ಪ್ರೊ. ಭೂಸನೂರಮಠ ಅವರು ಒಂದು ಗಳಿಗೆ ಯೋಚಿಸಿ ಯಾಕ ಬರ್ತಾರಂತೆ? ಆಗಲಿ ರವಿವಾರ ಕಾಯ್ದಿರಿನಿ ಎಂದರು. ಆ ಪರಮಗುರುಶಿಷ್ಯರ ಮಧ್ಯ ಈ ಮರಿಶಿಷ್ಯ ಓಡಾಡುತ್ತ ಗುರುಗೌರವದ ಪವಿತ್ರ ಪಾಠ ಕಲಿತೆನು. ರವಿವಾರ ಮುಂಜಾನೆ ಒಂಬತ್ತು ಗಂಟೆಗೆ ನಾನು ನನ್ನ ಗುರುಕುಂದಣಗಾರ ಕೂಡಿ ಪ್ರೊ. ಭೂಸನೂರಮಠ ಅವರ ಮನೆಗೆ ಹೋದೆವು ಪ್ರೊ. ಭೂಸನೂರಮಠರು ಕೈಜೋಡಿಸಿ ಲಘುವಾಗಿ ನಿಂತು ಕುಂದಣಗಾರರನ್ನು ಸ್ವಾಗತಿಸಿದ

ರೀತಿಯನ್ನು ನೋಡಿ ನನ್ನ ಮನದ ಮಬ್ಬು ಹರಿಯಿತು ಕಣ್ಮುಂದೆಕಾವ್ಯಲೋಕ ತೆರೆಯಿತು. ಆ ಗುರುಶಿಷ್ಯರ ಸಮಾಗಮ ಪ್ರತ್ಯಕ್ಷದರ್ಶಿಯಾದ ನನಗೆ ಗುರುತ್ವದ ಅರಿವು ಮೂಡಿಸಿತು. ಪ್ರೊ. ಭೂಸನೂರಮಠ ಅವರ ಗುರುಭಕ್ತಿ ಅವರು ತೋರಿದ ಆದರಾಭಿಮಾನ ಪ್ರೀತಿ - ವಿಶ್ವಾಸಗಳು ನನಗೆ ಇಂದಿಗೂ ಬೇರೆ ಕಡೆಗೆ ಕಾಣಸಿಕ್ಕಿಲ್ಲ ಎಂದು ವಿವರವಾಗಿ ಹೇಳಿದ್ದಾರೆ.

ಹೀಗೆ ಭೂಸನೂರಮಠ ಅವರು ಮೊದಲು ತಾವು ಶರಣರ ದಾರಿಯಲ್ಲಿ ನಡೆದರು ಉಳಿದವರೂ ಹಾಗೆಯೇ ಸಾಗಲಿ ಎಂದು ಬಯಸುತ್ತಿದ್ದರು. ವಿದ್ಯಾರ್ಥಿಗಳು ಓದಿ ಮುಂದೆ ಬರಬೇಕು ದೇಶದ ಉನ್ನತ ಸ್ಥಾನವನ್ನು ಅಲಂಕರಿಸಬೇಕು. ಅದನ್ನು ನೋಡಿದಾಗಲೇ ತಮಗೆ ತೃಪ್ತಿ ಎಂದು ಪದೇ ಪದೇ ತಮ್ಮ ವಿದ್ಯಾರ್ಥಿಗಳನ್ನು ಕಂಡಾಗ ಆನಂದಿಸುತ್ತಿದ್ದರು.

ವಿದ್ಯಾರ್ಥಿಗಳು ವಿದ್ಯಾರ್ಥಿಗಳೇ ಆಗಿರಬಾರದು ಕೇವಲ ನಮಸ್ಕಾರ ಮಾಡುವವರೇ ಆಗಿ ಉಳಿಯಬಾರದು ಅವರೂ ಮುಂದುವರೆದು ಉನ್ನತ ಸ್ಥಾನವನ್ನು ಪಡೆಯಬೇಕು. ಈಗ ನಿಮ್ಮ ಕಾಲೇಜಿನ ಪ್ರಿನ್ಸಿಪಾಲರಾದ ಚರಂತಿಮಠರು ಒಂದು ಕಾಲಕ್ಕೇ ನನ್ನ ಒಳ್ಳೆಯ ಶಿಷ್ಯರಾಗಿದ್ದರು. ಅವರು ನಾನು ಬರುತ್ತಲೇ ತಮ್ಮ ಖುರ್ಚಿಯಿಂದೆದ್ದು ನಿಂತು ನನ್ನನ್ನು ಕೂಡಿಸಲೆಂದಾಗ ನಾನು ಹೇಳಿದೆ ಇಲ್ಲ ನೀವು ಆ ಉನ್ನತ ಸ್ಥಾನದಲ್ಲಿ ಕುಳಿತಿರುವುದನ್ನು ನಾನು ಕಣ್ಣುಂಬ ನೋಡಬೇಕು ನೀವು ಅಲ್ಲಿಯೇ ಕೂಡಬೇಕು" ಎಂದೆ ಎಂದು ಪ್ರೊ. ಭೂಸನೂರಮಠ ಅವರು ಗದುಗಿನ ಜಗದ್ಗುರು ತೋಂಟದಾರ್ಯ ಕಾಲೇಜಿನಲ್ಲಿ ಅವರಿಗಾಗಿ ಏರ್ಪಡಿಸಿದ ಸತ್ಕಾರ ಸಮಾರಂಭದ ಭಾಷಣದಲ್ಲಿ ಹೇಳಿದ್ದಾರೆ.

ಇವರು ವಿಷಯಗಳನ್ನು ನೋಡುವ ಅರಗಿಸಿಕೊಳ್ಳುವ ರೀತಿ ಉಳಿದವರಿಂದ ಭಿನ್ನವಾಗಿರುತ್ತಿತ್ತು. ಯಾವ ಆಂಗ್ಲ ಪ್ರಾಧ್ಯಾಪಕರೂ ತಿಳಿಯದಷ್ಟು ಸುಂದರವಾಗಿ ಭೂಸನೂರಮಠ ಅವರು ಶೇಕ್ಸಪೀಯರನನ್ನು ಅರಿತಿದ್ದರು. ಇವರು ಅರ್ಥೈಸಿಕೊಂಡ ಶೇಕ್ಸಪೀಯರನಿಗೂ ಉಳಿದವರು ತಿಳಿದುಕೊಂಡ ಶೇಕ್ಸಪೀಯರನಿಗೂ ತುಂಬಾ ಅಂತರವಿದೆ. ನಿಡಗುಂದಿಯ ಆ ಪರಿಸರದಲ್ಲಿ ಹುಟ್ಟಿ ಬೆಳೆದ ಶೇಕ್ಸಪೀಯರನನ್ನು ಇವರು ಕಂಡಿದ್ದಾರೆ. ಇವರು ಕಂಡ ಬುದ್ದ ಬಸವ, ಅಲ್ಲಮರೇ ಬೇರೆ; ಇವರಿಗೆ ಖಾಸಗಿಯಾಗಿ ಭೇಟಿಯಾದ ಐನಸ್ಟೈನ್ನನೆ ಬೇರೆ, ಹೀಗೆ ಇವರು ಮಹಾನ ವ್ಯಕ್ತಿಗಳನ್ನು ಕಾಣುವ ದೃಷ್ಟಿಕೋನವೇ ಬೇರೆ ಬೇರೆಯಾಗಿತ್ತು. ಎಲ್ಲರಲ್ಲಿಯೂ ಏನಾದರೂ ಒಂದು ಹೊಸತನವನ್ನು ಹುಡುಕುತ್ತಿದ್ದರು. ಅದನ್ನು ಗುರುತಿಸುತ್ತಿದ್ದರು. ಆಧ್ಯಾತ್ಮಿಕ ತಳಪಾಯದಲ್ಲಿಯೇ ಇವನ್ನೆಲ್ಲ ಚಿಂತಿಸಿ ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುತ್ತಿದ್ದರು. ಈ ಕಾರಣದಿಂದಲೇ ಇವರು ಎಲ್ಲರಿಗಿಂತ ಭಿನ್ನರಾಗಿ ಪಾಠ ಮಾಡುತ್ತಿದ್ದರು. ವಿದ್ಯಾರ್ಥಿಗಳನ್ನು ತಮ್ಮತ್ತ ಸೆಳೆಯುತ್ತಿದ್ದರು.

## ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆ

ಬೆಳಗಾವಿಯ ಲಿಂಗರಾಜ ಕಾಲೇಜಿನಿಂದ ನಿವೃತ್ತರಾದ ಮೇಲೆ ಪ್ರೊ. ಭೂಸನೂರಮಠ ಅವರು ವಿಶ್ರಾಂತಿ ಜೀವನಕ್ಕೆ ತಿರುಗಲಿಲ್ಲ ಮತ್ತೆ ಹತ್ತು ವರ್ಷಗಳ ಕಾಲ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜೂನ್ 1966 ರಿಂದ 1971 ರವರೆಗೆ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ಲಿಂಗರಾಜ ಕಾಲೇಜಿನಲ್ಲಿ ಸೇವಾವಧಿಯ ಕೊನೆಗೆ ಪಡೆಯುತ್ತಿದ್ದ 600 ರೂಪಾಯಿಯ ವೇತನ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಲ್ಲಿ ಪ್ರಾರಂಭದಲ್ಲಿಯೇ 1000 ರೂಪಾಯಿಗೇರಿತ್ತು. ಜೊತೆಗೆ ವಾಸಕ್ಕೆ ಬಂಗಲೆಯೂ ದೊರೆಯಿತು. ಈ ಅವಧಿಯಲ್ಲಿ ಎಂ.ಎ. ವಿದ್ಯಾರ್ಥಿಗಳಿಗೆ ವಾರಕ್ಕೆ 3 - 4 ಅವಧಿ ಪಾಠಗಳನ್ನು ತೆಗೆದುಕೊಳ್ಳುತ್ತಿದ್ದರು.

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಆಗಮಿಸಿ ಅವರು ಮಾಡಿದ ಕಾರ್ಯಗಳಲ್ಲಿ ಶೂನ್ಯ ಸಂಪಾದನೆಯ ಇಂಗ್ಲೀಷ ಅನುವಾದ ಪ್ರಮುಖವಾದುದು. ಈ ಅವಧಿಯಲ್ಲಿ ಐದು ಸಂಪುಟಗಳಲ್ಲಿ ಈ ಕಾರ್ಯ ಪೂರ್ಣಗೊಂಡಿತ್ತು. "ಐದು ವರ್ಷಗಳ ಅವಧಿಯಲ್ಲಿ ಅವ್ಯಾಹತವಾಗಿ ಕೆಲಸ ಮಾಡಿದೆ. ಆಗ ನನ್ನ ಸಹಾಯಕರಾಗಿದ್ದ ಶ್ರೀ ಶೆಟ್ಟರ ಮಾಸ್ತರು, ಶ್ರೀ ಕಂಬಿ ಮುಂತಾದವರು ಸಹಾಯಕ ಸಿಬ್ಬಂದಿಯಾಗಿ ದುಡಿದರು, ಈ ಯೋಜನೆಯಲ್ಲಿ ಆಂಗ್ಲಭಾಷಾ ತಜ್ಞರಾದ ಪ್ರೊ. ಎ. ಮೆನೆಂಜಿಸ್‌ರು ಸಹಾಯ ಸಹಕಾರ ನೀಡಿದರು. ವಿದ್ಯಾ-ಬುದ್ಧಿಸಂಪನ್ನರಾಗಿ, ಸಮರ್ಥರಾಗಿದ್ದ ಅವರ ಹೃದಯ ವಿಶಾಲ ಬುದ್ಧಿ, ಒಳ್ಳೆಯ ಹರಿತ ವಿದ್ಯೆ, ಅಸಾಧಾರಣ ಪ್ರತಿಭೆಯಿಂದ ಕೂಡಿತ್ತು. ನಾವು ಕೂಡಿ ಕೆಲಸಮಾಡಿದ ಐದು ವರ್ಷಗಳ ಪರಿಣಾಮದ ಫಲವೆಂದರೆ ಶೂನ್ಯ ಸಂಪಾದನೆ ಸಂಪೂರ್ಣ ಅನುವಾದವಾಗಿ ಆಂಗ್ಲಭಾಷೆಯಲ್ಲಿ ಪ್ರಕಟವಾದದ್ದು. ಈ ಅವಧಿಯಲ್ಲಿ ಮತ್ತೆ ಮೂರು ಸಂಪುಟಗಳು ಹೊರ ಬಂದವು. ಕೊನೆಯದಾದ ಐದನೆಯ ಸಂಪುಟದಲ್ಲಿ 10-15 ವಚನಗಳ ಟೀಕೆ ಟಿಪ್ಪಣೆಗಳನ್ನುಳಿದು ಸಮಗ್ರ ಗ್ರಂಥ ಮುದ್ರಣಕ್ಕೆ ಸಿದ್ಧವಾಗಿತ್ತು ಆಗ ನನ್ನ ಅವಧಿ ಮುಗಿದದ್ದರಿಂದ ನನ್ನ ಪ್ರಧಾನ ಸಂಪಾದಕತ್ವ ಹೋಯಿತು ಇದು ವಿಶ್ವವಿದ್ಯಾಲಯದ ನಿಯಮ; ಏನೇ ಇರಲಿ, ಶೂನ್ಯ ಸಂಪಾದನೆಯು ಆಂಗ್ಲಭಾಷೆಗೆ ಪರಿವರ್ತನವಾದ ಐದು ಸಂಪುಟಗಳು ಪೂರ್ತಿಯಾಗಿ ವಿಶ್ವ ವಿದ್ಯಾಲಯದಿಂದ ಮುದ್ರಣಗೊಂಡವು. ಇದೊಂದು ಪರಮ ಸಂತೋಷ, ಸಂಪೂರ್ಣ ಸಂತೃಪ್ತಿ ನನಗಾಗಿದೆ" ಎಂದು ಪ್ರೊ. ಭೂಸನೂರಮಠ ಅವರೇ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಅವರು ಅಲ್ಲಿಯ ಸಹ ಪ್ರಾಧ್ಯಾಪಕರಲ್ಲಿ ಅತ್ಯಂತ ಸಹಕಾರ ಸಹಾಯಗುಣ ಬೆಳೆಸಲು ಶ್ರಮಿಸಿದರು. ಕಿರಿಯ ಅಧ್ಯಾಪಕರು ಎಲ್ಲಿಯಾದರೂ ಎಡವಿದರೆ ಕೂಡಲೇ ತಿದ್ದಿ ಸರಿಪಡಿಸುತ್ತಿದ್ದರು. ಇದಕ್ಕೆ ಪೂರಕವಾಗಿ ಡಾ. ಬಿ.ಸಿ. ಜವಳಿ ಅವರ ಹೀಗೆ ಹೇಳುತ್ತಾರೆ. "ಲಿಂಗರಾಜ ಕಾಲೇಜಿನಲ್ಲಿ ನಿವೃತ್ತಿ ಹೊಂದಿ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗಕ್ಕೆ ಪ್ರಾಧ್ಯಾಪಕರಾಗಿ ಆಗಮಿಸಿ ಶೂನ್ಯ ಸಂಪಾದನೆಯನ್ನು ಇಂಗ್ಲೀಷ ಭಾಷೆಗೆ ಭಾಷಾಂತರ ಮಾಡುವ ಗುರುತರ ಹೊಣೆ ಹೊತ್ತು, ಐದು ಸಂಪುಟಗಳಲ್ಲಿ ಆ ಕಾರ್ಯ ಮುಗಿಸಿದರು. ಆಗ ಅವರ ನನ್ನ ಸಂಬಂಧವು ಹತ್ತಿರ ಹತ್ತಿರವಾಯಿತು. ಅವರು ಆಗ ಒಮ್ಮೆ ಬಿ. ಎ. ಪರೀಕ್ಷೆಗೆ (ಕನ್ನಡ) ಚೇರಮನ್ ಆಗಿದ್ದರು. ನಾನು ಅವರ ಕೈಕೆಳಗೆ ಪೇಪರು ತೆಗೆಯುವ ಹಾಗೂ ಮೌಲ್ಯಮಾಪಕನಾಗಿ ಕೆಲಸ

ಮಾಡುವ ಸುಯೋಗ ಬಂದಿತ್ತು. ನನಗೂ ಒಂದು ಪತ್ರಿಕೆ ತೆಗೆದುಕೊಂಡು ಬರಲು ತಿಳಿಸಿದರು. ವ್ಯಾಕರಣರೂಪ, ಪದ್ಯಗಳನ್ನು, ವಾಕ್ಯಗಳನ್ನು ತಪ್ಪಿದರೆ. ಅವುಗಳನ್ನು ಎತ್ತಿ ತೋರಿಸಿ ಮೂಲ ಗ್ರಂಥಗಳೊಡನೆ ಹೋಲಿಸಿ ತೋರಿಸಿ ನನ್ನ ತಪ್ಪುಗಳನ್ನು ಖಚಿತ ಪಡಿಸಿದಾಗ ನಾನು ಅವರ ನಿಖರತೆಗೆ ಅದ್ಭುತ ಸ್ಮರಣ ಶಕ್ತಿಗೆ ಮಾರು ಹೋಗುತ್ತಿದ್ದನು. ಅಂದಿನಿಂದ ನನ್ನ ಅವರ ಚರ್ಚೆಗಳಲ್ಲಿ ಹಲವು ಪ್ರಸಂಗಗಳಲ್ಲಿ ಅವರೇ ಇರುತ್ತಿದ್ದರು. ನನ್ನ ವಾದ ವಿಚಾರಗಳು ತಪ್ಪಾಗಿರುತ್ತಿದ್ದವು. ಅವರು ಹಿಂದಿನ ಕಾಲದ ಭಾರತೀಯ ಪಂಡಿತರ ಪರಂಪರೆಗೆ ಸೇರಿದವರೆಂಬುದು ನನಗೆ ಆಗ ಮನವರಿಕೆಯೂ ಆಯಿತು. ಇದರೊಡನೆ ಅವರಿಗಿದ್ದ ಸಂಸ್ಕೃತ ಭಾಷೆ ಹಾಗೂ ಇಂಗ್ಲೀಷ ಭಾಷೆಗಳ ಪಾಂಡಿತ್ಯದ ಅರಿವಾಯಿತು. ನನಗೆ ನನ್ನ ಹಿಂದಿನ ತಲೆಮಾರಿನ ಪಂಡಿತರ ಬಗೆಗೆ ತಿಳಿವು ಮೂಡಿತು."

ವಿಶ್ವ ವಿದ್ಯಾಲಯದ ಆ ಹತ್ತು ವರ್ಷಗಳ ಸೇವೆಯ ಜೊತೆಗೆ ಪ್ರೊ. ಭೂಸನೂರಮಠ ಅವರ ಅಧ್ಯಾಪಕ ವೃತ್ತಿಯಲ್ಲಿ ಕಂಡುಕೊಂಡ ಒಂದು ಸತ್ಯ ಮಾನವೀಯತೆ, ವ್ಯಕ್ತಿ ಎಷ್ಟೇ ದೊಡ್ಡ ಹುದ್ದೆಯಲ್ಲಿರಲಿ ಅವನು ಹೊಂದಿರುವ ಮಾನವೀಯ ಗುಣಗಳಿಂದಲೇ ಆ ಸ್ಥಾನಕ್ಕೆ ಒಂದು ಬೆಲೆ ಬರುತ್ತದೆ. ಈ ವಿಷಯವನ್ನು ಅವರೇ ಒಂದೆಡೆ ಹೀಗೆ ಹೇಳಿದ್ದಾರೆ. "ಉಪನ್ಯಾಸಕರಿರಲಿ, ಪ್ರಾಧ್ಯಾಪಕರ, ಪ್ರಾಚಾರ್ಯರಿರಲಿ, ಸಿಪಾಯಿ ಅಥವಾ ಕುಲಪತಿ ಯಾರೇ ಇರಲಿ, ಇವರೆಲ್ಲಾ ಮಾನವರು, ಎಲ್ಲವನ್ನು ಮೀರಿ ಎಲ್ಲರಲ್ಲಿರುವ ಮಾನವತ್ವ ಮಿಗಿಲಾದುದು. ಈ ಲೆಕ್ಕಾಚಾರದಲ್ಲಿ ಎಲ್ಲರೂ ಸರಿಸಮಾನರು ಹೊರಗೆ ಹೊರಗಿನಂತಿದ್ದ ಒಳಗೆ ಈ ಸಮತಾಭಾವಮಾನವನ ಹೃದಯದಲ್ಲಿ ಸದಾ ಸನ್ನಿತವಾಗಿರಬೇಕು" ಈ ತತ್ವವನ್ನು ಅವರು ತಮ್ಮ ಜೀವನದ ತುಂಬ ಅಳವಡಿಸಿಕೊಂಡಿದ್ದರು.

ವಿಶ್ವವಿದ್ಯಾಲಯದ ನಿಸರ್ಗ ಸೌಂದರ್ಯಕ್ಕೆ ಅವರು ವಿಶೇಷವಾಗಿ ಮಾರು ಹೋಗಿದ್ದರು. ಮಾನವ ನಿಸರ್ಗದ ಒಂದು ಭಾಗವೇ ಆಗಿದ್ದಾನೆಂಬುದನ್ನು ಅವರು ಮೇಲಿಂದ ಮೇಲೆ ಹೇಳುತ್ತಿದ್ದರು. ಜಗತ್ತಿನಲ್ಲಿ ಏನಿದೆ? ಅದು ಮನುಷ್ಯನಲ್ಲಿದೆ. ತಮ್ಮ ಮನೆ "ಪರಂಜೋತಿ" ಎದುರಿಗಿನ ಅರಳೆ, ಆಲದ ಬೃಹದಾಕಾರದ ಮರಗಳನ್ನು ಎಲ್ಲರಿಗೂ ತೋರಿಸಿ ಹತ್ತು ಲಕ್ಷಕೊಟ್ಟರೂ ಯಾರೂ ಇಂಥ ಮರಗಳನ್ನು ಕೊಡಲಾರರು. ಇದು ನಿಸರ್ಗ ನಿರ್ಮಿತಿ ಎಂದು ಹೇಳುತ್ತಿದ್ದರು. ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕಂಡ ಪ್ರಕೃತಿ ಸೌಂದರ್ಯವನ್ನು ಅಂದಿನ ಕುಲಪತಿ ಡಾ. ಪಾವಟೆ ಅವರೊಡನೆ ನಡೆದ ಮಾತಿನ ಒಂದು ಸಂದರ್ಭದಲ್ಲಿ ಹಂಚಿಕೊಂಡಿರುವ ಬಗೆ ಹೀಗಿದೆ. "ಕರ್ನಾಟಕ ವಿಶ್ವ ವಿದ್ಯಾಲಯದ, ಅವರ್ಣನೀಯ ನಿಸರ್ಗ ಸೌಂದರ್ಯದ ಮಧ್ಯದಲ್ಲಿ ವಿಶ್ವ ವಿದ್ಯಾಲಯದ ಭವ್ಯವಾದ ಕಟ್ಟಡಗಳು ಆ ಕಡೆ ಈ ಕಡೆ ಹರಿದಾಡುವ ರಸ್ತೆಗಳು, ಎಡ ಬಲಕ್ಕೆ ಬೆಳೆದ ಸುಂದರ ಮರಗಳು ವಿಶ್ವವಿದ್ಯಾಲಯದ ರಮಣೀಯವಾದ ಉದ್ಯಾನ, ಹೊರಗಡೆ ಬಂದರೆ ಅಲ್ಲಲ್ಲಿ ಗುಡ್ಡ, ದಿನ್ನೆ, ಅಡವಿ, ಅರಣ್ಯ, ಕೊಳ್ಳ, ಈ ನಿಸರ್ಗ ಸೌಂದರ್ಯದ ಭವ್ಯವಾದ ವಾತಾವರಣದಲ್ಲಿ ಪ್ರತಿನಿತ್ಯ ಅಡ್ಡಾಡಿ ಬರುವ ಅಭ್ಯಾಸ ನನಗೆ, ಒಂದು ಮುಂಜಾವು ಅಡ್ಡಾಡಿ ತಿರುಗಿ ಬರುವಾಗ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಪಾವಟೆಯವರು ವಾಯುವಿಹಾರಕ್ಕೆ ಹೊರಟಿದ್ದರು. ಒಳ್ಳೆಯ ಎತ್ತರ ಸಾಕಷ್ಟು ಗಡುತರವಾದ ಈ ಮೂರ್ತಿಯ ಮುಖದಲ್ಲಿ ಭವ್ಯದ ಮುದ್ರೆ ಬನಸಿರಿಯ ಮಹಾಘನಸಂಪದವನ್ನು ಮನದಲ್ಲಿ ತುಂಬಿಕೊಂಡು ಬಂದಿದ್ದ ಹೃದಯ ನಾಲಿಗೆಯಲ್ಲಿ ತುಳಿಕಿತು

ಅವರಿಗೆ ನಮಸ್ಕಾರ ಹೇಳಿ, "ಸಾಹೆಬ್ರ ವಿಶ್ವವಿದ್ಯಾಲಯದ ಈ ಮಹಾಸಂಪತ್ತು, ಸ್ವರ್ಗ ಸಂಪತ್ತನ್ನು ಮೀರಿಸುವಂತಿದೆ." ನೋಡಿದರೆ ಭಯ ಭಕ್ತಿ ತಾನೇ ಉಕ್ಕಿ ಬರುವ ಈ ಸಿಂಹಪುರುಷನ ಮುಖವೆಲ್ಲ ನಗೆಯಾಯಿತು. ಅವರು ಹೇಳಿದ ಉತ್ತರ ಯಾಕೆ ಸ್ವರ್ಗಕ್ಕೆ ಹೋಗಬೇಕಾಗಿದೆ? ಸಿಂಹದ ಮರೆಯಲ್ಲಿ ವಾತ್ಸಲ್ಯ ಭಾವ ಹುದುಗಿದ ತಿಳಿಯಾದ ಸರಳ ಹಾಸ್ಯ ಅವರ ಇಂಗಿತವೆಂದು ನನಗೆ ಅರ್ಥವಾಯಿತು. ಅವರ ಸ್ವಭಾವಕ್ಕೆ ಇದೇನು ಹೊಸದಲ್ಲ ಹೊರಗೆ "ನೋಡಿದರೆ ಗಂಭೀರ ಉನ್ನತ ಕುಲಪತಿ ಒಳಗೆ ಮಾತನಾಡಿದರೆ ಮಾತೃವಾತ್ಸಲ್ಯದ ತವರು, ಹಿರಿಯರಲ್ಲಿ ಕೇವಲ ಹಿರಿತನವನ್ನು ಕಾಣದೆ ಅಂಥವರ ಹೃದಯದಲ್ಲಿ ಅಡಗಿದ್ದ ವಾತ್ಸಲ್ಯವನ್ನು ಕಂಡುಕೊಳ್ಳುವ ಶಕ್ತಿ ಭೂಸನೂರಮಠ ಅವರಿಗಿತ್ತು ಎಂಬುದು ಇದರಿಂದ ತಿಳಿಯುತ್ತದೆ. ಅದರಲ್ಲಿಯೂ ಅವರು ಡಾ. ಪಾವಟೆಯವರ ವ್ಯಕ್ತಿತ್ವಕ್ಕೆ ಮಾರು ಹೋಗಿದ್ದರು. ತಮ್ಮ ಲೇಖನದಲ್ಲಿ ಹಲವಾರು ಬಾರಿ ಅವರನ್ನು ಜ್ಞಾಪಿಸಿಕೊಂಡಿದ್ದಾರೆ. - ಹೀಗೆ ಭೂಸನೂರಮಠ ಅವರು 1966 ರಿಂದ 1976 ರವರೆಗೆ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಕಾರ್ಯ ಮಾಡಿ ನಿವೃತ್ತರಾದರು. ಮೂರುವರೆ ವರ್ಷ ಕರ್ನಾಟಕ ಕಾಲೇಜಿನಲ್ಲಿ ಇಪ್ಪತ್ತೂರು ವರ್ಷ; ಲಿಂಗರಾಜ ಕಾಲೇಜಿನಲ್ಲಿ ಹತ್ತು ವರ್ಷ ವಿಶ್ವ ವಿದ್ಯಾಲಯದಲ್ಲಿ ಹೀಗೆ ಒಟ್ಟುಮುವತ್ತಾರು ವರ್ಷ ಆರು ತಿಂಗಳ ದೀರ್ಘಸೇವೆ ಅವರದು. ಈ ಸಮಯದಲ್ಲಿ ಅದೆಷ್ಟು ವಿದ್ವಾಂಸರನ್ನು ತಯಾರು ಮಾಡಿದ್ದಾರೆ ಅದೆಷ್ಟು ಸಾಹಿತ್ಯದ ಚಟುವಟಿಕೆಯನ್ನು ನಡೆಸಿದರೆಂಬುದನ್ನು ಸಂಪೂರ್ಣವಾಗಿ ಅಳೆಯಲಾಗದು.

ಇದೇ ಸಮಯದಲ್ಲಿ ಅವರು ತಮ್ಮ ಮನೆಯನ್ನೆ ಕಲ್ಯಾಣಕೂಟವನ್ನಾಗಿ ಮಾಡಿಕೊಂಡು, ಅಲ್ಲಿ ಸದಾಕಾಲ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಪ್ರತಿ ಸೋಮವಾರ ಸಾಯಂಕಾಲ ಆರು ಗಂಟೆಗೆ ಅಲ್ಲಿ ಸಭೆ ನಡೆಯುತ್ತಿತ್ತು. ಸಂ.ಶಿ. ಭೂಸನೂರಮಠ ಅವರ ಮನೆ ಪರಂಜ್ಯೋತಿ ಸಪ್ತಾಪುರದ ನಿವಾಸಿಗಳ ಕಲ್ಯಾಣಕೂಟಕ್ಕೆ ಬಿಡಾರವಾಗಿತ್ತು. ಅಲ್ಲಿ ಸದಾಕಾಲ ಸಾಹಿತ್ಯ ಗೋಷ್ಠಿ ಸಂಗೀತಗೋಷ್ಠಿಗಳು ನಡೆದು ಮಕ್ಕಳಿಗೆ, ಪ್ರೌಢರಿಗೆ, ವೃದ್ಧರಿಗೆ ಬೇಕಾದ ಜ್ಞಾನ ಸಿಗುತ್ತಿತ್ತು. ಸಪ್ತಾಪುರದ ಪ್ರಮುಖ ಹಿರಿಯರೆಲ್ಲ ಈ ಕಲ್ಯಾಣಕೂಟದ ಸದಸ್ಯರಾಗಿದ್ದರು. ಇತರರಂತೆ ಮುಂಜಾನೆ ಸಾಯಂಕಾಲ ವಾಯುವಿಹಾರ ಮಾಡಿ, ಉಂಡುಟ್ಟು ಸುಖದಿಂದ ಕಾಲಹರಣ ಮಾಡದೆ ಕಾಲವನ್ನು ಸದುಪಯೋಗ ಪಡಿಸಿಕೊಂಡದ್ದು ಮರೆಯಲಾಗದು. ಆದುದರಿಂದ ಆ ಸಮಾಜ ಜೀವಿಯ ಕಳಕಳಿಯನ್ನು ಕಾಣಲು ನಮಗಿದು ಸುಸಮಯ. ಎಂದು ಅಲ್ಲಿನ ಜನರು ಅಭಿಪ್ರಾಯ ಪಡುತ್ತಿದ್ದರು.

ಅಂದು ಕಲ್ಯಾಣ ಕೂಟದ ಈ ರಸದೌತಣವನ್ನು ಉಂಡವರು ಹಲವರು; ಕಲ್ಯಾಣ ಕೂಟದಲ್ಲಿ ಕೇವಲ ಸಾಹಿತ್ಯಕ ಚರ್ಚೆ ನಡೆಯದೆ ಜನರ ಸಮಸ್ಯೆಗಳನ್ನು ಪರಿಹರಿಸುವತ್ತ ಅವರು ಯತ್ನಿಸುತ್ತಿದ್ದರು. ನಾಗರಿಕ ಸೌಲಭ್ಯಗಳನ್ನು ಪಡೆಯಲು ಈ ಕೂಟದ ಮುಖಾಂತರ ಸಾಕಷ್ಟು ಪ್ರಯತ್ನ ಮಾಡಿದರು.

## ವಿದ್ಯಾರ್ಥಿಗಳೊಂದಿಗಿನ ಸಂಬಂಧ

ಪ್ರಾಚೀನ ಭಾರತದ ಗುರು ಪರಂಪರೆಯ ಶ್ರೇಷ್ಠ ಮೌಲ್ಯಗಳಿಗೆ ಮಾದರಿಯಾಗಿದ್ದ ಭೂಸನೂರಮಠ ಅವರು ಆದರ್ಶ ಶಿಕ್ಷಕರಾಗಿದ್ದರು. 1939 ರಿಂದ 1976 ರ ವರೆಗಿನ ಸುದೀರ್ಘ ವೃತ್ತಿ ಜೀವನದಲ್ಲಿ ಬೇರೆ ಬೇರೆ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರಾಗಿ ನಂತರ ವಿಶ್ವ ವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಶೈಕ್ಷಣಿಕ ಕ್ಷೇತ್ರದ ಸಮೃದ್ಧ ಅನುಭವದಿಂದ ಶ್ರೇಷ್ಠ ಶಿಕ್ಷಕರಾಗಿ; ಶಿಕ್ಷಣ ತಜ್ಞರಾಗಿದ್ದ ಅವರು ತಮ್ಮ ನೂರಾರು ವಿದ್ಯಾರ್ಥಿಗಳನ್ನು ರೂಪಗೊಳಿಸಿದರು. ತಮ್ಮನಿರಂತರವಾದ ಅಧ್ಯಯನ, ಅಧ್ಯಾಪನ, ನಿಷ್ಠೆ ಶಿಸ್ತು, ಸಂಯಮ, ಹೃದಯ ಸಂಪನ್ನ ನಡೆ - ನುಡಿಗಳಿಂದ ಶಿಕ್ಷಕ ವೃತ್ತಿಗೆ ಮಾದರಿಯಾಗಿದ್ದರು. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ನಿಂತು ಶಿಷ್ಯರೆಲ್ಲರನ್ನು ಸಮಾನ ದೃಷ್ಟಿಯಿಂದ ಕಂಡು ಅವರ ಸುಖ ದುಃಖಗಳಲ್ಲಿ ಸಮಭಾಗಿಯಾಗಿದ್ದರು ಅವರು ವಿದ್ಯಾರ್ಥಿಗಳೊಂದಿಗಿನ ತಮ್ಮ ಸಹೃದಯ ಸಂಬಂಧವನ್ನು ಅವರೇ ಹೀಗೆ ವಿವರಿಸುತ್ತಾರೆ. "ಕುಲ ಜಾತಿ ಯಾವುದೇ ಇರಲಿ ಬಡವ ಬಲ್ಲಿದರಿರಲಿ ಸಜ್ಜನ ವಿದ್ಯಾರ್ಥಿಗಳ ಬಗ್ಗೆ ಅವರಿಗೆ ಆಸಕ್ತಿ ಹೆಚ್ಚು ಅವರಿಗೆ ಕಷ್ಟನಷ್ಟಗಳ ಪ್ರಸಂಗ ಒದಗಿದರೂ ಅವರ ವಾಮಕ್ಷೇಮ ನನ್ನದೆಂಬ ಭಾವನೆಯಿಂದ ಅವನ್ನು ಪರಿಹರಿಸಿ ಅವರ ಕಲ್ಯಾಣ ಮಾಡಲು ನಾನು ಶ್ರಮಿಸುತ್ತಿದ್ದೆ. ಈ ಸಂಪ್ರದಾಯ ಜೀವನದುದ್ದಕ್ಕೂ ಹರಿದು ಬಂದಿದೆ. ನನ್ನ ಕಕ್ಷೆಯಲ್ಲಿ ಬಂದ ವಿದ್ಯಾರ್ಥಿಗಳು ಇಂದಿಗೂ ನನ್ನ ಬಗೆಗೆ ತಮ್ಮ ಕೃತಜ್ಞತಾಭಾವವನ್ನು ಇರಿಸಿಕೊಂಡಿದ್ದಾರೆ." ಎಂದು ಹೇಳುತ್ತಾರೆ.

ಸಾಹಿತ್ಯ ಸಂಶೋಧಕರಾಗಿ, ಸಂಪಾದಕರಾಗಿ, ಸೃಜನಶೀಲ ಸಾಹಿತಿಯಾಗಿ ಬೆಳೆದ ಭೂಸನೂರಮಠರು ಅಪೂರ್ವ ಸಾಧನೆಗೆ ಪ್ರೇರಕ ಶಕ್ತಿಯಾದುದು ಅವರ ಅಧ್ಯಯನಶೀಲತೆ ಮತ್ತು ಓದಿದ ಹಂಬಲ, ಅವರಿಗೆ ಶುಷ್ಕ ಯಾಂತ್ರಿಕ ಕ್ರಿಯೆಯಾಗಿರದೇ ನಿಷ್ಠೆ ಶ್ರದ್ಧೆಯಿಂದ ಕೈಗೊಳ್ಳುವ ಅನುಸಂಧಾನವಾಗಿತ್ತು. ಅದು ಮನದ ಮೈಲಿಗೆ ಕಳೆಯುವ ಸಾಧನವಾಗಿದ್ದಿತ್ತು. ಆತ್ಮೋನ್ನತಿಯ ಮಾರ್ಗವಾದ ಓದನ್ನು ಅವರು ಉಸಿರಾಗಿರಿಸಿಕೊಂಡಿದ್ದರು.

"ಓದು ಅವರ ಹವ್ಯಾಸ, ಸದಾ ಓದುವುದು ಬೇರೆಯಲ್ಲ ಶಿವನ ಪೂಜೆ ಬೇರೆಯಲ್ಲ ಎಂದು ತಿಳಿದಿದ್ದರು, ಓದಿದ ಓದು, ಕಬ್ಬಿನ ಸಿಪ್ಪೆಯಾಗಬಾರದು ರಸವಾಗಬೇಕು, ರಕ್ತವಾಗಬೇಕು ಎಂಬ ಹಂಬಲ ಅವರದ್ದು ಓದಿದಶುದ್ಧಸಾಹಿತ್ಯವನ್ನು ವಿಶ್ವಜಗತ್ತಿನ ತೀರ್ಥ ಸಾಹಿತ್ಯವನ್ನು ವೇದ ಉಪನಿಷತ್ತುಗಳು, ಪ್ಲೇಟೋ ಸಂಭಾಷಣೆ, ಪ್ರಭುದೇವರ ಶೂನ್ಯ ಸಂಪಾದನೆ ನನ್ನ ಅಂತರಂಗದ ಹಸಿವಿಗೆ ಆಹಾರವಾದವು. ಅಧ್ಯಯನಗೈದುದನ್ನು ಅರಗಿಸಿ ಕೊಂಡಿದ್ದರಿಂದ ನನ್ನಾತ್ಮ ವೃದ್ಧಿಯಾಯಿತು. ಶಿವನ ಸ್ವಾಗತಕ್ಕೆ ಸಿದ್ಧವಾಯಿತು" ಏನ್ನುತ್ತಾರೆ.

ವೃತ್ತಿ ಪ್ರವೃತ್ತಿಗಳೆರಡರಲ್ಲಿ ಅರ್ಥಪೂರ್ಣ ಸಾಮರಸ್ಯವನ್ನು ಸಾಧಿಸಿಕೊಂಡ ಭೂಸನೂರಮಠರು ಅಧ್ಯಯನ ಕ್ಷೇತ್ರ ಅತ್ಯಂತ ವಿಶಾಲವಾದುದು ಸಾಹಿತ್ಯದ ಅಧ್ಯಾಪಕರಾದರೂ ಸಾಹಿತ್ಯೇತರವಾದ ಅನ್ಯಜ್ಞಾನ ಶಿಸ್ತುಗಳಲ್ಲಿ ಅವರಿಗಿದ್ದ ತೀವ್ರ ಆಸಕ್ತಿಯಿಂದಾಗಿ ಅವರು ವಿಶಿಷ್ಟ ಸ್ವರೂಪದ ಚಿಂತಕರಾದರು. ಸಾಹಿತ್ಯ, ವಿಜ್ಞಾನ, ತತ್ವಜ್ಞಾನಗಳೆಲ್ಲವನ್ನು ತೌಲನಿಕವಾಗಿ ವಿವೇಚಿಸಬಲ್ಲ ಸೂಕ್ಷ್ಮತೆಯನ್ನು ಸಂಪಾದಿಸಿಕೊಂಡಿದ್ದರು. ವೈಚಾರಿಕ

ವಿಶ್ಲೇಷಣೆ ಪ್ರಖರ ಬುದ್ದಿವಂತಿಕೆ, ತಾರ್ಕಿಕತೆಯ ಗುಣಗಳು ಅವರ ವ್ಯಕ್ತಿತ್ವದ ಪ್ರಧಾನ ಲಕ್ಷಣಗಳಾಗಿದ್ದವು. ಅವರೆಂದೂ ಬೇರೆಯವರ ಎದುರು ತಮ್ಮ ಪಾಂಡಿತ್ಯ ಪ್ರದರ್ಶನ ಮಾಡಿದವರಲ್ಲ,

ಮೂವತ್ತಾರು ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸೇವೆಸಲ್ಲಿಸಿದ ಭೂಸನೂರಮಠರು ಶಿಕ್ಷಣ ವ್ಯವಸ್ಥೆಯ ಸಫಲತೆ ಹಾಗೂ ಸಾಧ್ಯತೆಗಳನ್ನು ಚೆನ್ನಾಗಿ ಮನಗಂಡಿದ್ದರು. ಕೃತಕವಾಗುತ್ತಿರುವ ಶಿಕ್ಷಕ ವಿದ್ಯಾರ್ಥಿಗಳ ಸಂಬಂಧ ಮತ್ತು ಮೌಲ್ಯ ಕುಸಿತ ಹಾಗೂ ವ್ಯಕ್ತಿತ್ವ ವರ್ಧನೆಗೆ ಅವಕಾಶ ನೀಡದ ಯಾಂತ್ರಿಕ ಔಪಚಾರಿಕ ಶಿಕ್ಷಣದ ಬಗೆಗೆ ನೊಂದುಕೊಂಡಿದ್ದರು. ಸುಶಿಕ್ಷಿತರನ್ನು ರೂಪಿಸುವಲ್ಲಿಯೇ ಆಸಕ್ತವಾಗಿರುವ ಶಿಕ್ಷಣವು ಸುಸಂಸ್ಕೃತರನ್ನು ರೂಪಿಸುವಲ್ಲಿ ವಿಫಲವಾಗುತ್ತಿರುವುದನ್ನು ವಿಷಾದದಿಂದ ನಿರೂಪಿಸುವ ಅವರ ವಿಚಾರಗಳು ಸಧ್ಯದ ಶಿಕ್ಷಣ ವ್ಯವಸ್ಥೆಯ ಗುಣಮಟ್ಟಕ್ಕೆ ಹಿಡಿದ ಕನ್ನಡಿಯಾಗಿದೆ.

ಗುರು - ಶಿಷ್ಯ ಸಂಬಂಧ ಅದು ಭೂತ ಪುರಾಣ ಅಥವಾ ಪುರಾಣದ ಭೂತ, ಇಂದಿನ ವಿದ್ಯಾರ್ಥಿಗೆ 'ಗುರುದೇವೋಭವ' ಎಂದು ಹೇಳಿಸಿಕೊಳ್ಳುವ ಧೈರ್ಯ ಯಾವ ಗುರುವಿಗೂ ಇಲ್ಲ ದೇವರಿಗೂ ಇಲ್ಲ, ಶಿಕ್ಷಣವು ಒಂದು ವ್ಯಾಪಾರವಾಗಿದೆ. ದುಡ್ಡಿಗೆ ಕಲಿಸುವ ಗುರು, ನೌಕರಿಗೆ ಓದುವ ವಿದ್ಯಾರ್ಥಿ ಇಂಥಗುರುವಿಗೆ ಗೌರವ ಯಾರಿಂದ? ಈ ವಿದ್ಯಾರ್ಥಿಗೆ ಭಯ ಭಕ್ತಿ ಎಲ್ಲಿಂದ? ವಿದ್ಯಾರ್ಥಿಯ ಕೃಪೆಯಿಂದಲೇ ಇಂದಿನ ಗುರು ತನ್ನ ಬಾಳನ್ನು ಬೆಳಗಬೇಕು. ಕೃಪೆ ತಪ್ಪಿದರೆ ಸಂಪು. ಹರತಾಳ ಮೆರವಣಿಗೆ; ಗುರುವಿಗೆ ಬೇರೆ ಗತಿಯಿಲ್ಲ ತಲೆದಂಡ ವಿದ್ಯೆ ದೊರೆಯುವುದು ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ, ಭಾಷೆ, ಕಾವ್ಯ, ಸಂಗೀತ, ಗಣಿತ, ಭೂಗೋಳ, ಇತಿಹಾಸ, ಪ್ರಾಣಿಶಾಸ್ತ್ರ, ಮನಃಶಾಸ್ತ್ರ, ಮುಂತಾದ ಕಲಾ, ವಿಜ್ಞಾನ ವಿಷಯವಾಗಿ ಸಾವಿರ ಸಂಗತಿಗಳನ್ನು ಎಳೆಯ ವಿದ್ಯಾರ್ಥಿಗಳ ತಲೆಯಲ್ಲಿ ತುಂಬುವ ವಿವಿಧ ಪ್ರಯತ್ನವಿಲ್ಲ. ಒತ್ತಿ ಹಣ್ಣು ಮಾಡುತ್ತಿರುವ ಈ ವಿದ್ಯಾ ಯಂತ್ರದಲ್ಲಿ ರೂಪುಗೊಂಡು ಹೊರಬೀಳುತ್ತಿರುವ ಸುಶಿಕ್ಷಿತ ತರುಣರ ಚಿತ್ರ ಮನವನ್ನು ಬೆರಗಾಗಿಸುತ್ತದೆ. ಏಕೆ ಕಲಿಕೆ? ಏನು ಕಲಿಕೆ ? ಕಲಿತ ವಿದ್ಯೆಯಿಂದ ಸುಶಿಕ್ಷಿತನಾಗಿರಬಹುದು, ಪದವೀಧರನಾಗಿರಬಹುದು. ಆದರೆ ಸತ್ವಯುತವಾದ ಜೀವನವನ್ನು ಸುಂದರವಾಗಿ ಅರಳಿಸಿ ಎಲ್ಲೆಲ್ಲಿ ಆನಂದವನ್ನು ಪರಿಮಳಿಸುವ ಸುಸಂಸ್ಕೃತ ವ್ಯಕ್ತಿತ್ವವನ್ನು ಕಟ್ಟುವ ವಿದ್ಯೆಯನ್ನು ಕಲಿತನೆ? ತನ್ನ ಬಂಧು ಬಳಗವಾದ ಅನ್ಯರಿಗೆ ಕಲ್ಯಾಣವಾಗುವಂತೆ ಜೀವನವನ್ನು ನಡೆಸುವ, ಜೀವನ ಕಲೆಯನ್ನು ಅಭ್ಯಾಸ ಮಾಡಿದನೆ? ಜೀವನದ ಅರ್ಥವೇನು? ರಸವೇನು? ಸಾಧಿಸುವ ಕೌಶಲದ ರಹಸ್ಯವೇನು? ವಿಷಯ ಪ್ರಪಂಚದಲ್ಲಿ ಧುಮುಕಿ ವಿಷಯದೊಡನೆ ಹೋರಾಡಿ ಸಮತೆಯಲ್ಲಿ ಮುಂದೆ, ಮುಂದೆ ಸಾಗಿ ಜೀವನದ ಪರಮಾದರ್ಶವನ್ನು ಸೇರುವ ಬಗೆ ಯಾವುದು? ಎಂಬಂತಹ ಸತ್ಯ ಪ್ರಶ್ನೆಗಳಿಗೆ ಜಗತ್ತಿನಲ್ಲಿ ಉತ್ತರ ಬರೆಯಬಲ್ಲನೇ? ಇಂಥ ಪ್ರಶ್ನೆ ಗುರುಗಳಲ್ಲಿ ಕೇಳಿದನೆ? ಅಥವಾ ಅವರು ಇಂಥ ಪ್ರಶ್ನೆ ಕೇಳುವುದು ಮೂರ್ಖತನ, ಹೇಳುವುದು ಕೆಳದರ್ಜೆ, ಶಾಲೆ, ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಉಳಿದೆಲ್ಲ ವಿದ್ಯೆ, ಒಟ್ಟು ಜೀವನ ವಿದ್ಯೆಗೆ ಸ್ಥಳವಿಲ್ಲದಂತಾಗಿದೆ. ಅಲ್ಲಿಯ ವಿದ್ಯೆಯನ್ನೇ ತಲೆಯಲ್ಲಿ ತುರುಕಿಕೊಂಡಿರುವ ಸುಶಿಕ್ಷಿತ ವರ್ಗದಲ್ಲಿ ಜೀವನ ವಿದ್ಯೆಯ

ಅವಶ್ಯಕತೆಯ ಅರಿವು ಅವರಿಗೆ ತೋರಿಲ್ಲ ಎಂದು ಇಂದಿನ ಶಿಕ್ಷಣ ವ್ಯವಸ್ಥೆಯನ್ನು ಕುರಿತು ನೈಜ ಚಿತ್ರಣವನ್ನು ನಮ್ಮ ಕಣ್ಣೆದುರಿಗೆ ತರುತ್ತಾರೆ.

ಬಡತನದಲ್ಲಿ ಹುಟ್ಟಿ ಸಮಸ್ಯೆಗಳೊಂದಿಗೆ ಸೆಣಸಾಡುತ್ತ ಉನ್ನತ ಹುದ್ದೆಗೇರಿದ ಭೂಸನೂರಮಠ ಬದುಕಿನ ಏರಿಳಿತಗಳನ್ನು ನಿಕಟವಾಗಿ ಅನುಭವಿಸಿದವರು. ಉರಿಬರಲಿ ಸಿರಿ ಬರಲಿ ಸಮಚಿತ್ತವನ್ನು ಕಾಯ್ದು ಕೊಂಡು ಸಾರ್ಥಕ ಬದುಕು ರೂಪಿಸಿಕೊಂಡ ಸ್ಥಿತ ಪ್ರಜ್ಞರು; ಕುತೂಹಲವಾದ ಪ್ರವೃತ್ತಿ ಜಿಜ್ಞಾಸೆ, ನಿಸ್ಸಹತೆಗಳಿಂದ ಬದುಕನ್ನು ಚೈತನ್ಯಮಯವಾಗಿಸಿಕೊಂಡ ಸ್ಥಿತಪ್ರಜ್ಞರು; ಚೈತನಮಯವಾಗಿಸಿಕೊಂಡ ಭೂಸನೂರಮಠರು, ಅಪರಿಮಿತ ಜೀವನೋತ್ಸಾಹವುಳ್ಳವರಾಗಿದ್ದರು. ಸಂಸ್ಕೃತ, ಕನ್ನಡ, ಇಂಗ್ಲೀಷ, ಮರಾಠಿ ಭಾಷೆಗಳನ್ನು ಬಲ್ಲ ಭೂಸನೂರಮಠರವರು, ವಿವಿಧ ಭಾಷೆಯ ಮಹಾಕಾವ್ಯಗಳನ್ನು ಅಧ್ಯಯನ ಮಾಡಿದರು. ಹಲವರಿಗೆ ಪಿಎಚ್.ಡಿ. ಸಂಶೋಧನೆಗೆ ಮಾರ್ಗದರ್ಶಕರಾದರು. ಅದಲ್ಲದೇ ಇನ್ನಿತರ ವಿದ್ಯಾರ್ಥಿಗಳಿಗೂ ಅವರ ಸಂಶೋಧನ ಅಧ್ಯಯನಕ್ಕಾಗಿ ತಮ್ಮ ವಿದ್ವತ್ತನ್ನು ಧಾರೆಯರೆದರು. ಅವರ ಮಾರ್ಗದರ್ಶನದಲ್ಲಿ ಈ ಹಿಂದೆ ಹೇಳಿದಂತೆ 5 ಮಹಾ ಪ್ರಬಂಧಗಳು ರಚನೆಯಾದವು. ಶಿಷ್ಯರ ಉತ್ಕರ್ಷದಲ್ಲಿ ಆನಂದಿಸುವ ಅವರಿಗೆ ಮಹಿಳೆಯರ ಶಕ್ತಿ ಸಾಮರ್ಥ್ಯದಲ್ಲಿ ಅಪಾರವಾದ ನಂಬಿಕೆ ಇದ್ದಿತು. 1976ರಲ್ಲಿ ಶಿಕ್ಷಕ ವೃತ್ತಿಯಿಂದ ನಿವೃತ್ತರಾದರೂ ಅಧ್ಯಯನದ ಪ್ರವೃತ್ತಿಯನ್ನು ಕೊನೆಯವರೆಗೂ ಹಸಿರಾಗಿ ಉಳಿಸಿಕೊಂಡ ಅವರ ವ್ಯಕ್ತಿತ್ವದ ಅನನ್ಯತೆಯಾಗಿದೆ. ನಿವೃತ್ತಿಯ ನಂತರ 13 ವರ್ಷಗಳಲ್ಲಿ ಅವರು ಮಾಡಿದ ಸಾಹಿತ್ಯ ರಚನೆಯು ಮೌಲಿಕದ್ದಾಗಿದೆ. ಕನ್ನಡ ಅಭಿಮಾನವು ಪರಂಪರೆಯ ಪರಮೊತ್ಕೃಷ್ಟ ರಚನೆಯಾಗಿರುವ ಶೂನ್ಯ ಸಂಪಾದನೆಗೆ ಅವರು ಬರೆದ ದಾರ್ಶನಿಕ ವ್ಯಾಖ್ಯಾನ ಶೂನ್ಯ ಸಂಪಾದನೆಯ ಪರಾಮರ್ಶೆ ಮತ್ತು 1984ರಲ್ಲಿ ಪ್ರಕಟವಾದ ಅವರ ದಾರ್ಶನಿಕ ಕಾವ್ಯ, ಭವ್ಯ ಮಾನವ ಭೂಸನೂರಮಠ ಅವರ ನಿವೃತ್ತಿಯ ನಂತರದ ಸಾಧನೆಗಳು ದಶಕಗಳವರೆಗಿನ ವಿಸ್ತ್ರತ ಅಧ್ಯಯನ ಮತ್ತು ದೃಷ್ಟಾರ ಪ್ರತಿಭೆಯ ಸಿದ್ಧಿಯಾಗಿದೆ.

ಕೊನೆಗಾಲದವರೆಗೂ ಧರ್ಮ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಪಾರ ಆಸಕ್ತಿಯನ್ನು ಘೋಷಿಸಿಕೊಂಡ ಇವರ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಸಮಾರಂಭಗಳಲ್ಲಿ ಪ್ರೀತಿಯಿಂದ ಭಾಗವಹಿಸುತ್ತಿದ್ದರು. ಕನ್ನಡ ನಾಡು, ನುಡಿ ಇತಿಹಾಸ ಸಂಸ್ಕೃತಿಯ ಅಭಿಮಾನಿಗಳಾಗಿದ್ದು, ಕನ್ನಡಿಗರ ಭವ್ಯ ಭವಿಷ್ಯತ್ತಿಗಾಗಿ ಕಳಕಳಿಯುಳ್ಳವರಾಗಿದ್ದರು. ಸೊಲ್ಲಾಪುರದಲ್ಲಿ ಜರುಗಿದ ಗಡಿನಾಡ ಕನ್ನಡಿಗರ ಸಮ್ಮೇಳನಕ್ಕೆ ಅಧ್ಯಕ್ಷರಾಗಿ 1987ರಲ್ಲಿ ಸನ್ಮಾನಿತರಾದರು. ಅಲ್ಲಿ ಭೂಸನೂರಮಠರು ಮಾಡಿದ ಭಾಷಣ ಅರ್ಥಪೂರ್ಣವಾಗಿದೆ. ನಾವು ಕನ್ನಡಿಗರಿರಲಿ ಯಾವುದೇ ಭಾಷಿಕರಿರಲಿ ಮೊದಲ ನಾವು ಭಾರತೀಯರು ಎನ್ನುವುದನ್ನು ಮರೆಯಬಾರದು. ಎಲ್ಲ ಭಾಷಾ ಭಾಂದವರಲ್ಲಿ ಈ ಭಾವನೆ ಸದಾಕಾಲ ಜಾಗೃತವಾಗಿರಬೇಕು. ಮಾನವ ನಿರ್ಮಿತವಾದ ರಾಷ್ಟ್ರ ಭಾಷೆ, ಸಾಹಿತ್ಯ ಸಂಸ್ಕೃತಿಗಳೆಲ್ಲ ಒಂದೇ ಮಾನವಕುಲಕ್ಕೆ ಸೇರಿವೆ ಎಂಬ ಪ್ರಜ್ಞೆ ನಮ್ಮ ಮನೋಭಾವದಲ್ಲಿ ಹರವಿಕೊಂಡಿರಬೇಕೆಂಬುದು ನನ್ನೆದೆಯ ಹಂಬಲ

ಎಂದು ಆ ಸಂದರ್ಭದಲ್ಲಿ ಹೇಳಿದ್ದಾರೆ ಮತ್ತು ಅದೇ ರೀತಿ ಇವರು ನಡೆದು ಕೊಂಡಿದ್ದಾರೆ. ಹೀಗೆ ಕನ್ನಡ ನಾಡು ನುಡಿಗಳ ಬಗ್ಗೆ ತಮ್ಮ ಬದುಕನ್ನೆ ಶ್ರೀಗಂಧದಂತೆ ತೆಯ್ದು ಕೊಂಡರು.

## ಶ್ರೇಷ್ಠ ಮಾರ್ಗದರ್ಶಕ

ಪ್ರೊ. ಭೂಸನೂರಮಠ ಅವರು ಶಿಕ್ಷಣ ಕ್ಷೇತ್ರದ ಹಿರಿಯ ಪ್ರಾಧ್ಯಾಪಕರಾಗಿ ತಮ್ಮೆಡೆಗೆ ಬಂದ ಕನ್ನಡ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶಕರಾಗಿ ಮಾರ್ಗದರ್ಶನ ಮಾಡುತ್ತಿದ್ದರು. ಕನ್ನಡದಲ್ಲಿ ಪಿಎಚ್.ಡಿ.ಗಳು ಕಡಿಮೆ ಇದ್ದ ಆ ಕಾಲದಲ್ಲಿ ಪಿಎಚ್.ಡಿ. ಆಗಿರದ ಪ್ರೊ. ಭೂಸನೂರಮಠ ಅವರನ್ನು ಮಾರ್ಗದರ್ಶಕರನ್ನಾಗಿ ವಿಶ್ವವಿದ್ಯಾಲಯ ಪರಿಗಣಿಸಿತು. ವಿಷಯದ ಆಯ್ಕೆ, ಅದರ ವ್ಯಾಪ್ತಿ, ವಿಷಯದ ಬಗೆಗೆ ನಡೆದ ಸಾಹಿತ್ಯಕ ಬೆಳವಣಿಗೆ, ಸಂಶೋಧನೆಯ ಉದ್ದೇಶ, ಮುಂತಾದ ವಿಷಯಗಳ ಸಮಗ್ರ ಕಲ್ಪನೆ ಅವರಿಗೆ ಇದ್ದಿತು. ಪಿಎಚ್.ಡಿ. ಮಾಡುವ ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಟಿಪ್ಪಣಿಗಳನ್ನು ಒದಗಿಸುವಂತೆ, ಅಧ್ಯಯನ ಮುಂದುವರೆಸುವಂತೆ ಅವರಿಗೆ ಮೇಲಿಂದ ಮೇಲೆ ಸೂಚನೆ ಕೊಡುತ್ತಿದ್ದರು.

ಇವರ ಸಮರ್ಥ ಮಾರ್ಗದರ್ಶನದಲ್ಲಿ ಐದು ಜನರು ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ.

1. ಎಸ್.ಎಸ್. ಬಸುಪಟ್ಟದ - ನಿಜಗುಣ ಶಿವಯೋಗಿ ಅವರ ಜೀವನ ಮತ್ತು ಕೃತಿಗಳು (1963)

2. ಡಾ. ಬಿ.ಕೆ. ಹೊಸಮಠ - ಸರ್ವಜ್ಞ - ಜೀವನ ಕೃತಿಗಳು ಹಾಗೂ ಸಂದೇಶ (1970)

3. ಡಾ. ಎಸ್.ಜಿ. ವಾರಿ - ದಾರ್ಶನಿಕ ಕವಿ ಚಾಮರಸ ಜೀವನ (1973)

   ಸಾಹಿತ್ಯ ತತ್ವಜ್ಞಾನಗಳ ವಿಮರ್ಶಾತ್ಮಕ ಅಧ್ಯಯನ (1973)

4. ಡಾ. ಚಂದ್ರಶೇಖರ ಕಂಬಾರ - The origin and Development of Kannada Folk Theater (1975)
5. ಡಾ. ಶಾಂತಕುಮಾರಿ ಪಾಟೀಲ - ಅಕ್ಕಮಹಾದೇವಿ (1987)

ಅಧ್ಯಯನ ಪ್ರಾರಂಭದಲ್ಲಿ ವಿದ್ಯಾರ್ಥಿಗಳಿಗೆ ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳನ್ನು ವಿವರಿಸುತ್ತಿದ್ದರು. ಎನ್ನುವುದಕ್ಕೆ ಈ ಮಾತುಗಳೇ ಸಾಕ್ಷಿಯಾಗಿವೆ. "ಶರಣಸಾಹಿತ್ಯ ಮತ್ತು ತತ್ವ ಜ್ಞಾನಗಳಲ್ಲಿ ವಿಶೇಷ ಪರಿಣಿತರೂ ನನ್ನ ಬಾಳಿಗೆ ಬೆಳಕನ್ನು ಬೀರಿದ ನನ್ನ ಪರಮ ಗುರುಗಳೂ ಆದ ಭೂಸನೂರಮಠ ಅವರನ್ನು ಕಂಡೆ ಅವರಲ್ಲಿ ಚಾಮರಸ ಕವಿಯ ಜೀವನ ಸಾಹಿತ್ಯ ಮತ್ತು ತತ್ವಜ್ಞಾನ ಕುರಿತು ಸಂಶೋಧನೆ ಕೈಕೊಳ್ಳುವ ನನ್ನ ಅಭಿಲಾಷೆಯನ್ನು ವ್ಯಕ್ತಪಡಿಸಿದೆ. ಹಾಗೆಯ ಸಂಶೋಧನೆಗೆ ಮಾರ್ಗದರ್ಶನ ನೀಡಲು ಕೇಳಿಕೊಂಡೆ. ಅದಕ್ಕೆ ಅವರು ಸಂತೋಷವನ್ನು ಸೂಚಿಸಿ ಸಮ್ಮತಿಸಿದರು. ಯಾವುದೇ ಪ್ರಾಚೀನ ಸಾಹಿತ್ಯ

ಕೃತಿಯ ಸಂಶೋಧನೆ ಕೈಕೊಳ್ಳಲು ಆ ಕೃತಿ ರಚನೆ ಹಿನ್ನೆಲೆಯಾದ ರಾಜಕೀಯ, ಸಾಮಾಜಿಕ ಮತ್ತು ಮತೀಯ ಶಕ್ತಿಗಳ ಪರಸ್ಪರ ಪ್ರಕ್ರಿಯೆಗಳ ತಿಳವಳಿಕೆ ಅಗತ್ಯ. ಹಾಗೆಯೇ ಆ ಕೃತಿ ರಚಿಸಿದ ಕವಿಯ ದೇಶ, ಕಾಲ, ಜೀವನ ವಿಚಾರಗಳ ವಿವರ ಪೂರ್ಣವಾದ ಅರಿವೂ ಅವಶ್ಯಕ. ಆನಂತರವೇ ಆ ಸಾಹಿತ್ಯ ಕೃತಿಯ ಸರಿಯಾದ ವಿಶ್ಲೇಷಣೆ ಹಾಗೂ ಮೌಲ್ಯ ನಿರ್ಣಯ ಸಾಧ್ಯವಾಗುತ್ತದೆ ಎಂದು ಸೂಕ್ತ ಸಲಹೆಗಳನ್ನು ನೀಡಿದರು. ಸಂಶೋಧನೆಗೆ ತಯಾರಾಗುವ ಮುನ್ನ ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಲು ತಿಳಿಸಿ ಅಧ್ಯಯನಕ್ಕೆ ಅವಶ್ಯಕವಾದ ಕನ್ನಡ, ಸಂಸ್ಕೃತ, ಇಂಗ್ಲೀಷ ಗ್ರಂಥಗಳ ಒಂದು ಪಟ್ಟಿಯನ್ನೆ ಕೊಟ್ಟು ಚೆನ್ನಾಗಿ ಓದಿ, ವಿಷಯ ಸಂಗ್ರಹಿಸಲು ಹೇಳಿ ಶುಭ ಹಾರೈಸುತ್ತಿದ್ದರು." ಎಂದು ಅವರಿಂದ ಪಿಎಚ್.ಡಿ. ಪಡೆದ ಡಾ. ವಾರಿಯವರು ಅಭಿಪ್ರಾಯ ಪಡುತ್ತಾರೆ.

ಹೀಗೆ ಸಂಶೋಧನೆಯ ಪೂರ್ವದಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದರು. ಹಲವಾರು ವಿಷಯಗಳನ್ನು ಓದಿ ಅರಗಿಸಿಕೊಂಡದ್ದರಿಂದಲೇ ಇಂಥ ಮಾರ್ಗದರ್ಶನ ನೀಡಲು ಅವರಿಗೆ ಸಾಧ್ಯವಾಯಿತು.

## ಸ್ವಾಮಿಗಳೊಂದಿಗೆ ಸಂಬಂಧ

ಪ್ರೊ. ಭೂಸನೂರಮಠ ಅವರಿಗೆ ಬಾಲ್ಯದಿಂದಲೂ ಮಠ ಮಾನ್ಯಗಳಲ್ಲಿ ವಿಶೇಷವಾದ ಆಸಕ್ತಿ ಅನೇಕ ಮಠಾದೀಶರೊಂದಿಗೆ ಅವರು ಸುಮಧುರವಾದ ಬಾಂಧವ್ಯವನ್ನು ಹೊಂದಿದ್ದರು. ಮಠಾಧಿಪತಿಗಳು ಕೂಡಾ ಇವರಿಗೆ ಅಷ್ಟೇ ಗೌರವ ಕೊಡುತ್ತಿದ್ದರು. ಇವರ ಸಾಹಿತ್ಯಕ ಚಟುವಟಿಕೆಗಳು ಪ್ರಾರಂಭವಾದದ್ದೆ ಸ್ವಾಮಿಗಳ ಮಠಗಳ ಮುಖಾಂತರ, ಹೊಸಪೇಟೆ, ಹಂಪಿ, ಬಳ್ಳಾರಿ, ಕೊಟ್ಟೂರುಸ್ವಾಮಿ ಮಠದ ಮೇಲೆ ಇವರಿಗೆ ಎಲ್ಲಿಲ್ಲದ ಪ್ರೀತಿ, ಗೌರವ, ರಾವೂರ ಮತ್ತು ಆದವಾನಿಯ ಸಿದ್ದಲಿಂಗೇಶ್ವರಮಠ ಮತ್ತು ಕಲ್ಲುಮಠದವಿರಕ್ತಸ್ವಾಮಿಗಳೊಡನೆ ಇವರಿಗೆ ಅತ್ಯಂತ ನಿಕಟ ಸಂಪರ್ಕವಿತ್ತು. ಈ ಸ್ವಾಮಿಗಳೇ ಪ್ರೊ. ಭೂಸನೂರಮಠ ಅವರ ಶೂನ್ಯ ಸಂಪಾದನೆ ಪರಾಮರ್ಶೆ ಹಾಗೂ ಭವ್ಯ ಮಾನವದ ಪ್ರಕಾಶಕರಾದರು. ರಾವೂರ ಮತ್ತು ಆದವಾನಿಯ ಶ್ರೀಗಳ ನೇತೃತ್ವದಲ್ಲಿ ಭೂಸನೂರಮಠ ಅವರ ಮದುವೆ ನಡೆಯಿತು.

ಭೂಸನೂರಮಠ ಅವರ ಹೆಚ್ಚಿನ ಗ್ರಂಥಗಳ ಪ್ರಕಾಶಕರು ಸ್ವಾಮಿಗಳೇ ಆಗಿದ್ದಾರೆ. ಧಾರವಾಡದ ಮೃತ್ಯುಂಜಯ ಮಹಾಸ್ವಾಮಿಗಳು, ಗುರುಸಿದ್ಧಸ್ವಾಮಿಗಳು ಕಾರಂಜಿಮಠ ಬೆಳಗಾವಿ ಹೀಗೆ ಹಲವು ಮಠಾಧೀಶರು ಇವರ ಗ್ರಂಥಗಳನ್ನು ಪ್ರಕಟಿಸಿದ್ದಾರೆ. "ಲಾಂಛನಕ್ಕೆ ಶರಣೆಂಬೆ" ಎಂಬ ತತ್ವ ಭೂಸನೂರಮಠ ಅವರದು. ಸ್ವಾಮಿಗಳ ಪಾದಕ್ಕೆ ಸಾಷ್ಟಾಂಗ ನಮಸ್ಕಾರ ಹಾಕಿದಾಗ ಅವರು ಕೆಲವೊಮ್ಮೆ ತಮ್ಮನ್ನು ತಾವೇ ಮರೆತುಬಿಡುತ್ತಿದ್ದರು. ಒಂದು ಸಾರಿ ಶ್ರೀ ಮ.ನಿ. ಪ್ರ.ಮೃತ್ಯುಂಜಯ ಸ್ವಾಮಿಗಳು, ಪ್ರೊ. ಭೂಸನೂರಮಠ ಅವರ ಬೆಳಗಾವಿಯ ಮನೆಗೆ ಬರುವವರಿದ್ದರು. ಆಗ ಸ್ವಾಮಿಗಳು ಬರುವುದನ್ನು ಓಣಿಯ ಎಲ್ಲ ಜನರಿಗೂ ಮನೆ ಮನೆಗೆ ಹೋಗಿ ನಾಳೆ ಶ್ರೀಗಳು ಬರುತ್ತಾರೆ. ನೀವೆಲ್ಲ ಬಂದು ಅಶೀರ್ವಾದ ಪಡೆದುಕೊಳ್ಳಿರಿ ಎಂದು ಆಹ್ವಾನಿಸಿದರು.

ಮನೆಯಲ್ಲಿ ಅಷ್ಟೆ ಅಲ್ಲ ಇಡೀ ಬೀದಿಯಲ್ಲಿಯೇ ಒಂದು ರೀತಿಯ ಹಬ್ಬದ ವಾತಾವರಣವನ್ನೆ ಅವರು ನಿರ್ಮಾಣ ಮಾಡಿದ್ದರು. ಸಮಯಕ್ಕೆ ಸರಿಯಾಗಿ ಸ್ವಾಮಿಗಳು ಆಗಮಿಸಿದರು. ಅವರು ಮನೆಯಲ್ಲಿ ಕಾಲಿಡುವಷ್ಟರಲ್ಲಿ ಪ್ರೊ. ಭೂಸನೂರಮಠ ಅವರು ಅವರಿಗೆ ಸಾಷ್ಟಾಂಗ ನಮಸ್ಕಾರ ಹಾಕಿ ಕೆಲವು ಹೊತ್ತು ಹಾಗೆಯೇ ಇದ್ದರು. ಸುತ್ತಲಿನವರಿಗೆಲ್ಲ ಇದು ಅರ್ಥವಾಗಲಿಲ್ಲ ಅವರು ತಮ್ಮನ್ನು ತಾವೆ ಮರೆತಿದ್ದರು. ಗುರುವಿನ ಪಾದಸ್ಪರ್ಶದಿಂದ ತಮ್ಮ ಜೀವನವೇ ಪಾವನವಾಯಿತೆಂದು ಭಾವಿಸಿದ್ದರು. ಅವರು ಮೇಲೆ ಏಳದ್ದನ್ನು ಗಮನಿಸಿದ ಶ್ರೀಗಳ "ಏಕ್ಕಪ್ಪಾ ನಿಜವಾಗಿಯೂ ನಾನು ಶರಣನಲ್ಲ; ನೀವು ಶರಣರು" ಎಂದು ಅವರ ಕೈಹಿಡಿದು ಮೇಲೆಬ್ಬಿಸಬೇಕಾಯಿತು.

ಅವರ ದೈವಭಕ್ತಿಯೇ ಇದಕ್ಕೆಲ್ಲ ಕಾರಣ ಪ್ರತಿದಿನವೂ ಮುಂಜಾನೆ ಸ್ನಾನಾದಿ ಕಾರ್ಯ ಮುಗಿದ ಮೇಲೆ ಶಿವಪೂಜೆ, ನಿಸರ್ಗ ಪೂಜೆ ಮಾಡುತ್ತಾರೆ. ಆ ಗಿಡದ ಪೂಜೆ, ಆ ಪುಸ್ತಕ ಪೂಜೆ ಮಾಡುತ್ತಾರೆ. ಖುರ್ಚಿ, ಟೇಬಲ್ಲು ಕುಳಿತಿರುವ ವ್ಯಕ್ತಿಗಳನ್ನು ಪೂಜಿಸುವಷ್ಟರ ಮಟ್ಟಿಗೆ ಅವರ ಪೂಜೆ ಪ್ರತಿದಿನ ನಡೆಯುತ್ತದೆ. ಇಂಥ ಭಕ್ತಿ ಅವರದು ಇದನ್ನು ಕೊನೆಯ ದಿನದವರೆಗೂ ಪಾಲಿಸಿಕೊಂಡು ಬಂದರು ಕಂಡದ್ದನ್ನೆಲ್ಲಾ ದೈವವನ್ನಾಗಿ ಪೂಜಿಸುವ ಸ್ವಭಾವ ಅವರದು.

## ಸಾಹಿತ್ಯ ಸೇವೆ ಮತ್ತು ಸಂಪಾದನೆ

ಪ್ರೊ. ಭೂಸನೂರಮಠ ಅವರು ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದುದಲ್ಲದೆ, ಅವರ ಸಾಹಿತ್ಯ ಸೇವೆ ಅವರ ಹೆಸರನ್ನು ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗಿರಿಸಿದೆ. ಇವರ ಸಾಹಿತ್ಯ ಸೇವೆಗೆ ಮೂಲ ಪ್ರೇರಕರಾದವರು ಶ್ರೀ ಮ.ನಿ.ಪ್ರ. ಮೃತ್ಯುಂಜಯ ಸ್ವಾಮಿಗಳು. "ಸಾಹಿತ್ಯ ಕ್ಷೇತ್ರದಲ್ಲಿ ಸೃಷ್ಟಿ ಮಾಡಲು ನನ್ನನ್ನು ತೊಡಗಿಸಿದವರು ಧಾರವಾಡದ ಮುರಘಾಮಠದ ಪರಮಪೂಜ್ಯ ಮೃತ್ಯುಂಜಯ ಅಪ್ಪಗಳವರು. ಇವರಿಂದಲೆ ಸಾಹಿತ್ಯ ಕೃಷಿ ಪ್ರಾರಂಭವಾಯಿತು. 1944ರಲ್ಲಿ ಅವರ ಅಪ್ಪಣೆಯ ಮೇರೆಗೆ ಘನಮಠ ಶಿವಯೋಗಿಗಳ ಭಕ್ತಿ ತತ್ವ ಪದಗಳನ್ನೊಳಗೊಂಡ ಭಕ್ತಿಸುಧಾಸಾರ ಎಂಬ ಗ್ರಂಥ ಪ್ರಕಟವಾದುದು 1945ರಲ್ಲಿ. ಮೊತ್ತ ಮೊದಲನೆಯದಾದ ಈ ಗ್ರಂಥವೇ ಭವ ಮಾನವ ಮಹಾಕಾವ್ಯದವರೆಗೆ ಸಾಹಿತ್ಯ ಕೃಷಿ ಮಾಡುವಂತೆ ಪ್ರೇರೆಪಿಸಿತು." ಎಂದು ಭೂಸನೂರಮಠ ರವರು ಅಭಿಪ್ರಾಯ ಪಡುತ್ತಾರೆ.

ಇವರು 1945 ರಿಂದ 1992 ರ ಒಟ್ಟು 12 ಗ್ರಂಥಗಳನ್ನು ಸಂಪಾದಿಸಿದರು. ಅವುಗಳಲ್ಲಿ ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳು ಇದನ್ನು ಉತ್ತಂಗಿ ಚೆನ್ನಪ್ಪನವರೊಡನೆ, ಜಗಜ್ಯೋತಿ ಬಸವಣ್ಣನವರ ಲೋಕಪ್ರಿಯ ವಚನಗಳು ಇದನ್ನು ಡಾ. ಡಿ.ಎಸ್. ಕರ್ಕಿ ಹಾಗೂ ಶ್ರೀಮತಿ ಪ್ರಭಾತಾಯಿ ಕುಲಕರ್ಣಿ ಅವರೊಡನೆ ಸಂಪಾದಿಸಿದ್ದಾರೆ.

## ಸಂ.ಶಿ. ಭೂಸನೂರಮಠ ಅವರು ಸಂಪಾದಿಸಿದ ಕೃತಿಗಳು

| ಪುಸ್ತಕದ ಹೆಸರು | ಸಂಪಾದಕರು : ಪ್ರಕಾಶಕರು | ವರ್ಷ |
|---|---|---|
| 1. ಭಕ್ತಿ ಸುಧಾಸಾರ<br>ಘನಮಠ ಶಿವಯೋಗಿಗಳು | ಸಂ.ಸಂ.ಶಿ.ಭೂಸನೂರಮಠ<br>ಪ್ರ. ಶ್ರೀ. ನಿ. ಪ್ರ. ಸ್ವ, ಮಹಾಂತ ಸ್ವಾಮಿಗಳು<br>ಮುರುಘಾ ಮಠ ಧಾರವಾಡ | 1945 |
| 2. ಸಿದ್ಧನಂಜೇಶನ<br>ಗುರುರಾಜ ಚಾರಿತ್ರ | ಸಂ: ಸಂ. ಶಿ. ಭೂಸನೂರಮಠ<br>ಪ್ರ : ಶ್ರೀ ಮ.ನಿ. ಪ್ರ. ಮೃತ್ಯುಂಜಯ ಮಹಾ ಸ್ವಾಮಿಗಳು<br>ಮುರುಘಾಮಠ, ಧಾರವಾಡ | 1950 |
| 3. ಮೋಳಿಗೆಯ ಮಾರಯ್ಯ<br>ಮತ್ತು ರಾಣಿ ಮಹಾ<br>ದೇವಿಯರ ವಚನಗಳು | ಸಂ. ಸಂ. ಶಿ. ಭೂಸನೂರಮಠ<br>ಚೆನ್ನಪ್ಪ ಉತ್ತಂಗಿ ಪ್ರ : ಶ್ರೀ ವೀರಭದ್ರಪ್ಪ<br>ಹಾಲಬಾವಿ, ಧಾರವಾಡ | 1950 |
| 4. ಗೌರವಾಂಕನ<br>ಮೋಳಿಗಯ್ಯನ ಪುರಾಣ | ಸಂ: ಸಂ. ಶಿ. ಭೂಸನೂರಮಠ<br>ಪ್ರ.ಶ್ರೀ ವೀರಭದ್ರಪ್ಪ ಹಾಲಬಾವಿ | 1951 |
| 5. ಕಲ್ಲು ಮಠದ ಪ್ರಭುದೇವರ<br>ಲಿಂಗಲೀಲಾವಿಲಾಸ<br>ಚಾರಿತ್ರ | ಸಂ: ಸಂ.ಶಿ. ಭೂಸನೂರಮಠ<br>ಪ್ರ.ಶ್ರೀ.ನಿ.ಪ್ರ.ಸ್ವ. ಮಹಾಂತಸ್ವಾಮಿಗಳು<br>ಮುರುಘಾಮಠ ಧಾರವಾಡ | 1956 |
| 6. ಅದೃಶ್ಯಕವಿ<br>ಪ್ರೌಢ ರಾಯನ ಕಾವ್ಯ | ಸಂ.ಸಂ. ಶಿ. ಭೂಸನೂರಮಠ<br>ಪ್ರ. ಶ್ರೀ ಮ.ನಿ.ಪ್ರ.ಮೃತ್ಯುಂಜಯ ಮಹಾ ಸ್ವಾಮಿಗಳು<br>ಮುರುಘಾಮಠ, ಧಾರವಾಡ | 1957 |
| 7. ಗೂಳೂರ ಸಿದ್ಧ ವೀರಣ್ಣೊಡೆಯರ<br>ಪ್ರಭುದೇವರ ಶೂನ್ಯ<br>ಸಂಪಾದನೆ | ಸಂ : ಸಂ. ಶಿ. ಭೂಸನೂರಮಠ<br>ಪ್ರ: ರಾವೂರ ಶ್ರೀ ಸಿದ್ಧಲಿಂಗೇಶ್ವರ ಮಠ<br>ಮತ್ತು ಆದವಾನಿಯ ಕಲ್ಲು ಮಠದ ಅಧಿಪತಿಗಳು | 1958 |
| 8. ಜಗಜ್ಯೋತಿ ಬಸವಣ್ಣನವರ<br>ಲೋಕ ಪ್ರಿಯ ವಚನಗಳು | ಸಂ.ಸಂ.ಶಿ. ಭೂಸನೂರಮಠ<br>ಡಾ.ಡಿ.ಎಸ್. ಕರ್ಕಿ ಮತ್ತು<br>ಶ್ರೀಮತಿ ಪ್ರಭಾತಾಯಿ ಕುಲಕರ್ಣಿ | 1961 |

ಪ್ರ: ವಚನ ಮಂಟಪ ಬೆಳಗಾಂವಿ

| | | |
|---|---|---|
| 9. ವಚನ ಸಾಹಿತ್ಯ ಸಂಗ್ರಹ | ಸಂ. ಸಂ. ಶಿ. ಭೂಸನೂರಮಠ<br>ಪ್ರ, ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ<br>ಶಾಖೆ ಮೈಸೂರ ಸರಕಾರ | 1965 |
| 10. ವಚನ ಸಾಹಿತ್ಯಸಾರ ಸಂಗ್ರಹ | ಸಂ : ಸಂ. ಶಿ. ಭೂಸನೂರಮಠ<br>ಪ್ರ: ಶ್ರೀ ಗುರು ಅನ್ನದಾನಮಹಾಸ್ವಾಮಿಗಳು<br>ಶತಮಾನೋತ್ಸವ ಸಮಿತಿ ಹಾಲಕೆರೆ - ನರೇಗಲ್ಲ | 1990 |
| 11. ಮಹಾಲಿಂಗ ದೇವರು<br>ಏಕೊತ್ತರ ಶತಸ್ಥಲ | ಸಂ.ಸಂ.ಶಿ. ಭೂಸನೂರಮಠ<br>ಪ್ರ : ಶ್ರೀ ಮ.ನಿ.ಪ್ರ. ಶಿವಬಸವ<br>ಮಹಾಸ್ವಾಮಿಗಳು ರುದ್ರಾಕ್ಷಿಮಠ<br>ನಾಗನೂರ - ಬೆಳಗಾಂವಿ | 1974 |
| 12. ವಿಜಯ ಕಲ್ಯಾಣ | ಸಂ. ಸಂ. ಶಿ. ಭೂಸನೂರಮಠ<br>ಪ್ರ.ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ<br>ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ ಹಂಪೆ | 1988 |
| 13. ಶಿವಯೋಗಿ ಶಿವಾಚಾರ್ಯನ<br>ವೀರಶೈವ ಸಿದ್ದಾಂತ ಶಿಖಾಮಣಿ | ಸಂ. ಸಂ. ಶಿ. ಭೂಸನೂರಮಠ<br>ಮತ್ತು ಡಾ. ಎಸ್.ಜಿ. ವಾರಿ<br>ಪ್ರ. ಶ್ರೀ ಮದ್ವೀರಶೈವ ಶಿವಯೋಗ ಮಂದಿರ | 1992 |

--------

## ಪ್ರೊ. ಭೂಸನೂರಮಠ ರವರ ಅಪೂರ್ವ ಕೃತಿ "ಭವ್ಯ ಮಾನವ"

ಪ್ರೊ. ಭೂಸನೂರಮಠರು ಕನ್ನಡದ ವಿದ್ವತ್ ಪ್ರಪಂಚದಲ್ಲಿ ಅದರಲ್ಲೂ ವಚನ ಸಾಹಿತ್ಯದಲ್ಲಿ ಅವರದು ಪರಿಚಿತ ಹೆಸರು. ವಚನ ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಿ ಅದರ ನೆಲೆ ಬೆಲೆಗಳು ನಿರ್ಧಿಷ್ಟವಾಗಿ ಗುರುತಿಸಿದವರು ಇವರು. ಶೂನ್ಯ ಸಂಪಾದನೆಯ ಪರಾಮರ್ಶೆ ಎಂಬ ಅದ್ಭುತವಾದ ಗ್ರಂಥವನ್ನು ಪ್ರಕಟಿಸಿದರು. ಅದು ವಿಮರ್ಶೆಯೆಂದರೆ ವಿಮರ್ಶೆ, ಸಾಹಿತ್ಯವೆಂದರೆ ಸಾಹಿತ್ಯ, ಕನ್ನಡ ಗದ್ಯದ ಹೊಸ ಸೀಮೆಗಳನ್ನು ಹುಡುಕಿ ತೆಗೆದ ಶ್ರೇಯಸ್ಸು ಅವರಿಗೆ ಸಲ್ಲಬೇಕು. ಅದರಿಂದಾಗಿ ಶೂನ್ಯ ಸಂಪಾದನೆ ಕೇವಲ ಒಂದು ಪ್ರಾಚೀನ ಕೃತಿಯಾಗಿ ಉಳಿಯದೇ ನಮ್ಮ ನಾಡಿನ ತಾತ್ವಿಕ ಚಿಂತನೆಗೆ ಒಂದು ಹೊಸ ಅಭಿವ್ಯಕ್ತಿಯನ್ನು ಕಲ್ಪಿಸಿ ಕೊಟ್ಟಿದೆ. ಸೃಜನ ಶೀಲವಾಗಿದ್ದ ಒಂದು ದೃಷ್ಟಿಯಿಂದ ಗದ್ಯ ಕಾವ್ಯವೇ ಆಗಿದ್ದ ಈ ಕೃತಿಯಿಂದಾಗಿ ಭೂಸನೂರಮಠರ ಕಾವ್ಯ ಸೃಷ್ಟಿಗೆ

ಕೈಹಾಕಬಹುದುದೆಂಬ ಸಂಶಯ ಬರುವಂತಿರಲಿಲ್ಲ. ಆದುದರಿಂದ ಈ ಗ್ರಂಥ ರಚನೆ ಆದ ಮೇಲೆ ಭೂಸನೂರಮಠರ ಮುಂದಿನ ಸಾಹಸವೆಂದರೆ ಭವ್ಯಮಾನವ ಮಹಾಕಾವ್ಯ.

ಸುಮಾರು ೯೦೦ ಪುಟಗಳಲ್ಲಿ ಅರಳಿನಿಂತ ಮಹಾಕಾವ್ಯಕೃತಿ, ಪ್ರಕಟಗೊಂಡಿರುವ ಈ ಕೃತಿಯನ್ನು ರಸಿಕರು, ವಿಮರ್ಶಕರು, ಸೇರಿ ಎಲ್ಲ ವಾಚಕರು ಇನ್ನು ಇದರ ಆಸ್ವಾದದ ಮೊದಲ ಹಂತದಲ್ಲಿದ್ದಾರೆ. ಕಾವ್ಯನುಭಾವದ ರೋಮಾಂಚನ ಇನ್ನು ಮೈಮೇಲೇರುವಾಗಲೇ ಅದಕ್ಕೊಂದು ಅಭಿವ್ಯಕ್ತಿಯನ್ನು ಕೊಡಬೇಕು. ಸಾಹಿತ್ಯ ವಿಮರ್ಶಕನಿಗೆ ಹೊಸಕಣ್ಣು ಕೊಡಬಲ್ಲ ಇಂಥ ಕೃತಿಗಳ ಅಭ್ಯಾಸದಿಂದ ವಿಮರ್ಶಕನಿಗೆ ಲಾಭವೇ ಹೊರತು ಕವಿಗೆ ಅಲ್ಲ - ಕಾವ್ಯ ಸೂತ್ರಗಳನ್ನು ಮೊಟ್ಟಮೊದಲಿನಿಂದ ಅಭ್ಯಾಸ ಮಾಡಲು ಹಚ್ಚುವ ಇಂಥ ಕೃತಿಗಳು ಕಾವ್ಯದ ಬಗೆಗಿನ ನಮ್ಮ ತಿಳುವಳಿಕೆಯನ್ನು ಹೆಚ್ಚು ಮಾಡುತ್ತವೆ. ಭವ್ಯಮಾನವ ಈ ದೃಷ್ಟಿಯಿಂದ ಒಂದು ಮಹತ್ವದ ಕೃತಿಯಾಗಿದೆ.

ಭವ್ಯಮಾನವ ಸುಮಾರು 20,000 ಪಂಕ್ತಿಗಳ ಒಂದು ದೀರ್ಘ ಕಾವ್ಯ, ಪ್ರಾಚೀನ ಸಾಹಿತ್ಯದಲ್ಲಿ ಇಂಥ ದೀರ್ಘಕಾವ್ಯಗಳಿಗೆ ಕೊರತೆ ಇರಲಿಲ್ಲ. ಒಂದು ಕಥೆಯ ಮೂಲಕವಾಗಿ ಒಂದು ಯುಗದ ಪ್ರಜ್ಞೆಯನ್ನು ತಿಳುವಳಿಕೆಯನ್ನು ಬಾಳಿನ ಮೂಲಕ ವ್ಯವಸ್ಥೆಯನ್ನು ಪ್ರಮುಖವಾದ ಆಶೋತ್ತರಗಳನ್ನು ಮತ್ತು ಆ ಯುಗಕ್ಕೆ ವಿಶಿಷ್ಟವಾಗಿರುವ ಭಾವ ಪರಿವೇಷವನ್ನು ಸಮರ್ಥವಾಗಿ ಅವು ಅಭಿವ್ಯಕ್ತಿಸುತ್ತಿದ್ದವು. ಒಂದು ಕಾಲಮಾನದ ಒಂದು ಜನಾಂಗದ ಅನುಭವ ಪ್ರಪಂಚಕ್ಕೆ ಪ್ರೇರಕವಾಗಿರುವ ಸೂಕ್ತ ಪ್ರಜ್ಞೆಯ ಕೃತಿಗಳಲ್ಲಿ ಒಂದು ರೂಪವನ್ನು ಪಡೆಯುತ್ತಿದ್ದವು. ಆದರೆ ಇವೆಲ್ಲಕ್ಕೂ ಮುಖ್ಯವಾಗಿರುವದು. ಆ ಕಾವ್ಯ ಹೇಳುವ ಕಥೆ ಜೀವನಾನುಭವದ ಸಮಗ್ರತೆ, ಸಮಗ್ರತೆಯಲ್ಲಿ ಆಕಾರ ಪಡೆದರೆ ಮಾತ್ರ ಇಂಥ ಕೃತಿಗಳು ಸಾರ್ಥಕವಾಗುತ್ತದೆ.

ಮಹಾಭಾರತದ ಕೊನೆಗೆ ಹೇಳಿರುವಂತೆ ಮನುಷ್ಯನ ಸಮಗ್ರ ಜೀವನ ಪರಿಪಾಕಗೊಳ್ಳುವದು, ಅರ್ಥ ಪಡೆಯುವುದು ಕಾವ್ಯದ ಮೂಲಕವಾಗಿ, ಅದು ನಿಜವಾಗಿದ್ದರೆ ಕಥೆಗೆ ಆಕಾರ ಕೊಡುವ ತತ್ವವೆಂದರೆ ಕಾಲ. ನಮ್ಮಹಳೆಯ ಮಹಾಕಾವ್ಯಗಳ ಕಾಲ ಪ್ರಜ್ಞೆಯನ್ನು ಈ ದೃಷ್ಟಿಯಿಂದ ನೋಡಿ ಅಭ್ಯಾಸ ಮಾಡುವದು ಇಂದು ಅವಶ್ಯವಾಗಿದೆ. ಕಾಲಪ್ರಜ್ಞೆಕಡೆದು ನಿರ್ಮಿಸಿದ ಕಥೆಗಳು ಮಾತ್ರ ಒಂದು ನಾಡಿನ ಸಂಸ್ಕೃತಿಯನ್ನು ಜೀವಂತವಾಗಿ ರೂಪಿಸುತ್ತದೆ. ಉದಾಹರಣೆಗೆ ಮಹಾಭಾರತದ ಸಾಂಸ್ಕೃತಿಕ ಸಂದರ್ಭದಲ್ಲಿಯೇ ನಾವಿನ್ನು ಜೀವಿಸುತ್ತಿದ್ದೇವೆ. ನಮ್ಮ ಅತ್ಯಂತ ಆಳವಾದ ಭಾವಗಳ ಮೂಲಕ ನೆಲೆ ಈ ಕಾವ್ಯದಲ್ಲಿ ಇದೆ.

ನಮ್ಮ ತಿಳುವಳಿಕೆಯನ್ನು ಹೆಚ್ಚಿಸುವ ಮೌಲ್ಯಗಳನ್ನು ರೂಪಿಸುವ ಒಳಿತು ಕೆಡಕುಗಳನ್ನು ಲೆಕ್ಕಹಾಕುವ ಪ್ರಜ್ಞೆ ನಮಗೆ ಇಂಥ ಕಾವ್ಯಗಳ ಮೂಲಕವಾಗಿ ದೊರೆಯುತ್ತದೆ. ಆದರೆ, ಮಹಾಕಾವ್ಯದ ಸಾಹಿತ್ಯರೂಪ ಹಳೆಯದು. ಜೀವಂತವಾದ ಸಂಬಂಧಗಳಿಂದ ಜಟಿಲವಾಗಿ ಹೆಣೆದುಕೊಂಡಿದೆ. ಆದರೆ ಮಹಾಕಾವ್ಯದ ಸಾಹಿತ್ಯರೂಪ ನಿರ್ಮಿಸಬಲ್ಲದ್ದಾಗಿತ್ತು. ಆದರೆ ಅಂಥ ಕೃತಿ ಇಂದು ಮೂಡಿ ಬರಲು ಸಾಧ್ಯವೆ? ಎಂಬ ಪ್ರಶ್ನೆಯೊಂದಿದೆ ಇದು ಭಾವಗೀತೆಗಳ ಯುಗ ಅಲ್ಲದೆ ಕಥೆ ಹೇಳುವ ಗುತ್ತಿಗೆಯನ್ನು ನಮ್ಮ ಕಾದಂಬರಿಗಳು ವಹಿಸಿಕೊಂಡಾಗ ನಮ್ಮ

ಕಾವ್ಯಕ್ಕೆ ಕಥೆ ಹೇಳುವ ಲವಲವಿಕೆ ಉಳಿಯಲಿಲ್ಲ. ನಿಶ್ಚಯವಾಗಿ ನಮ್ಮ ಕಾವ್ಯದ ಆಸಕ್ತಿಗಳು ಇಂದು ಬದಲಾಗಿದೆ. ಆದರೆ ಇಂಥ ಸಂದರ್ಭದಲ್ಲಿ ಕುವೆಂಪುರವರ ರಾಮಾಯಣ ದರ್ಶನ, ವಿನಾಯಕ ಗೋಕಾಕರ ಭಾರತ ಸಿಂಧುರಶ್ಮಿ ಕೃತಿಗಳು ಬಂದಿವೆ. ಕಥೆಗಿಂತ ಕಥೆಯಸಾಂಕೇತಿಕ ಅರ್ಥ ಮತ್ತು ಪಾತ್ರಗಳ ಅಂತಃಸತ್ವ ಇವುಗಳಿಗೆ ಪ್ರಾಧಾನ್ಯವಿದ್ದರೂ ಕೂಡಾ ಈ ಕೃತಿಗಳು ಕಥೆಗಳನ್ನು ಬಿಟ್ಟಿಲ್ಲ. ಕಥೆ ಪೌರಾಣಿಕವಾಗಿರಬಹುದು, ಐತಿಹಾಸಿಕ ವಾಗಿರಬಹುದು ಇಂದಿನ ಮೌಲ್ಯಗಳನ್ನೊಳಗೊಂಡಿರಬಹುದು. ಚಿಂತನೆಯಲ್ಲಿ ಹೊಸತನ ಇರಬಹುದು. ಆದರೆ ಕಥೆ ತನ್ನ ಸ್ವಭಾವವನ್ನು ಬಿಟ್ಟು ಕೊಡುವುದಿಲ್ಲ.

ಭೂಸನೂರಮಠ ಅವರ ಭವ್ಯ ಮಾನವದಲ್ಲಿ ಒಂದು ಕಥೆ ಇದೆ. ಆರು ಕಾಂಡಗಳ ಈ ಕಾವ್ಯದಲ್ಲಿ ಮೊದಲಿನ ಕಲ್ಯಾಣಕಾಂಡ, ಶ್ರೀಶೈಲಕಾಂಡಗಳು, ಮಹಾದೇವಿಯಕ್ಕನ ಕಥೆಯನ್ನು ಸ್ವಲ್ಪವಿಸ್ತಾರವಾಗಿಯೇ ಹೇಳುತ್ತವೆ. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಮಲ್ಲಿಕಾರ್ಜುನಂಗೆ ಒಲಿದ ಅಕ್ಕ, ಬಾಲ್ಯದಿಂದಲೇ ಮಲ್ಲಿಕಾರ್ಜುನ ಒಲವನ್ನು ಹೃದಯದಲ್ಲಿ ಮೂಡಿಸಿಕೊಡು; ಅಕ್ಕ ಪ್ರಪಂಚದ ಮೋಹವನ್ನು ಸಂಬಂಧಗಳ ಹಂಗನ್ನು ಕೊನೆಗೆ ಮೈ ಮೇಲಿನ ಉಡಿಗೆಯನ್ನು ಬಿಟ್ಟುಕೊಟ್ಟುಕಲ್ಯಾಣದ ಶರಣರ ಜೊತೆಗೆ ತತ್ವ ಗೋಷ್ಠಿಯನ್ನು ನಡೆಸಿ ಪ್ರಭುವಿನ ಆದೇಶದಂತೆ ಶ್ರೀಶೈಲಕ್ಕೆ ಬಂದು ಅಲ್ಲಿ ತನ್ನ ಗುರು ಚೆನ್ನಮಲ್ಲಿಕಾರ್ಜುನನನ್ನು ನೋಡುವವರೆಗೆ ಕಥೆ ಸುಂದರವಾಗಿ ಮೂಡಿ ಬಂದಿದೆ.

ಅಕ್ಕನ ವಚನಗಳಲ್ಲಿಯೇ ಕಾವ್ಯ ಸಂಪತ್ತನ್ನು ಉಚಿತವಾಗಿ ಉಪಯೋಗಿಸಿಕೊಂಡು ಆ ಕಥೆ ಬೆಳೆದು ಬಂದಿದೆ. ತನ್ನ ಪಾಡಿಗೆ ತಾನು ಚೆನ್ನ ಮಲ್ಲಿಕಾರ್ಜುನನಲ್ಲಿ ಸಮರಸ ಐಕ್ಯವನ್ನು ಪಡೆಯಲು ಬಂದ ಅಕ್ಕನ ಮನಸ್ಸನ್ನು ಲೋಕದ ಕತ್ತಲೆಯ ಕಡೆಗೆ ತಿರುಗಿಸಿದವನು ಗುರು ಚೆನ್ನಮಲ್ಲಿಕಾರ್ಜುನ; ಕಾವ್ಯದ ದೃಷ್ಟಿಯಿಂದ ಇದು ಮಹತ್ವದ ತಿರುವು, ಕತ್ತಲೆಯ ಕಾಂಡದಲ್ಲಿ ಸುಖ ದುಃಖಗಳ ದ್ವಂದ್ವದಲ್ಲಿ ಸಿಕ್ಕು ತೊಳಲಾಡುತ್ತಿರುವ ಲೋಕದ ಚಿತ್ರವಿದೆ. ಅಕ್ಕನಾಗಲಿ ಅವಳ ಗುರುವಾಗಲಿ ಈ ಲೋಕದ ಹಂಗು ಹರಿದುಕೊಂಡು ಹೊರಗೆ ನಿಂತವರು. ಕೂಗಳತೆಯ ದೂರದಲ್ಲಿ, ಮೋಕ್ಷವನ್ನಿಟ್ಟುಕೊಂಡು ಕಣ್ಣಳತೆಯಲ್ಲಿ ದೇವರ ರೂಪವನ್ನು ನಿಲ್ಲಿಸಿಕೊಂಡಿರುವ ಇವರಿಗೆ ಬಿಡುಗಡೆ ಸುಲಭಸಾಧ್ಯವಾಗಿದೆ. ಆದರೆ ಅಂಥ ಸೌಲಭ್ಯದ ದಾರಿಯನ್ನು ಹಿಡಿಯದೆ ಇವರು ಕತ್ತಲೆಯ ಈ ಲೋಕಕ್ಕೂ ದೇವರ ಅಸ್ತಿತ್ವಕ್ಕೂ ಇರಬಹುದಾದ ಸಂಬಂಧದ ದಾರಿಯನ್ನು ಹುಡುಕುತ್ತಿದ್ದಾರೆ. ಈ ದಾರಿಯಲ್ಲಿ ಇರುವ ಅವರ ತಿಳುವಳಿಕೆಗೆ ನಿಲುಕಿದ್ದೇನು? ಎಂದು ತೋರಿಸುವುದೇ ಈ ಕಾವ್ಯದ ವಸ್ತುವಾಗಿದೆ. ಪರಮಾತ್ಮ ತತ್ವಕ್ಕೂ ಈ ಲೋಕಕ್ಕೂ ಇರಬಹುದಾದ ಸಂಬಂಧ ಸಮಸ್ಯೆ ಅತ್ಯಂತ ಬಿಗಿಯಾದುದು. ಕಾವ್ಯದ ಉದ್ದಕ್ಕೂ ಈ ಸಮಸ್ಯೆಯ ಅನೇಕ ಪದರುಗಳನ್ನು ಬಿಡಿಸಿ ತೋರಿಸಲಾಗಿದೆ. ಅಕ್ಕಮಹಾದೇವಿ, ಗುರುಚನ್ನಮಲ್ಲಿಕಾರ್ಜುನ ಮತ್ತು ಶಿಷ್ಯ ಗಿರಿಮಲ್ಲ ಇವರಿಗೆ ಮನುಷ್ಯ ಜೀವದ ಬಿಡುಗಡೆ ಸಮಸ್ಯೆಯೇ ಇಲ್ಲ. ಆದರೆ ಅವರಿಗೆ ಕಾಲಕ್ರಮದಲ್ಲಿ ನಡೆದ ಮನುಷ್ಯ ಜೀವನದ ಏರು ಇಳಿವುಗಳ ಇತಿಹಾಸದ ಒಗಟು ಬಿಚ್ಚಬೇಕಾಗಿದೆ. ಅದಕ್ಕಾಗಿ ರಾಮಾಯಣ, ಮಹಾಭಾರತಗಳ ಚಿತ್ರಗಳನ್ನು ನಿರ್ಮಿಸಿ, ಮನುಷ್ಯ ದೊಡ್ಡದಾಗಿ ಬಾಳಿದ ರೀತಿಯನ್ನು ನಿರೂಪಿಸುತ್ತಾನೆ. ಮತ್ತೆ

ಕತ್ತಲೆ ಆವರಿಸುವುದನ್ನು ಕಂಡು ಚರ್ಚಿಸುತ್ತಾನೆ. ಶರಣರ ಜನ ಈ ಸಮಸ್ಯೆಗೆ ಪರಿಹಾರವನ್ನು ಕೊಡಬಲ್ಲುದೆಂಬ ಸೂಚನೆ ಬರುತ್ತದೆ. ಇಡೀ ಸೃಷ್ಟಿಯ ಗುರಿಯೇ ಶರಣರ ನಿರ್ಮಾಣವಾಗಿರಬಹುದೆಂದು ಅಕ್ಕ ಸೂಚಿಸುತ್ತಾಳೆ. ಮನುಷ್ಯನನ್ನು ಹುಟ್ಟಿಸಿ ದ್ವಂದ್ವಮಯವಾದ ಜೀವನದ ಸುಖ ದು:ಖಗಳನ್ನು ಹಂಚಿ ಅವನನ್ನು ಮೃತ್ಯುವಿನ ಕರಾಳ ನರಕಕ್ಕೆ ನೂಕುವುದರ ಉದ್ದೇಶವೆಂದರೆ; ಈ ಶರಣನ ಸೃಷ್ಟಿ. ಈ ಸೃಷ್ಟಿಗೆ ಜನ್ಮ ಜನ್ಮಾಂತರದ ಸಂಸ್ಕಾರ ಅವಶ್ಯವಾಗಿದೆ. ಎಂಬ ಸೂಚನೆ ಇಲ್ಲಿದೆ. ಕಲ್ಯಾಣದಲ್ಲಿ ನಡೆದಿದ್ದ ಶರಣಗೋಷ್ಠಿ, ಹಾಗೆ ನೋಡಿದರೆ ಒಂದು ಐತಿಹಾಸಿಕ ಘಟನೆ ಮೂರ್ತಿಯಾದುದಕ್ಕೆ ಪ್ರಳಯ ತಪ್ಪದು ಎಂಬ ಪ್ರಭು ದೇವರ ಮಾತಿನಂತೆ ಈ ಘಟನೆ ಮೂಡಿದಂತೆಯೇ ಮಾಯವಾಗಿ ಹೋಯ್ತು ಮೂರ್ತಿಯಾದುದಕ್ಕೆ ಪ್ರಳಯತಪ್ಪದು ಎಂದು ಪ್ರಭುದೇವರ ವಚನದಂತೆಯೇ ಇನ್ನೊಂದು ವಚನವೆಂದರೆ 'ಆದಿಯ ಲಿಂಗವಮೇದಿನಿಗೆ ತಂದು ಮರ್ತ್ಯದೊಳಗೆ ಮಹಾಮನೆಯ ಕಟ್ಟಿದ ಬಸವಣ್ಣ. ಬಸವಣ್ಣನ ಇನ್ನೊಂದು ವಚನವೆಂದರೆ "ಬಿಡಲಾರೆ ಮೃರ್ತ್ಯುವ ಬಿಡಲಾರೆ ನೆಲದ ತಿಂತಿಣಿಯ ಮರ್ತ್ಯಲೋಕವು ಮಹಾಮನೆಯಾಗದನ್ನ" ಇಂಥ ವಚನಗಳು ಒಂದಕ್ಕೊಂದು ವಿರುದ್ಧವಾದ ದೃಷ್ಟಿಕೋನಗಳನ್ನು ಪ್ರತಿಬಿಂಬಿಸುತ್ತವೆ. ಈ ವಿರೋಧದ ಒಡಲಿನಿಂದಲೇ ಒಂದು ಸಾಮರಸ್ಯ ಮೂಡುವುದನ್ನು ಈ ಕಾವ್ಯ ತೋರಿಸುತ್ತದೆ. ಇದೇ ಈ ಕಾವ್ಯದ ಪ್ರಯತ್ನವಾಗಿದೆಯೆಂದರೂ ಅಡ್ಡಿಯಿಲ್ಲಾ.

ಈ ಕಾವ್ಯಕ್ಕೆ ಕಥೆಯ ಹಂಗಿಲ್ಲ ಮೊದಲೆರಡು ಕಾಂಡಗಳಲ್ಲಿಯ ಅವಶ್ಯವಾಗಿರುವ ಅಕ್ಕನ ಕಥೆ ಕೂಡಾ ಕೆಲವೊಂದು ಸಲ ಕಾವ್ಯಕ್ಕೆ ತೊಡಕಾಗಿದೆ. ಕಥೆಯಿಂದ ಬಿಡುಗಡೆ ಪಡೆಯಲು ಕಾವ್ಯದ ಪ್ರತಿಯೊಂದು ಸಾಲುಗಳು ಹಾತೊರೆಯುವಂತಿವೆ. ಕಾವ್ಯದ ಬಂಧವನ್ನು ಕುರಿತು ವಿಚಾರ ಮಾಡಿದರೆ ಈ ಕಾವ್ಯ ಅಕ್ಕನಂತೆಯೇ ನಿರಾಭರಣವಾಗಿ ಮುಕ್ತವಾಗಿ ಬಯಲಿನಲ್ಲಿ ಸಂಚಾರಕ್ಕೆ ಹೊರಟಂತಿದೆ. ಕಾವ್ಯ ವಸ್ತುವಿಗೆ ಅವಶ್ಯವಾಗಿರುವ ಮುಕ್ತ ಸ್ವರೂಪವನ್ನು ಕೊನೆಯ ಪಂಕ್ತಿಯವರೆಗೆ ಹಿಡಿದಿಟ್ಟುಕೊಂಡಿರುವದು. ಕವಿಯ ಪ್ರತಿಭೆಯ ಸೋಜಿಗಗಳಲ್ಲಿ ಒಂದಾಗಿದೆ. ಕಾವ್ಯದಲ್ಲಿ ವೈಚಾರಿಕತೆ; ನೀತಿಪರತೆ, ಆಧ್ಯಾತ್ಮಿಕತೆ, ಅನುಭಾವ ಇವೆಲ್ಲ ಮಾರಕವಾಗಬಲ್ಲವೆಂಬುದು ಇಂದಿನ ವಿಮರ್ಶೆಯ ಧೃಡನಂಬಿಕೆಯಾಗಿದೆ. ಆದರೆ ಭೂಸನೂರಮಠರ ಕಾವ್ಯ ಇದೊಂದು ಸಮಸ್ಯೆಯೇ ಅಲ್ಲ ಎನ್ನುವಷ್ಟರ ಮಟ್ಟಿಗೆ ಸೂಸೂತ್ರವಾಗಿ ಈ ಕೃತಿಯಲ್ಲಿ ಗುರಿಮುಟ್ಟಿದೆ.

## ಪ್ರೊ || ಸಂ. ಶಿ. ಭೂಸನೂರಮಠರವರ ಘನ ವ್ಯಕ್ತಿತ್ವ

ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಸಂಶೋಧನಾ ಕ್ಷೇತ್ರದ ವಿದ್ವಾಂಸರಾದ ಭೂಸನೂರಮಠ ಅವರು ಉಪನಿಷತ್ತಿನ ದೃಷ್ಟಾರರಂತೆಯೇ ಜ್ಞಾನ ಮಾರ್ಗದ ಪ್ರವರ್ತಕರು ಹಾಗೂ ಮಾನವತೆಯ ಭವ್ಯ ಅನ್ವೇಷಕರು. ಸಾಹಿತ್ಯ, ಸಂಗೀತ, ವಿಜ್ಞಾನ, ತತ್ವಜ್ಞಾನ, ಗಣಿತ, ಭೌತಶಾಸ್ತ್ರ ಇತ್ಯಾದಿ ವೈವಿಧ್ಯಮಯವಾದ ಜ್ಞಾನ ಕ್ಷೇತ್ರಗಳಲ್ಲಿ ವಿಶೇಷ ಆಸಕ್ತಿ ಮತ್ತು ಗಂಭೀರ ಅಧ್ಯಯನದ ಹಿನ್ನೆಲೆಯುಳ್ಳ ಬಹುಮುಖ ಪ್ರತಿಭೆಯುಳ್ಳವರು ಹಾಗೂ

ಶ್ರೇಷ್ಠತೆ ಆರಾಧಕರು ಶ್ರೇಷ್ಠವಾದುದನ್ನೆ ಅರಸುವ; ಅರಿಯಬೇಕೆನ್ನುವ ಜ್ಞಾನದಾಹಿಗಳು: ಅಂತೆಯೇ ೮೦ ವರ್ಷಗಳ ಸಾರ್ಥಕ ಬದುಕಿನುದ್ದಕ್ಕೂ ಅವರು ಬೆಳೆದ ರೀತಿ ಏರಿದ ಎತ್ತರಗಳು ನಮ್ಮನ್ನು ಬೆರಗುಗೊಳಿಸುವಂತಿವೆ.

ಚಿಂತನಶೀಲತೆ ಸ್ವಯಂ ಶಿಕ್ಷಣ ಆತ್ಮವಿಶ್ವಾಸದ ಗುಣಗಳನ್ನು ಸ್ವಭಾವ ಧರ್ಮಗಳಾಗಿಸಿಕೊಂಡು ಅವರು ಅರಿವಿನ ಪೂಜಕರು; ಬೆಳಕಿನ ಶೋಧಕರು. ತಮ್ಮ ಪ್ರತಿಭೆ ಪಾಂಡಿತ್ಯದ ಭಾರದಿಂದ ಬಾಗಿದವರೇ ಹೊರತು ಬೀಗಿದವರಲ್ಲ. ಅವರು ಪಂಡಿತರೂ ಸಂಶೋಧಕರೂ ಆಗಿದ್ದರೂ ಅರಸಿಕರಾಗಿರಲಿಲ್ಲ. ತಮ್ಮ ಶಿಕ್ಷಕ ವೃತ್ತಿಯುದ್ದಕ್ಕೂ ನೂರಾರೂ ಪ್ರತಿಭೆಗಳನ್ನು ರೂಪಿಸಿದ ಹಿರಿಮೆ ಅವರದು. ಭಾರತೀಯ ಗುರುವಿನ ಆದರ್ಶಕ್ಕೆ ಮಾದರಿಯಾದುದು ಭೂಸನೂರಮಠ ಅವರ ವ್ಯಕ್ತಿತ್ವ, ಜಾಗತಿಕ ತತ್ವ ಶಾಸ್ತ್ರವನ್ನು ಭಾರತೀಯ ಆಧ್ಯಾತ್ಮಿಕ ಪರಂಪರೆ ಮತ್ತು ದಾರ್ಶನಿಕ ಸತ್ವವನ್ನು ಅರಿತು ಅರಗಿಸಿಕೊಂಡ ಭೂಸನೂರಮಠ ಅವರ ವ್ಯಕ್ತಿತ್ವದ ಬಹುಮುಖಿ ಸತ್ವವನ್ನು ನಿರೂಪಿಸುವ ಸಾಹಿತಿ ಡಾ. ಸಾ.ಶಿ. ಮರುಳಯ್ಯನವರ ಅಭಿಪ್ರಾಯ ಹೀಗಿದೆ. “ಆಡಂಬರವಿಲ್ಲದಸರಳ ಜೀವಿಗಳು ಸಾಹಿತ್ಯ, ಸಂಸಾರ, ಆಧ್ಯಾತ್ಮ, ಆಚಾರ ಯಾವುದೇ ಇರಲಿ ಅದನ್ನು ಕುರಿತು ಮಾತನಾಡುವಾಗ ತಮ್ಮದೇ ಆದ ಸ್ಪಷ್ಟ ನಿಲುವು ತಳೆದವರು. ಆದರೆ ಅನ್ಯರನ್ನು ಪ್ರಲೋಭಿಸದ ಸಾತ್ವಿಕ ಸ್ವಭಾವದವರು. ಇವರಲ್ಲಿ ಪ್ರತಿಭೆ ದುಡಿದ ಪಾಂಡಿತ್ಯ ಹಾಗೂ ವಿದ್ವತ್ತಿನಲ್ಲಿ ಅದ್ವಿತೀಯರಾಗಿದ್ದರು. ಧರ್ಮ ದರ್ಶನ ಸ್ವೀಕೃತಿಯಲ್ಲಿ ಸಮದರ್ಶಿಗಳು.... ದೈವಭಕ್ತ, ಧರ್ಮಬೀರು, ಅನುಭಾವಿ, ಶಿಕ್ಷಣ ತಜ್ಞ, ರಸಿಕ, ಸ್ನೇಹಜೀವಿ, ಸುಸಂಸ್ಕೃತ ಸಜ್ಜನಿಕೆಯ ಸಾಕಾರಮೂರ್ತಿ, ಅಪರಿಚಿತರಿಗೆ ಅವರು ಸಾಕ್ಷತಾ ದೇವರು, ಸುಪರಿಚಿತರಿಗೆ, ಪ್ರಕಾಂಡ ಪಂಡಿತ ದಾರ್ಶನಿಕ ಋಷಿ, ಕವಿ, ನಿಷ್ಠಾವಂತ ಸಂಶೋಧಕ ದೃಷ್ಟಾರರು” ಎನ್ನುತ್ತಾರೆ ವಿಚಾರವಾದಿ ಪ್ರೊ || ಸ.ಸ. ಮಾಳವಾಡರು ಭೂಸನೂರಮಠ ಆಪ್ತ ಸ್ನೇಹಿತರಾಗಿ ಸಹೋದ್ಯೋಗಿಗಳಾಗಿ ಸುಮಾರು ಐದು ದಶಕಗಳ ಕಾಲ ನಿಕಟ ಒಡನಾಟವುಳ್ಳವರು. ಅವರು ಕಂಡಂತೆ ಭೂಸನೂರಮಠರು ಕುಟುಂಬ ವತ್ಸಲರು ಸ್ನೇಹಜೀವಿಗಳು ಅಂತಃಕರಣ ಪೂರ್ವಕವಾಗಿ ಇತರರಕುಶಲ ಸಮಾಚಾರಗಳನ್ನು ವಿಚಾರಿಸುತ್ತಾರೆ. ಹಿರಿಯರಂತೆ ಸಲಹೆಯನ್ನು ಕೊಡುತ್ತಾರೆ. ಭಿನ್ನ ನಿಲುವನ್ನು ತಳೆದಾಗ ಅವರು ಜಿಗುಟುತನವನ್ನು ತೋರುತ್ತಾರೆ. ಕೆಲವು ಸಲ ಲೆಕ್ಕಾಚಾರಕ್ಕು ಅಂಟಿಕೊಳ್ಳಬಲ್ಲರು ಎನ್ನುತ್ತಾರೆ.

ಆದರ್ಶ ವಾಸ್ತವಿಕತೆಯ ಗಟ್ಟಿ ನೆಲದಲ್ಲಿ ಬೇರು ಬಿಟ್ಟಿದ್ದ ಭೂಸನೂರಮಠರು ಲೋಕ ಲೌಕಿಕವನ್ನು ಸರಿಯಾಗಿ ಗುರುತಿಸಬಲ್ಲ ವ್ಯವಹಾರಕುಶಲರು, ಚಾಣಾಕ್ಷಮತಿಗಳು ಮುಕ್ತ ಮನಸ್ಸು, ಭಾವ ವೈಶಾಲ್ಯದ ಗುಣದಿಂದಾಗಿ ಸಹೋದ್ಯೋಗಿಗಳ ಪ್ರೀತಿಗೆ ಪಾತ್ರರಾಗಿದ್ದರು. ಅವರೊಂದಿಗೆ 20 ವರ್ಷ ಸಹೋದ್ಯೋಗಿಯಾಗಿದ್ದ ಪ್ರೊ. ಎ.ಜಿ. ಕುಲಕರ್ಣಿಯವರು ಭೂಸನೂರಮಠರ ಬಗ್ಗೆ ಒಳ್ಳೆಯದನ್ನು ಯಾವ ನಿಟ್ಟಿನಿಂದಲೇ ಬರಲಿ ಅದನ್ನು ಮೆಚ್ಚುವ ಮನೋಧರ್ಮದವರು. ಭಾರತೀಯ ಸಂಸ್ಕೃತಿಯ ಪರಂಪರೆಯ ಪರಮ ಅಭಿಮಾನಿಗಳು ವಿಶ್ವಕ್ಕೆ ಭಾರತವು ಒಂದು ಹೊಸ ಬೆಳಕನ್ನು ಕೊಡುವ ಪ್ರಭಾವವುಳ್ಳದ್ದೆಂದು ನಂಬಿಕೊಂಡವರು. ಆತ್ಮಶಕ್ತಿಯ ಅರಿವನ್ನು ಉದ್ದೀಪಿಸುವ ವಿದ್ಯೆಯ ಬಗೆಗೆ ಅವರಿಗೆ ಅಪಾರ ಗೌರವ. ಅದು ಧರ್ಮ, ಅನುಭವ, ವಿಜ್ಞಾನ ಶಾಸ್ತ್ರ ಯಾವುದೇ

ಆಗಿರಲಿ ಜ್ಞಾನಕ್ಕೆ ಯಾವ ಬಾಗಿಲಾದರೇನು? ಜ್ಞಾನದ ಗಳಿಕೆ ಮುಖ್ಯ. ಶೂನ್ಯ ಸಂಪಾದನೆ ಶ್ರೇಷ್ಠ ಎನ್ನುವ ಅವರು ಜ್ಞಾನ ಸಂಪಾದನೆಗೆ ಔಪಚಾರಿಕ ಮಾರ್ಗಕ್ಕಿಂತಲೂ ಅವರು ಸ್ವಾಧ್ಯಾಯವೇ ಶ್ರೇಷ್ಠವೆಂದು ನಂಬಿದ್ದರು ಎನ್ನುತ್ತಾರೆ. ತನ್ನಿಂದ ತನ್ನೊಳಗೆ ಉಚ್ಚ ಗುರುವಿನಿಂದಾಗುವಷ್ಟು ಉಪಕಾರ, ಸಹಾಯ, ಕಲ್ಯಾಣ ಇನ್ನಾರಿಂದಲೂ ಆಗದು ಮತ್ತು ಒಳಗೆ ಕಲಿಸುವ ಗುರುವಿಲ್ಲದಿದ್ದರೆ ಹೊರಗಿನಿಂದ ಕಲಿತ ಬುದ್ಧಿ ಎಷ್ಟುದಿನದ ಮಾತು? ಕಲಿಸಿದ ಬುದ್ಧಿ ಕಟ್ಟುದ ಬುತ್ತಿ ಎಷ್ಟು ದಿನದ್ದು.? ಒಳ್ಳೆ ಜಾಣ ಗುರುವಿನ ಕೆಲಸ, ಕಲಿಯಲಿಕ್ಕೆ ಬಂದವರಿಗೆ ಕಲಿಸುವುದು ಅಲ್ಲವೇ ?

ಜ್ಞಾನದ ಬಗೆಗಿರುವ ಗೌರವ ಅಧ್ಯಯನ ಶೀಲ ಸ್ವಭಾವ ಮತ್ತು ಹೃದಯವಂತಿಕೆಯ ಗುಣಗಳಿಂದ ತಮ್ಮ ಶಿಕ್ಷಕ ವೃತ್ತಿಯುದ್ದಕ್ಕೂ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾದರಿಯ ವ್ಯಕ್ತಿಗಳಾಗಿ, ಶಕ್ತಿಯಾಗಿ ಬಾಳಿದರು. ಇವರ ಶಿಷ್ಯರಾದ ಅನೇಕರು ಕನ್ನಡದ ಹಿರಿಯ ವಿದ್ವಾಂಸರಾಗಿ; ಸುಪ್ರಸಿದ್ಧ ಕವಿಗಳಾಗಿ, ಲೇಖಕರಾಗಿ ಖ್ಯಾತನಾಮರಾಗಿದ್ದಾರೆ.

## ಹಿನ್ನೋಟ

ಜೀವನವನ್ನು ತತ್ವಮಯವನ್ನಾಗಿಸಿಕೊಂಡು ಬದುಕನ್ನು ಸಾರ್ಥಕಪಡಿಸಿಕೊಂಡು ಬದುಕಿದವರು ಪ್ರೊ. ಭೂಸನೂರಮಠ ಅವರು. ಅವರು ತಮ್ಮನ್ನು ತಾವು ಕನ್ನಡ ಸಾಹಿತ್ಯ ಸೇವೆಗೆ ಮೀಸಲಾಗಿರಿಸಿಕೊಂಡು ಹಲವಾರು ಗ್ರಂಥಗಳನ್ನು ಸಂಪಾದಿಸಿದರು. ಅಷ್ಟೆ ಅಲ್ಲದೇ ಇವರು ಎರಡು ಸೃಜನಶೀಲ ಮೇರು ಕೃತಿಗಳನ್ನು ರಚಿಸಿದರು. ಶೂನ್ಯ ಸಂಪಾದನೆಯ ಇಂಗ್ಲೀಷ ಅನುವಾದದ ಮೂಲಕ ಅದನ್ನು ಹೊರದೇಶಗಳಿಗೆ ಪರಿಚಯಿಸಿದರು ಮತ್ತು ಒಳ್ಳೆಯ ಪ್ರಾಧ್ಯಾಪಕರಾಗಿ ನೂರಾರೂ ವಿದ್ಯಾರ್ಥಿಗಳನ್ನು ಸಿದ್ದಪಡಿಸಿದರು. ಬೆಳಗಾವಿಯಂಥ ಸ್ಥಳದಲ್ಲಿ ನಿಂತು ಕನ್ನಡವನ್ನು ಕಟ್ಟುವ ಕೆಲಸ ಮಾಡಿದರು.

ಅವರು ಸಂಪಾದಿಸಿದ ಒಟ್ಟು ಕೃತಿಗಳು 12, ಕನ್ನಡದಲ್ಲಿ ಇನ್ನೂ ಸಂಪಾದನಾ ಶಾಸ್ತ್ರವೇ ಕಣ್ಣು ತೆರೆಯದೇ ಇದ್ದಾಗ ಹಲವಾರು ಪ್ರಾಚೀನ ಕೃತಿಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿ ಸಂಪಾದನಾಶಾಸ್ತ್ರಕ್ಕೊಂದು ಹಾದಿಯನ್ನೂ ಕಲ್ಪಿಸಿಕೊಟ್ಟರು. ಕಷ್ಟಪಟ್ಟು ಸಾಧ್ಯವಾದಷ್ಟು ಮಟ್ಟಿಗೆ ಸಂಬಂಧಿಸಿದ ಹಸ್ತಪ್ರತಿಗಳನ್ನೆಲ್ಲ ಸಂಗ್ರಹಿಸಿ ಅವುಗಳಲ್ಲಿ ಶುದ್ಧ ಪ್ರತಿಯನ್ನು ಮೂಲವಾಗಿರಿಸಿಕೊಂಡು ಉಳಿದ ಪ್ರತಿಗಳ ಪಾಠಾಂತರಗಳನ್ನು ಅಡಿಟಿಪ್ಪಣೆಯಲ್ಲಿ ಕೊಟ್ಟು ಅವುಗಳಿಗೆ ಶಾಸ್ತ್ರೋಕ್ತವಾಗಿ ಪ್ರಸ್ತಾವನೆಯನ್ನು ಬರೆದರು. ಕವಿ- ಕಾವ್ಯಗಳಿಗೆ ಸಂಬಂಧಿಸಿ ಅಂದು ಅವರು ಶೋಧಿಸಿದ ಹಲವಾರು ವಿಷಯಗಳು ಇಂದಿಗೂ ಮಾನ್ಯವಾಗಿರುವುದು ಅವರ ವಿಚಕ್ಷಣಮತಿಗೆ ದ್ಯೋತಕವಾಗಿದೆ. ವಚನ ಸಾಹಿತ್ಯ ಸಂಗ್ರಹಕ್ಕೆ ಬರೆದ ಪ್ರಸ್ತಾವನೆಗಳಲ್ಲಿ ಒಳ ಪ್ರವೇಶ ಅತ್ಯಂತ ಮಹತ್ವದ್ದಾಗಿದೆ. ವಿಷಯದ ಘನತೆ, ಶೈಲಿಯ ಉಜ್ವಲತೆಯಿಂದ ಅದು ಹೊಸ ವಿಕ್ರಮವನ್ನೆ ಸಾಧಿಸಿದೆ. ಅಲ್ಲಿಯ ವಿಶಾಲ ಮನೋಭೂಮಿಕೆಯಿಂದ ಶುದ್ಧ

ಹೊಸಗಾಳಿಯನ್ನು ಉಸಿರಾಡಿಸುವಂಥಹ ಅನುಭವ ಎಲ್ಲರಿಗೂ ಆಗುತ್ತಿದೆ. ಹಾಗೆಯೇ ಅವರು ಉಳಿದ ಗ್ರಂಥಗಳಿಗೆ ಬರೆದ ಪ್ರಸ್ತಾವನೆಗಳು ಮೆಚ್ಚಿಗೆ ಗಳಿಸಿದವು.

ಅವರ ಸೃಜನಶೀಲ ಕೃತಿಗಳು ಎರಡೇ ಆದರೂ ಬಹುಮೌಲಿಕವಾದವುಗಳಾಗಿವೆ. 1969 ರಲ್ಲಿ ಹೊರಬಂದ ಶೂನ್ಯ ಸಂಪಾದನೆಯ ಪರಾಮರ್ಶೆ ಸಾವಿರ ಪುಟಗಳ ಹೆಬ್ಬೊತ್ತಿಗೆ ಸಮಕಾಲಿನ ಪ್ರಜ್ಞೆ; ವೈಜ್ಞಾನಿಕ ಮನೋಧರ್ಮ, ಮಾನವತೆಯ ಶಾಶ್ವತ ಮೌಲ್ಯ, ಚಿಂತನೆ ಈ ಕೃತಿಯಲ್ಲಿ ಮೂಡಿವೆ. ಮೂರು ದಶಕಗಳ ವಾಂಙ್ಮಯ ತಪಸ್ಸಿನ ಚರಮಸಿದ್ಧಿಯ ಪ್ರತೀಕದಂತಿರುವ ಪಾರಾಮರ್ಶೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಬಲು ಅಪರೂಪದ ಕೃತಿಯಾಗಿದೆ. ವಿಶ್ವದ ವಿಖ್ಯಾತ ದಾರ್ಶನಿಕರ ವಿಚಾರ ಧಾರೆಗಳನ್ನೆಲ್ಲ ತಮ್ಮ ವಿಚಾರಧಾರೆಯೊಂದಿಗೆ ಹೋಲಿಸಿ. ಈ ಗ್ರಂಥದ ಮೂಲಕ ಅವುಗಳನ್ನು ಸ್ಪಷ್ಟಪಡಿಸಿದ್ದಾರೆ. ಆಧುನಿಕ ತತ್ವಜಗತ್ತಿನ ಜ್ವಲಂತ ಪ್ರಶ್ನೆಗಳನ್ನು ಜೀವನದ ಹಲವಾರು ಸಮಸ್ಯೆಗಳನ್ನು ಬಿಡಿಸುವ ಪ್ರಾಮಾಣಿಕ ಪ್ರಯತ್ನದ ಫಲಶೃತಿಯೇ ಪರಾಮರ್ಶೆ, ವೀರಶೈವಧರ್ಮ ಮತ್ತು ದರ್ಶನದ ಸಮಗ್ರ ವಿವೇಚನೆಯನ್ನೊಳಗೊಂಡಿರುವ ಈ ಗ್ರಂಥ ಭಾರತೀಯ ತತ್ವ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ನೀಡಿದ ವಿಶೇಷ ಕಾಣಿಕೆಯಾಗಿದೆ. ಈ ಎಲ್ಲ ಕಾರಣಗಳಿಂದಲೇ ಈ ಕೃತಿ 1972 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು, 1995 ರಲ್ಲಿ ಪಂಪಪ್ರಶಸ್ತಿಗೆ ಭಾಜನವಾಯಿತು. ಇದರ ಇಂಗ್ಲೀಷ ಅನುವಾದವೂ ಅದರ ಹಿರಿಮೆಯನ್ನು ಎತ್ತಿ ಹೇಳುವ ಪರಾಮರ್ಶೆಯ ವಿಮರ್ಶೆಯೂ ಬಂದಿದೆ.

ಮಾನವನನ್ನೆ ಕಾವ್ಯದ ನಾಯಕನನ್ನಾಗಿ ಮಾಡಿ ಜಾತಿ, ಕುಲ, ಪಕ್ಷ ದೇಶಗಳನ್ನೆಲ್ಲ ಮೀರಿ ವಿಶ್ವ ಧರ್ಮವನ್ನು ಎತ್ತಿ ತೋರಿದ ಮಹಾಕಾವ್ಯ, ಭವ್ಯಮಾನವ. 1946 ರಲ್ಲಿ ಲಿಂಗರಾಜ ಕಾಲೇಜ ಪತ್ರಿಕೆಯಲ್ಲಿ ಬರೆದ ಪುಟ್ಟ ಕವನವೊಂದನ್ನು ಬಿಟ್ಟರೆ ಭೂಸನೂರಮಠ ಅವರು ಬರೆದದ್ದು ಭವ್ಯಮಾನವಮಹಾಕಾವ್ಯವನ್ನು ಈ ಕಾವ್ಯದ ವಿಸ್ತಾರ ಎಂಟುನೂರಾ ಮೂವತ್ತೆರಡು (832) ಪುಟಗಳು; ಇಪ್ಪತ್ತು ಸಾವಿರ (20,000) ಪಂಕ್ತಿಗಳಾಗಿವೆ. ಈ ಕಾವ್ಯದ ಕಥಾನಾಯಕಿ ಹೊರನೋಟಕ್ಕೆ ಶಿವಶರಣೆ ಮಹಾದೇವಿಯಕ್ಕ, ಆದರೆ ಇದು ಮಾನವನ ಏಳಿಗಾಗಿ ಅವಶ್ಯಕ ತತ್ವಗಳನ್ನು ಸಾರುವ ಮೇರುಕೃತಿ. ಭೂಸನೂರಮಠ ಅವರ ಹಲವಾರು ವರ್ಷಗಳ ತಪಸ್ಸಿನ ಫಲ. ಸಮಸ್ತ ಮಾವನ ಜನಾಂಗವನ್ನೆ ತನ್ನೆಡೆಗೆ ಎಳೆದುಕೊಂಡ ಕೃತಿ. ಇದನ್ನು ಕುರಿತು ಭವ್ಯಮಾನವ ಕಾವ್ಯದರ್ಶನ ಎಂಬ ಕೈಪಿಡಿಯೊಂದು 1990 ರಲ್ಲಿ ಹೊರಬಂದಿದೆ.

ಒಟ್ಟಿನಲ್ಲಿ ಶೂನ್ಯ ಸಂಪಾದನೆಯ ಪರಾಮರ್ಶೆ ಹಾಗೂ ಭವ್ಯಮಾನವ ಮಹಾಕಾವ್ಯ ಕೃತಿಗಳು ಭೂಸನೂರಮಠ ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಅಪರೂಪದ ಸೃಜನಶೀಲ ಕೊಡುಗೆಗಳಾಗಿವೆ.

ಭೂಸನೂರಮಠ ಅವರು ವಿಶ್ವವಿದ್ಯಾಲಯದ ಧನಸಹಾಯ ಆಯೋಗದ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಶೂನ್ಯ ಸಂಪಾದನೆಯನ್ನು ಆಂಗ್ಲಭಾಷೆಗೆ ಭಾಷಾಂತರಿಸುವ ಕಾರ್ಯವನ್ನು ಮಾಡಿದರು. 2, 3 ಮತ್ತು 4 ನೇಯ ಸಂಪುಟಗಳನ್ನು ಭಾಷಾಂತರಿಸಿ 5 ನೇಯ ಸಂಪುಟದ ಕಾರ್ಯವನ್ನು ಪ್ರಾರಂಭಿಸಿ ಕೊನೆಯ ಹಂತಕ್ಕೆ ಬಂದಾಗ ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದರು. ಅಮೂಲ್ಯವಾದ ಪೀಠಿಕೆ

ಹಾಗೂ ಉಪಯುಕ್ತ ಅನುಬಂಧಗಳಿರುವ ಈ ಸಂಪುಟಗಳು ಶೂನ್ಯ ಸಂಪಾದನೆಯ ಒಳಮರ್ಮವನ್ನು ಕನ್ನಡೇತರರಿಗೂ ಕೂಡಾ ಅರಿತುಕೊಳ್ಳುವಂತೆ ಮಾಡಿದೆ.

ಉತ್ತಮ ಪ್ರಾಧ್ಯಾಪಕರಾಗಿ, ಆದರ್ಶ ಗೃಹಸ್ಥರಾಗಿ, ಕವಿಯಾಗಿ, ಸಂಪಾದಕರಾಗಿ, ಅನುವಾದಕರಾಗಿ ಅವರು ಉತ್ತಮ ಬದುಕನ್ನು ಬದುಕಿದರು. ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಡಾ. ಆರ್.ಸಿ. ಹಿರೇಮಠ, ಡಾ. ಎಂ.ಎಸ್. ಸುಂಕಾಪುರ, ಡಾ. ಚಂದ್ರಶೇಖರ ಕಂಬಾರ, ಡಾ. ಎಸ್.ಜಿ. ವಾರಿ ಅವರಂತ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ನಾಡಿಗೆ ನೀಡಿದ್ದಾರೆ. ಹಲವಾರು ಮಠ ಮಾನ್ಯಗಳ ನಿಕಟ ಸಂಪರ್ಕವನ್ನು ಹೊಂದಿ ಸಾತ್ವಿಕ ಬದುಕನ್ನು ನಡೆಸಿದ ಅವರ ಜೀವನ ಆದರ್ಶಪ್ರಾಯವಾದುದು. ಅವರ ಸಾಹಿತ್ಯ ಸೇವೆ ಉಜ್ವಲವಾದುದು. ಪ್ರಚಾರದ ಬೆನ್ನುಹತ್ತದೆ, ಅರಸಿ ಬಂದ ಪ್ರಶಸ್ತಿಗಳ ಬಗೆಗೂ ಚಿಂತಿಸದೇ ತಮ್ಮ ಸಾಹಿತ್ಯ ಸೇವೆಯನ್ನು ನಿರಂತರ ಮಾಡಿ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಶಾಶ್ವತ ಕಾಣಿಕೆಗಳನ್ನು ಪ್ರೊ॥ ಭೂಸನೂರಮಠ ಅವರು ನೀಡಿದ್ದಾರೆ.

## ಪ್ರೊ . ಭೂಸನೂರಮಠ ಬದುಕು ಬರಹಗಳ ಸಂಕ್ಷಿಪ್ತ ಪರಿಚಯ

**ಜನನ** : 07-11-1910

**ಜನ್ಮಸ್ಥಳ** : ನಿಡಗುಂದಿ, ರೋಣ ತಾಲೂಕು, (ಧಾರವಾಡ ಜಿಲ್ಲೆ)

**ತಂದೆ – ತಾಯಿ** : ಶಿವಮೂರ್ತೆಯ್ಯ - ರಾಚಮ್ಮ

**ವಿದ್ಯಾಭ್ಯಾಸ** :

1) ಪ್ರಾಥಮಿಕ ಶಾಲೆ - ನಿಡಗುಂದಿ
2) ಮಾಧ್ಯಮಿಕ ಶಾಲೆ - ಗದಗಿನ ವಿದ್ಯಾದಾನ ಸಮಿತಿಯ ಎ. ಹೈಸ್ಕೂಲ, ಮುನ್ಸಿಪಲ್ ಹೈಸ್ಕೂಲ, ಹುಬ್ಬಳ್ಳಿಯ ತೊರವಿನ್ಯೂ ಇಂಗ್ಲೀಷ್ ಹೈಸ್ಕೂಲ, 1931 ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ.
3) 1933ರಲ್ಲಿ ಫಸ್ಟ ಇಯರ್ ಆರ್ಟ್ಸ್ ವಿದ್ಯಾರ್ಥಿಯಾಗಿ ಕರ್ನಾಟಕ ಕಾಲೇಜುಸೇರಿದ್ದು, 1935 ರಲ್ಲಿ ಬಿ.ಎ.ಆನರ್ಸ್‌ನ್ನು ಪ್ರಪ್ರಥಮ ದರ್ಜೆಯಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ತೇರ್ಗಡೆಯಾದದ್ದು.
4) 1935 ರಲ್ಲಿ ಕರ್ನಾಟಕ ಕಾಲೇಜಿನ ಪ್ರತಿಷ್ಠಿತ ಶಿಷ್ಯ ವೇತನ ದಕ್ಷಿಣ - ಫೆಲೋಶಿಪ್ ಪಡೆದು ಎಂ. ಎ. ಅಭ್ಯಾಸ ಮುಂದುವರಿಸಿದ್ದು, 1937 ರಲ್ಲಿ ಪ್ರೊ. ಕುಂದಣಗಾರ್ ಅವರ ಮಾರ್ಗದರ್ಶನದಲ್ಲಿ ಎಂ.ಎಂ ಮುಗಿಸಿದ್ದು.
5) ಇಂಗ್ಲೀಷ, ಮರಾಠಿ ಭಾಷೆಗಳಲ್ಲಿ ಮತ್ತು ಸಂಗೀತದಲ್ಲಿ ವಿಶೇಷ ಅಧ್ಯಯನ

**ವಿವಾಹ** : 17 ನೇಯ ವಯಸ್ಸಿನಲ್ಲಿ ಕುಸುಗಲ್ಲಿನ ಸೌ.ಪಾರ್ವತಮ್ಮನವರೊಂದಿಗೆ ವಿವಾಹ ಮೂರು ಮಕ್ಕಳ ತಾಯಿಯಾಗಿ 1942ರಲ್ಲಿ ಪಾರ್ವತಮ್ಮನವರ

ಮರಣ. 1944 ರಲ್ಲಿ ಕೊಟಬಾಗಿಯ ಸೌ. ಗೌರಾದೇವಿಯವರೊಂದಿಗೆ ವಿವಾಹ.

**ಸೇವೆ** : 1) 1939ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಅರೆಕಾಲಿಕ ಪ್ರಾಧ್ಯಾಪಕರೆಂದು ಮೂರು ವರ್ಷ ಸೇವೆ ಸಲ್ಲಿಸಿದುದು.

2) 1943 ರಲ್ಲಿ ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರೆಂದು ಸೇರಿ, ಅಲ್ಲಿ 23 ವರ್ಷ ಸೇವೆ ಸಲ್ಲಿಸಿದುದು.

3)1966 ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರೆಂದು ಸೇರಿ ಐದು ವರ್ಷ (1971) ಕೆಲಸ ಮಾಡಿದುದು. 1976 ರವರೆಗೆ ಯು.ಜಿ.ಸಿ. ಪ್ರಾಧ್ಯಾಪಕರೆಂದು ಸೇವೆ ಸಲ್ಲಿಸಿದುದು. 1965 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಡೀನ್ ಆರ್ಟ್ಸ್‌ಕಲ್ಸಿ ಎಂದು ಕಾರ್ಯ ನಿರ್ವಹಿಸಿದುದು.

4) 1976 ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯದ ಸೇವೆಯಿಂದ ನಿವೃತ್ತಿ

5) 6 -11-1990 ರಲ್ಲಿ ಧಾರವಾಡದ ಸ್ವಂತ ಮನೆ "ಪರಂಜ್ಯೋತಿ"ಯಲ್ಲಿ ನಿಧನ

---

**ಕೃತಿಗಳು :**

1) ಭಕ್ತಿ ಸುಧಾಸಾರ (1950)

2) ಗುರುರಾಜ ಚಾರಿತ್ರ (1950)

3) ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳು (1950)

4) ಮೋಳಿಗೆಯ್ಯನ ಪುರಾಣ

5) ಲಿಂಗಲೀಲಾ ವಿಲಾಸ ಚಾರಿತ್ರ (1956)

6) ಪ್ರೌಢರಾಯನ ಕಾವ್ಯ (1957)

7) ಶೂನ್ಯ ಸಂಪಾದನೆ (1958)

8) ಜಗಜ್ಯೋತಿ ಬಸವಣ್ಣನವರ ಲೋಕಪ್ರಿಯ ವಚನಗಳು (1961)

9) ವಚನ ಸಾಹಿತ್ಯ ಸಂಗ್ರಹ (1965)

10) ಶೂನ್ಯ ಸಂಪಾದನೆಯ ಪರಾಮರ್ಶೆ (1969) (1972 ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅದು 1983 ರಲ್ಲಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಮರು ಮುದ್ರಣವಾಯಿತು).

11) ಏಕೋತ್ತರಶತಸ್ಥಲ (1974)

12) ಶೂನ್ಯ ಸಂಪಾದನೆ ಪರಾಮರ್ಶೆಯ ಸಂಗ್ರಹ (1978)

13) ಭವ್ಯ ಮಾನವ (1984) (ರಾಜ್ಯ ಸಾಹಿತ್ಯ ಅಕಾಡೆಮಿ ವಿಶೇಷ ಬಹುಮಾನ)

14) ವಿಜಯಕಲ್ಯಾಣ (1988)

15) ವಚನ ಸಾಹಿತ್ಯ ಸಾರಸಂಗ್ರಹ (1990)

16) ವೀರಶೈವ ಸಿದ್ಧಾಂತ ಶಿಖಾಮಣಿ (1992)

17) Sunyasampadane (English translation) ನಾಲ್ಕು ಸಂಪುಟಗಳು 1966 - 71 ರ ಅವಧಿಯಲ್ಲಿ ಸಿದ್ಧಗೊಳಿಸಿದರು.

---

## ಪ್ರಶಸ್ತಿ ಪುರಸ್ಕಾರಗಳು :

1. ಕರ್ನಾಟಕ ಕಾಲೇಜಿನ ಪ್ರತಿಷ್ಠಿತ ಶಿಷ್ಯ ವೇತನ "ದಕ್ಷಿಣ-ಫೆಲೋಶಿಫ್" ಪಡೆದರು. (1935)
2. "ಶೂನ್ಯ ಸಂಪಾದನೆಯ ಪರಾಮರ್ಶೆ" ಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ (1972)
3. "ಭವ್ಯ ಮಾನವ" ಮಹಾಕಾವ್ಯಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ (1986)
4. ಮೈಸೂರಿನಲ್ಲಿ ಜರುಗಿದ ಅಖಿಲ ಕರ್ನಾಟಕ ಪ್ರಥಮ ಶರಣ ಸಾಹಿತ್ಯ ಸಮ್ಮೇಳನದ ಅಧ್ಯರ ಗೌರವ (1987)
5. "ಬಸವ ಪ್ರಶಸ್ತಿ" ವಚನಸಾಹಿತ್ಯಕ್ಕೆ ಸಲ್ಲಿಸಿದ ಸೇವೆಗಾಗಿ ಗೌರವ (1989)
6. ಸೊಲ್ಲಾಪುರದ ಗಡಿನಾಡ ಕನ್ನಡಿಗರ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ (1989)
7. ಕರ್ನಾಟಕ ಸರ್ಕಾರದ ಪ್ರತಿಷ್ಠಿತ "ಪಂಪ ಪ್ರಶಸ್ತಿ" ಪ್ರಧಾನ (ಮರಣೋತ್ತರ) (1994)

---

## ಆಕರ ಗ್ರಂಥಗಳು :


1. ಗೌರವ (ಎಸ್.ಎಸ್. ಭೂಸನೂರಮಠ ಅಭಿನಂದನ ಗ್ರಂಥ), ಸಂಪಾದಕರು : ಡಾ|| ಬಿ. ಶಿರೂರ ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ ಸಂಸ್ಥಾನಮಠ ಗದಗ (1986)
2. ಎಸ್.ಎಸ್. ಭೂಸನೂರಮಠ ಬದುಕು ಬರಹ (ಅಪ್ರಕಟಿತ ಮಹಾಪ್ರಬಂಧ), ಲೇಖಕರು- ಸುರೇಶ. ವಿ. ಬಡಿಗೇರ ಕ.ವಿ.ವಿ. ಧಾರವಾಡ - 1977.
3. ಶೂನ್ಯ ಸಂಪಾದನೆ ಪರಾಮರ್ಶೆ ಲೇ ಸಂ. ಶಿ. ಭೂಸನೂರಮಠ, ಪ್ರ: ರಾವೂರು ಶ್ರೀ ಶಿದ್ದಲಿಂಗೇಶ್ವರ ಮಠ ಮತ್ತು ಆದವಾನಿಯ ಕಲ್ಲುಮಠದ ಅಧಿಪತಿಗಳು 1969
4. ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನ, ಸೊಲ್ಲಾಪುರ 1987 ಅಧ್ಯಕ್ಷೀಯ ಭಾಷಣ.
5. ಸಂ.ಶಿ. ಭೂಸನೂರಮಠ, ಲೇ. ಡಾ.ಶಾಂತಾ ಇಮ್ರಾಪೂರ ಸಾಹಿತ್ಯ ಅಕಾಡೆಮಿ (2002).
6. ಭವ್ಯ ಮಾನವ, ಲೇ. ಸಂ.ಶಿ. ಭೂಸನೂರಮಠ, ಪ್ರ: ಶ್ರೀ ಶಿದ್ದಲಿಂಗ ಮಹಾಸ್ವಾಮಿಗಳು ರಾವೂರ 1984

7. ವಚನ ಸಾಹಿತ್ಯ ಸಂಗ್ರಹ ಸಂ. ಪ್ರೊ ಸಂ. ಶಿ. ಭೂಸನೂರಮಠ - ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಶಾಖೆ ಮೈಸೂರ ಸರಕಾರ (1990)

8. ಪ್ರಭುದೇವರ ಕಾವ್ಯ ಸಂಪಾದನೆ. ಸಂ. ಪ್ರೊ.ಸಂ.ಶಿ ಭೂಸನೂರಮಠ, ಪ್ರ.ಶ್ರೀ ಸಿದ್ದಲಿಂಗೇಶ್ವರ ಮಠ ರಾವುರು (1958)

---

**ಅನುಬಂಧ -೧ B**

(ಪ್ರೊ.ಸಂ.ಶಿ. ಭೂಸನೂರಮಠರು. ೧೯೮೮ರಲ್ಲಿ ಅಖಿಲಭಾರತ ಶರಣ ಸಾಹಿತ್ಯ ಪರಿಷತ್ತ ಮೈಸೂರಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣ)

ಪರಮಪೂಜ್ಯ ಶ್ರೀ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳೇ, ಹರಗುರು ಚರಮೂರ್ತಿಗಳೇ ಕಾರ್ಯಾಧ್ಯಕ್ಷರಾದ ಡಾ॥ ಎಚ್.ತಿಪ್ಪೇರುದ್ರಸ್ವಾಮಿಗಳೇ ಶರಣ ಸಾಹಿತ್ಯದ ಅಭ್ಯಾಸಿಗಳೇ, ಅಭಿಮಾನಿಗಳೇ, ಭಕ್ತ ಮಹನೀಯರೇ, ಮಹಿಳೆಯರೇ ನಿಮಗೆ ಶರಣು ಶರಣಾರ್ಥಿ,

ಶ್ರೀ ಸುತ್ತೂರು ಸಂಸ್ಥಾನಮಠ ತನ್ನ ಲೋಕ ಶಿಕ್ಷಣ, ದಾಸೋಹ, ಸಾಹಿತ್ಯ ಸಂಗೋಪನ ಕಾರ್ಯಗಳಿಂದಾಗಿ ಅಖಿಲ ಭಾರತೀಯ ಗೌರವಕ್ಕೆ ಪಾತ್ರವಾಗಿರುವುದು ಸರ್ವವಿದಿತ. ಅನ್ನ, ವಿದ್ಯೆಯೊಡನೆ, ಅರಿವಿನ ವಿದ್ಯೆ ನೀಡಿದ ಕೀರ್ತಿ ಶ್ರೀಮಠದ್ದಾಗಿದೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ ಲಿಂ. ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಶರಣ ತತ್ವ ನಿಷ್ಠೆ, ಜನತಾಂತಃಕರಣ; ದೂರದರ್ಶಿತ್ವದ ಕಾರಣವಾಗಿ ಇಂದಿನ ಈ ವೈಭವದ ಮೆರವಣಿಗೆ, ಅದ್ಭುತವಾದ ಶರಣ ಸಾಹಿತ್ಯ ಸಮ್ಮೇಳನ ಲಿಂಗೈಕ್ಯ ಜಗದ್ಗುರುಗಳ ಮಹಾಂತ ವ್ಯಕ್ತಿತ್ವಕ್ಕೆ ಮೂಲ ನಾಂದಿಯಾಗಿದ್ದ ಅರಮನೆಯ ಗವಿಮಠಾಧ್ಯಕ್ಷರಾಗಿದ್ದ ಲಿಂಗೈಕ್ಯ ಗೌರಿಶಂಕರ ಮಹಾಸ್ವಾಮಿಗಳನ್ನು ಈ ಸಂದರ್ಭದಲ್ಲಿ ಪರಮ ಪೂಜ್ಯಭಾವದಿಂದ ನೆನೆಯಲೇಬೇಕು. ಈ ಶರಣ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರೂ, ಈ ಸಮ್ಮೇಳನದ ಧೀಶಕ್ತಿಯೂ ಆಗಿರುವ ಶ್ರೀಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಕ್ರಿಯಾಸಿದ್ದಿ, ಸಂಕಲ್ಪ ಸಿದ್ಧಿಗಳ ಪ್ರತೀಕ ಈ ದಿವ್ಯ ದೃಶ್ಯ.

ಸಮ್ಮೇಳನ ನಡೆಯಲು ಕೇವಲ ಐದು ದಿವಸಗಳು ಮಾತ್ರ ಇದ್ದಾಗ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಕರೆಗೆ ಓಗೊಟ್ಟು ಅಧ್ಯಕ್ಷನಾಗಲು ಸಮ್ಮತಿಯಿತ್ತುದಕ್ಕೆ ನನಗೆ ಪರಮಪೂಜ್ಯರಾದ ಹಿರಿಯ ಜಗದ್ಗುರುಗಳವರ ಬಗೆಗೆ ಇದ್ದ ಅಪಾರವಾದ ಶ್ರದ್ಧಾಭಕ್ತಿಗಳೇ ಮುಖ್ಯ ಕಾರಣ.

ಈ ಪರಮ ಸಂತೋಷಕ್ಕೆ ಕಾರಣರಾದ, ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಧ್ಯಕ್ಷರಾದ ಡಾ॥ ಎಚ್. ತಿಪ್ಪೇರುದ್ರಸ್ವಾಮಿಗಳು ಮತ್ತು ಇತರ ಪದಾಧಿಕಾರಿಗಳು ಅಭಿನಂದನಾರ್ಹರು, ಭಕ್ತಿ, ಅಭಿಮಾನ

ತುಂಬಿ ಮೈಸೂರಿನ ಈ ಪ್ರಥಮ ಸಮ್ಮೇಳನಕ್ಕೆ ಬಂದಿರುವ ಪ್ರತಿನಿಧಿಗಳೇ, ಆಹ್ವಾನಿತ ವಿದ್ವಾಂಸರೇ, ಕಲಾವಿದರೇ, ನಿಮಗೆಲ್ಲ ಮತ್ತೊಮ್ಮೆ ಶರಣು.

ವೀರಶೈವ ಸಾಹಿತ್ಯ ಕನ್ನಡ ಭಾಷೆಯ ವಿಶೇಷ ಸಂಪತ್ತು, ಕನ್ನಡೇತರ ಭಾಷೆಗಳಲ್ಲೂ ವೀರಶೈವ ಸಾಹಿತ್ಯವಿದೆ. ತೆಲುಗು, ತಮಿಳು, ಮರಾಠಿ ಹಾಗೂ ಸಂಸ್ಕೃತ ಭಾಷೆಗಳಲ್ಲಿರುವ ವೀರಶೈವಸಾಹಿತ್ಯವೂ ಗಮನಾರ್ಹವಾದುದಾಗಿದೆ. ಶರಣ ಸಾಹಿತ್ಯ ಎಂದ ಕೂಡಲೇ ಶಿವಶರಣರ ವಚನಸಾಹಿತ್ಯ ನಮ್ಮ ಕಣ್ಣ ಮುಂದೆ ಬರುತ್ತದೆ. ವಚನ ಸಾಹಿತ್ಯವೆಂದರೆ ನಿಜಾನುಭಾವದ, ನಿಜ(ದಿವ್ಯ) ಜೀವನದ. ಅನುಭವವನ್ನು ವಿವರಿಸುವ ಒಂದು ನಿಕ್ಷೇಪ. ಆದರೆ, ಕೇವಲ ವಚನಗಳಷ್ಟೇ ಅನುಭಾವ ಸಾಹಿತ್ಯವೆಂದು ಹೇಳುವುದಕ್ಕಿಂತ ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು, ಸಿದ್ಧರಾಮಯ್ಯ, ಅಕ್ಕಮಹಾದೇವಿ, ನಿಜಗುಣದೇವ ಇವರ ಹಾಡು, ಮಂತ್ರಗೋಪ್ಯ ಮೊದಲಾದವುಗಳನ್ನೂ ಶರಣ ಸಾಹಿತ್ಯವೆಂದು ಪರಿಗಣಿಸುವುದು ಸೂಕ್ತ. ಪುರಾತನರ ಈ ಹಾಡುಗಳಲ್ಲದೆ ನಿಜಗುಣ ಶಿವಯೋಗಿಗಳು, ಸರ್ಪಭೂಷಣ ಶಿವಯೋಗಿಗಳು, ಬಾಲಲೀಲಾ ಮಹಾಂತ ಶಿವಯೋಗಿಗಳು, ಮೈಲಾರದ ಬಸವಲಿಂಗಶರಣರು, ಘನಮಠ ಶಿವಯೋಗಿಗಳು ಇವರಂತೆ ಇನ್ನೂ ಅನೇಕ ಅನುಭಾವಿಗಳು ಹಾಡಿದ ವಿವಿಧ ರೂಪದ ಅನುಭಾವ ಗೀತೆ (ಸ್ವರ ವಚನ)ಗಳನ್ನೂ ಶರಣ ಸಾಹಿತ್ಯದ ವ್ಯಾಪ್ತಿಯಲ್ಲಿ ಸೇರಿಸಬಹುದು.

ಇಪ್ಪತ್ತನೆಯ ಶತಮಾನದಲ್ಲಿ, ಹಿಂದೆಂದೂ ನಡೆಯದಷ್ಟು ವಚನಸಾಹಿತ್ಯದ ಅಭ್ಯಾಸ, ವಿವೇಚನೆ, ವಿಮರ್ಶೆ, ಚರ್ಚೆ ನಡೆದಿದೆ. ಅಲ್ಲದೆ, ಶರಣರ ಅನುಭಾವ ವಚನಗಳನ್ನು ದೇಶ- ವಿದೇಶ ಭಾಷೆಗಳಿಗೆ ಅನುವಾದ ಮಾಡಿಕೊಡುವ ಪ್ರಾಮಾಣಿಕ ಪ್ರಯತ್ನವೂ ನಡೆದಿದೆ. ಇದು ಭಾಷೆಗಳಿಗೆ ಅನುವಾದ ಮಾಡಿಕೊಡುವ ಪ್ರಾಮಾಣಿಕ ಪ್ರಯತ್ನವೂ ನಡೆದಿದೆ. ಇದು ಆನಂದದ ಸಂಗತಿ. ಈ ಸಂದರ್ಭದಲ್ಲಿ ಏಕೈಕವೀರರಾಗಿ ವಚನಸಾಹಿತ್ಯದ ಬಹುಭಾಗವನ್ನು ಮೊಟ್ಟಮೊದಲು ಪ್ರಕಾಶಪಡಿಸಿದ ಲಿಂ. ಫ ಗು ಹಳಕಟ್ಟಿಯವರ ಅಚಲ ಸಾಹಸ, ನಿರಂತರ ಪ್ರಯತ್ನಗಳನ್ನು ನಾವಿಲ್ಲಿ ಕೃತಜ್ಞತೆಯಿಂದ ಸ್ಮರಿಸಬೇಕು. ಜೊತೆಗೆ, ಹಲವಾರು ವಿದ್ವಾಂಸರು ವೈಯಕ್ತಿಕವಾಗಿ ವಚನಸಾಹಿತ್ಯದ ಬಗೆಗೆ ಮಾಡಿದ ಸಂಶೋಧನೆ ಹಾಗೂ ಪ್ರಕಟನೆಯೂ ಅಭಿನಂದನಾರ್ಹ. ಈಗೀಗಳಂತೂ ಕರ್ನಾಟಕ, ಮೈಸೂರು, ಬೆಂಗಳೂರು ಹಾಗೂ ಕಲಬುರ್ಗಿ ವಿಶ್ವವಿದ್ಯಾಲಯಗಳು, ಧಾರವಾಡದ ಶ್ರೀ ಮುರುಘಾಮಠ, ಹುಬ್ಬಳ್ಳಿಯ ಶ್ರೀ ಮೂರುಸಾವಿರಮಠ, ಚಿತ್ರದುರ್ಗದ ಶ್ರೀ ಬೃಹನ್ಮಠ, ಗದುಗಿನ ಶ್ರೀ ತೋಂಟದಾರ್ಯಮಠ, ಶ್ರೀ ಸುತ್ತೂರು ಸಂಸ್ಥಾನ ಮಠ, ಶ್ರೀ ನಿಡುಮಾಮಿಡಿ ಸಂಸ್ಥಾನ ಮಠ ಮುಂತಾದ ಸಂಸ್ಥೆಗಳು ಶರಣಸಾಹಿತ್ಯ ಸಂಶೋಧನೆ ಪ್ರಕಟನೆ-ಪ್ರಚಾರ ಕಾರ್ಯಗಳನ್ನು ಮಾಡುತ್ತ ಬಂದಿರುವುದೂ ಅಭಿಮಾನದ ವಿಷಯವೇ ಆಗಿದೆ. ಸಮಾಜ ಅವರಿಗೆಲ್ಲ ಋಣಿಯಾಗಿದೆ. ಆದರೂ ಅಪಾರ ಸಮುದ್ರದಂತಿರುವ ಶರಣಸಾಹಿತ್ಯದ ಇನ್ನೂ ಬಹುಭಾಗ ಪ್ರಕಟವಾಗಬೇಕಾಗಿದೆ. ಇದಕ್ಕಿಂತ ಹೆಚ್ಚಾಗಿ ವಚನ, ಹಾಡುಗಳ ಅಂತರಂಗದ ಅನುಭಾವ ಸೌಂದರ್ಯ, ತತ್ತ್ವ ಮಹೋನ್ನತಿಯನ್ನು ಎತ್ತಿತೋರಿ, ಜಗತ್ತಿನಲ್ಲಿ ಹರವಬೇಕಾದ ಕಾರ್ಯ ಇಂದಿನ ಅವಶ್ಯಕತೆ, ಬಸವಣ್ಣನವರು ಹೇಳುವ 'ಶರಣರು ಮನದೆರೆದು ಮಾತನಾಡಿದರೆ, ಲಿಂಗವ ಕಾಣಬಹುದು' ನಿಜ.

ವಚನಸಾಹಿತ್ಯದ ಅಂತರಂಗವನ್ನು ಗುರುತಿಸುವ ಪ್ರಯತ್ನಗಳೂ ಈಚೆಗೆ ನಡೆಯುತ್ತಿರುವುದು ಶುಭ ಸೂಚಕವಾದುದು. ಮೇಲ್ಮೈಯ ಸಂಗತಿಗಳ ಚರ್ಚೆಗಿಂತ, ಅಂತರಂಗ ಪ್ರವೇಶ ಮುಖ್ಯವಾದುದು. ಅನುಭಾವ ಗ್ರಂಥವಾದ ಶೂನ್ಯ ಸಂಪಾದನೆಯನ್ನು ಕುರಿತು ನಡೆದಿರುವ ಪರಾಮರ್ಶೆ, ಸಂಶೋಧನೆ, ಸೊಂಪಿನ ವಿಶ್ಲೇಷಣೆ ವಿಮರ್ಶೆ, ವ್ಯಾಖ್ಯಾನ, ತಮ್ಮ ವಿವೇಚನೆಗಳು ಈ ದಿಕ್ಕಿನ ಗಮನಾರ್ಹ ಪ್ರಯತ್ನಗಳು. ಶಿವಶರಣರ ಬಗೆಗೆ ಹಲವು ಪಿಹೆಚ್.ಡಿ.ಸಂಶೋಧನೆಯ ಮಹಾ ಪ್ರಬಂಧಗಳು ಬಂದಿವೆ. ಆದರೂ ದಾರಿ ಇನ್ನೂ ನಿಡಿದಾಗಿದೆ. ನಡೆವ ಧೀರರಿಗೆ ಆಹ್ವಾನ ತೆರೆದು ನಿಂತಿದೆ.

"ಯಃ ಪಶ್ಯತಿ ಸ ಪಶ್ಯತಿ" ಎಂಬ ಮಾತನ್ನು ನಾವು ಮನದಂದು ವಚನದ ವಿಶಾಲೋಜ್ವಲ ಅಂತರಂಗವನ್ನು ನೋಡಬಲ್ಲರೆ ಕಾಣುವುದೇನು? ವಿಶ್ವದಲ್ಲಿ. ಮಾನವನಲ್ಲಿ ವಿಶ್ವ ಪ್ರಪಂಚದಲ್ಲಿ ಮಾನವ ಕುಲದಲ್ಲಿ ಮರೆಸಿಕೊಂಡಿರುವ ಅತ್ಯಂತ ಗಂಭೀರೋನ್ನತವಾದ ದಿವ್ಯತೆ, ಭವ್ಯತೆ ಕಾಣಬಹುದು.

ಬಸವಣ್ಣನವರು ಹೇಳಿರುವ, "ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ" ಎಂಬ ಮಾತು, ಲಿಂಗದ ಪರಮ ವಿಸ್ತಾರವನ್ನು ತೋರಿಸುತ್ತದೆ. ಈ ವಿಸ್ತಾರ ಮಾನವನಲ್ಲಿ ಹುದುಗಿರುವ, 'ನೆಲದ ಮರೆಯ ನಿಧಾನ', ದಿವ್ಯ ನಿಧಿ! ಆತ್ಮ ವಿಕಾಸ ಮಾಡಿಕೊಂಡವರಿಗೆ ಶಿವನ ಶಕ್ತಿಯ ವಿಕಾಸವೇ ವಿಶ್ವ ಸ್ವರೂಪವಾಗಿ ನಿಂತಿದೆ ಎಂಬ ಅನುಭವವಾಗುತ್ತದೆ. ಚರಾಚರ ಪ್ರಪಂಚವೆಲ್ಲ ಶಿವಮಯವಾಗಿದೆ. ಶಿವಾತ್ಮಕವಾಗಿದೆ ಎಂಬ ನಿಲುವು ಬಂದು, ತಾನೇ ತನ್ನ ನಿಜಸ್ವರೂಪವಾಗಿ ನಿಲ್ಲಬಲ್ಲವನಾಗುತ್ತಾನೆ.

ದೇಶ, ಕಾಲ, ಜಾತಿ, ಜನಾಂಗ, ವರ್ಣ, ಆಶ್ರಮ ಇವನ್ನು ಮೀರಿ ನಿಂತಿರುವ ಮಾನವಕುಲದ ಮಹೋನ್ನತಿಯನ್ನು ಜಗತ್ತಿಗೇ ಸಾರಿಹೇಳುವ ಇಂಥ ಚೈತನ್ಯ ಜಂಗಮ ಎಂದರೆ ಶರಣತ್ವ ಎಲ್ಲ ಮಾನವರಲ್ಲೂ ಇದೆ ಎಂಬುದು ಸ್ವಾನುಭವ. ಇಂಥ ಅನುಭವ ಯಾರಿಗೆ ಬೇಡ? ಶರಣಸಾಹಿತ್ಯವನ್ನು ಒಳಹೊಕ್ಕು ನೋಡಿದರೆ ಕರ್ಮವಾದ, ದೈವವಾದ ಇಲ್ಲ; ಪೂರ್ವಜನ್ಮದ-ಪುನರ್ಜನ್ಮದ ಮಾತೂ ಇಲ್ಲ; ಪಂಚಸೂತಕ, ಪಂಚಪಾತಕಗಳ ಮಾತಿಲ್ಲ; ತಿಥಿ ವಾರ ನಕ್ಷತ್ರಗಳಿಲ್ಲ; ಶಕುನವೆಂಬ ಮೂಢ ಸಂಪ್ರದಾಯದ ಮಾತು ಇಲ್ಲಿಲ್ಲ. ಅಂತೆಯೇ ಸನ್ಯಾಸ-ವೈರಾಗ್ಯಗಳ ಸುದ್ದಿಯೂ ಇಲ್ಲ, ಅಲ್ಲಿ ಕಾಣುವ ಅನುಭಾವದ ವಿಚಾರಗಳು ಕಾಲದೇಶಾತೀತವಾಗಿ ನಿಲ್ಲುವ ಸತ್ಯ ತತ್ವಗಳಾಗಿವೆ. ಈ ನಿಜ ತತ್ವಗಳನ್ನೊಳಗೊಂಡಿರುವ ಶರಣ ಸಾಹಿತ್ಯದ ಬೆಲೆ ಏನು? ಇಂತಹ ಮಾನವ ಮಹೋನ್ನತಿಯು ಯಾರಿಗೆ ಬೇಡ? ಯಾರಿಗೆ ಬೇಕು?

ಇನ್ನು ಧರ್ಮ - ನೀತಿ - ಸಮಾಜ- ಕಾಯಕ- ದಾಸೋಹ- ಇವೇ ಮುಂತಾದ ಅನರ್ಘ್ಯ ವಿಚಾರ-ಅನುಭಾವಗಳನ್ನು ಒಳಗೊಂಡಿರುವ ಶರಣಸಾಹಿತ್ಯದ ನಿಜವಾದ ಒಂದು ಅಂತರಂಗದ ಪ್ರಭಾವ-ಮಾನವ ಮಹೋನ್ನತರಿಗೆ - ಇಲ್ಲವೆ ಶರಣರಿಗೆ ಗೊತ್ತು. ಇಂತಹ ಸಾಹಿತ್ಯವನ್ನು ಕುರಿತು ಯಾವ ಅಧ್ಯಕ್ಷರು ಏನು ಮಾತಾಡಬಲ್ಲರು? ಇದಕ್ಕೆ "ಎನ್ನ ಮನವೇ ಸಾಕ್ಷಿ, ನಿಮ್ಮ ಪಾದವೇ ಸಾಕ್ಷಿ." ವಿಶ್ವಧರ್ಮದ ಔನ್ನತ್ಯಕ್ಕೇರಬಲ್ಲ ಶರಣರ ಕೆಲವು ಮಾತುಗಳನ್ನು ಗಮನಿಸಬಹುದು;

೧ ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು.

೨ ದೇವಲೋಕ ಮರ್ತ್ಯಲೋಕ ಬೇರಿಲ್ಲ
ಸತ್ಯವೇ ಸ್ವರ್ಗ, ಮಿಥ್ಯವೇ ಮರ್ತಲೋಕ,

೩ ದಯವಿಲ್ಲದ ಧರ್ಮವದಾವುದಯ್ಯಾ?
ದಯವೇ ಬೇಕು ಸಕಲಪ್ರಾಣಿಗಳಲ್ಲಿ
ದಯವೇ ಧರ್ಮದ ಮೂಲವಯ್ಯಾ,

೪ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು,

೫ ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ;
ಆಚಾರವೇ ಸ್ವರ್ಗ, ಅನಾಚಾರವೇ ನರಕ;

೬ ಮೃದುವಚನವೇ ಸಕಲ ಜಪ
ಸದುವಿನಯವೇ ಸಕಲ ತಪ

೭ ತನುವಿನ ಕೋಪ ತನ್ನ ಹಿರಿತನದ ಕೇಡು
ಮನದ ಕೋಪ ತನ್ನ ಅರಿವಿನ ಕೇಡು,

೮ ಹೊಯ್ದವರೆನ್ನ ಹೊರೆದವರೆಂಬೆನು;
ಬಯ್ದವರೆನ್ನ ಬಂಧುಗಳೆಂಬೆನು;

೯ ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ'
ಸತ್ಪಾತ್ರಕ್ಕೆ ಸಲ್ಲದಯ್ಯಾ,

೧೦ ದೇಹವೇ ದೇಗುಲ; ಮನವೇ ಲಿಂಗ,

೧೧ ಕಾಯಕವೇ ಕೈಲಾಸ,

೧೨ ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದ.

೧೩ ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ,

೧೪ ನುಡಿದರೆ ಲಿಂಗಮೆಚ್ಚಿ ಅಹುದೆನಬೇಕು,

೧೫ ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಕೈಯ ಲಿಂಗ ಘಟಸರ್ಪ

ಈ ಮಾತುಗಳ ಪಟ್ಟಿಯನ್ನು ಹೀಗೆಯೇ ವಿಸ್ತರಿಸಬಹುದು

**ಇನ್ನು ಶರಣ ಸಾಹಿತ್ಯದ ಹೊರಮೈಯ ವಿಷಯಗಳು:**

"ಆದ್ಯರ ವಚನ ಪರುಷ ಕಂಡಣ್ಣ"

"ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ"

ದೇವರ ದಾಸಿಮಯ್ಯನವರು ಹೇಳುವ

"ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯನು
ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥಾ"

ಎಂಬಿವೇ ಮೊದಲಾದ ಹೇಳಿಕೆಗಳು ಈ ವಚನ ಸಂಪ್ರದಾಯ ಬಸವಣ್ಣನವರಿಂತ ಪೂರ್ವದಲ್ಲಿಯೂ ನಡೆದಿತ್ತೆಂಬುದನ್ನು ಸೂಚಿಸುತ್ತದೆ.

ಸ್ತ್ರೀ ಪುರುಷರೆಂಬ ಭೇದವಿಲ್ಲದೆ ವಿವಿಧ ಕಾಯಕದಲ್ಲಿದ್ದವರು ಸಾಕಷ್ಟು ಸಂಖ್ಯೆಯಲ್ಲಿ ವಚನಗಳನ್ನು ರಚಿಸಿದ್ದಾರೆ. ಈ ಸಂಖ್ಯೆಯನ್ನು ನಿರ್ಣಯಿಸುವುದು ಕಷ್ಟದ ಕೆಲಸ. ದೇವರ ದಾಸಿಮಯ್ಯ, ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮಯ್ಯ, ಪ್ರಭುದೇವರು, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಮೋಳಿಗೆ ಮಾರಯ್ಯ, ಆಯ್ದಕ್ಕಿ ಮಾರಯ್ಯ, ನುಲಿಯ ಚಂದಯ್ಯ, ಘಟ್ಟಿವಾಳಯ್ಯ ಮುಂತಾದ ಅಸಂಖ್ಯಾತ ಶರಣರು ಕನ್ನಡ ನಾಡಿನಲ್ಲಿ ಒಮ್ಮೆಲೇ ಉದಯಿಸಿ, ಅನುಭಾವ ಸಾಹಿತ್ಯವನ್ನು ಇಷ್ಟೊಂದು ವ್ಯಾಪಕವಾಗಿ ನಿರ್ಮಿಸಿದ ಯುಗ, ಜಗತ್ತಿನ ಸಾಹಿತ್ಯ ಇತಿಹಾಸದಲ್ಲಿಯೇ ಅಪೂರ್ವವಾದುದು. ಅಪ್ರತಿಮವಾದುದು. ಇವರಲ್ಲದೇ ಮಹಾದೇವಿಯಕ್ಕ, ಮುಕ್ತಾಯಕ್ಕ, ನೀಲಾಂಬಿಕೆ, ನಾಗಲಾಂಬಿಕೆ, ಮೋಳಿಗೆ ಮಹಾದೇವಿಯಮ್ಮ, ಹಡಪದ ಲಿಂಗಮ್ಮ ಮುಂತಾದ ಶರಣೆಯರು ತಮ್ಮ ನಿಜಾನುಭಾವದ ಮಹೋನ್ನತ ವಿಚಾರದ ವಚನಗಳನ್ನು ರಚಿಸಿದ್ದೂ ಅಪೂರ್ವವಾದುದೇ. ಈ ಪರಂಪರೆ ನಿರಂತರವಾದುದು ನಮ್ಮಪುಣ್ಯ, ಶ್ರೀ ತೋಂಟದ ಸಿದ್ಧಲಿಂಗೇಶ್ವರರು, ಸುತ್ತೂರು ಮಠದ ಪರಂಪರೆಯ ಘನಲಿಂಗದೇವರು, ಮತ್ತು ಷಣ್ಮುಖಸ್ವಾಮಿಗಳು ವಚನ ಸಾಹಿತ್ಯವನ್ನು ಮುನ್ನಡೆಯಿಸಿರುವರು. ಈ ಪುಣ್ಯ ಪರಂಪರೆಯ ಪ್ರಭಾವ ಆಧುನಿಕ ಕನ್ನಡದಲ್ಲಿಯೂ ಕಾಣುತ್ತಿರುವುದು. ಇದರ ಸತ್ಯ, ಸತ್ಯ, ಮಹತ್ವದ ದ್ಯೋತಕ. ಮಾತೆಂಬುದು ಜ್ಯೋತಿರ್ಲಿಂಗ ಎನಿಸುವ ವಚನಗಳ ಪರಮೋದ್ದೇಶವೇನು? ಇಲ್ಲಿ ಚೆನ್ನಬಸವಣ್ಣನವರ ವಚನವೊಂದನ್ನು ಕೇಳಬೇಕು:

ಪಾತಾಳದಗ್ಗಣಿಯ ನೇಣಿಲ್ಲದೆ,

ಸೋಪಾನದ ಬಲದಿಂದಲ್ಲದೆ ತೆಗೆಯಬಹುದೆ?

ಶಬ್ದ ಸೋಪಾನವ ಕಟ್ಟಿ ನಡೆಸಿದವರು ಪುರಾತನರು

ದೇವಲೋಕಕ್ಕೆ ಬಟ್ಟೆ ಕಾಣಿರೋ!

ಮರ್ತ್ಯಲೋಕದವರ ಮನದ ಮೈಲಿಗೆಯ ಕಳೆಯಲೆಂದು

ಗೀತಮಾತೆಂಬ ಜ್ಯೋತಿಯ ಬೆಳಗಿಕೊಟ್ಟರು ಕೂಡಲ ಚೆನ್ನಸಂಗನ ಶರಣರು

(ವಚನ ಸಾಹಿತ್ಯ ಸಂಗ್ರಹ ಪುಟ. ೨)

ಮಾನವ ಶಿವಜೀವನಕ್ಕೆ ಅವಶ್ಯವೆನಿಸುವ ಧರ್ಮ, ತತ್ವ, ನೀತಿ, ಭಕ್ತಿ, ಜ್ಞಾನ,ಯೋಗ, ಕ್ರಿಯೆ ಮುಂತಾದ ವಿಚಾರಗಳು ಶರಣ ಸಾಹಿತ್ಯದಲ್ಲಿ ಸ್ವಯಂಪೂರ್ಣವಾಗಿ ನಿಂತಿರುವಾಗ ವೇದಾಗಮಪುರಾಣ, ಶಾಸ್ತ್ರಾದಿಗಳ ಅವಶ್ಯಕತೆಯಾದರೂ ಏನು? ಎಂಬುದು ಶರಣರ ಮತ. ಇವು ಪ್ರಮಾಣ ಗ್ರಂಥಗಳೆಂಬುದು ನಿಜ; ಆದರೆ ಪ್ರಮಾಣಗಳಿಗಿಂತ ಮಿಗಿಲಾದ ಪರಮ ಪ್ರಮಾಣವೆಂದರೆ ಅನುಭಾವ, ಅನುಭಾವಿಯ ವಚನ ಒಂದು ರೀತಿಯಿಂದ ವಚನಗಳು ಪ್ರಮಾಣಾತೀತ.

"ನಾನೆಂಬುದು ಪ್ರಮಾಣ: ನೀನೆಂಬುದು ಪ್ರಮಾಣ

ಸ್ವಯವೆಂಬುದು ಪ್ರಮಾಣ; ಪರವೆಂಬುದು ಪ್ರಮಾಣ

ಪ್ರಮಾಣವೆಂಬುದು ಪ್ರಮಾಣ:ಗೊಹೇಶ್ವರನೆಂಬುದು ಅಪ್ರಮಾಣ"

(ವಚನ ಸಾಹಿತ್ಯ ಸಂಗ್ರಹ ಪುಟ. ೧೨)

ಇಂತಹ ಮಹೋನ್ನತವಾದ ಅಪ್ರಮಾಣವಾದ ಅನುಭಾವ ವಚನ ಸಾಹಿತ್ಯದಲ್ಲಿ ಇರುವಾಗ ವೇದಶಾಸ್ತ್ರಾದಿಗಳ ಬೆನ್ನುಹತ್ತಿ ಹರಿವುದೇಕೆ? ಹಾಡಿದರು ಬಸವಣ್ಣನವರು:

"ಹಾಲತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು

ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು

ಬೇರೆ ಬಾವಿಯ ತೋಡಿ ಉಪ್ಪು ನೀರನುಂಬುವ ವಿಧಿಯಂತೆ

ಆಯಿತ್ತೆನ್ನ ಮತಿ ಕೂಡಲಸಂಗಮದೇವಾ"

ನಿಜ, ಶರಣರ ಅನುಭಾವವನ್ನು ಅರಿಯಲಾರದ ನಮ್ಮೆಲ್ಲರ ಸ್ಥಿತಿಯೂ ಇದೇ ಆಗಿದೆ. ಕುಲದ ಭವ್ಯ ಭವಿಷ್ಯ, ಸಂದೇಶ ಇಲ್ಲಿದೆ, ಆದರೆ ನಮ್ಮ ಕಿವಿಗಳಿಗೆ ಅದು ಕೇಳುತ್ತಿಲ್ಲ. ಅರಿತು ಆಚರಿಸುವುದು ಮುಂದಿನ ಮಾತು. ಮಾನವನಲ್ಲಿರುವ ಮಹಾದೇವನನ್ನೂ ಎಚ್ಚರಿಸಬಲ್ಲ ಈ ಶರಣರ ನುಡಿಗಡಣದ ಮಹತ್ವ ಜಗತ್ತಿನಲ್ಲೆಲ್ಲ ಕೇಳುವಂತೆ ಮಾಡುವುದು ಹೇಗೆ? ಉಪ್ಪುನೀರನ್ನೇ ಚಪ್ಪರಿಸುವುದರಲ್ಲಿಯೇ ತೃಪ್ತಿ ಪಡೆಯುವಂತಿರುವ ನಾವೆಲ್ಲ, ಶಿವಶರಣರ ಅನುಭಾವದ ಹಾಲು-ಬೆಲ್ಲಸಕ್ಕರೆಯ ಮಧುರ ಪಾಕವನ್ನು ಸವಿಯುವುದು ಎಂದು? ಎಂತು? ಹೇಗೆ?

**ಕೆಲವು ಸಲಹೆಗಳು**

೧. ಅನುಭಾವದ ಅಡಿಗಲ್ಲಿನ ಮೇಲೆ ಹೊರಹೊಮ್ಮಿ ಬಂದಿರುವ ಶರಣ ಸಾಹಿತ್ಯದ ಆಳವಾದ ಅಧ್ಯಯನ ಜಾಗತಿಕ ಅನುಭಾವಿಗಳ ಅನುಭಾವ ಸಾಹಿತ್ಯದೊಡನೆ ತೌಲನಿಕವಾಗಿ ನಡೆಯಬೇಕು.

೨. ಶರಣ ಸಾಹಿತ್ಯವು ಪ್ರಪಂಚದ ಪ್ರಮುಖ ಭಾಷೆಗಳಲ್ಲಿ ಸಮರ್ಥವಾದ ರೀತಿಯಲ್ಲಿ ಅನುವಾದವಾಗಬೇಕು.

೩. ಯೋಗಕ್ಕೆ ಹೆಚ್ಚು ಮಹತ್ವ ಬರುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಶಿವಶರಣರು ಸಾಧಿಸಿ ತೋರಿಸಿದ ಶಿವಯೋಗದ ವೈಜ್ಞಾನಿಕ ಅಧ್ಯಯನ ನಡೆಯಬೇಕು.

೪. ಇಹ ಪರಗಳ, ಆಚಾರ ವಿಚಾರಗಳ ಅಭ್ಯುದಯ ಶ್ರೇಯಸ್ಸುಗಳ ಸಮನ್ವಯವನ್ನು ಪರಿಪೂರ್ಣವಾಗಿ ಸಾಧಿಸಿರುವ ಶರಣ ಸಾಹಿತ್ಯದ ವಿವಿಧ ಪ್ರಕಾರಗಳ ತುಲನಾತ್ಮಕ ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಡುವ, ವಿಶ್ವವಿದ್ಯಾಲಯಕ್ಕೆ ಸರಿಸಮನಾದ ಒಂದು ಬೃಹತ್ತಾದ ಸ್ವಾಯತ್ತ ಸಂಸ್ಥೆ ರೂಪಿತವಾಗಬೇಕು.

೫. ಮನು ಕುಲದ ಉದ್ಧಾರಕ್ಕೆ ಶಾಶ್ವತ ಮೌಲ್ಯಗಳನ್ನು ಒಳಗೊಂಡಿರುವ ಶರಣ ಸಾಹಿತ್ಯದ ಪ್ರಚಾರ ಇಂದು ವಿಶ್ವದಾದ್ಯಂತ ಪ್ರಸಾರವಾಗಲು ವ್ಯವಸ್ಥೆಯಾಬೇಕು.

೬. ಭಾರತದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ಶರಣತತ್ವ ಚಿಂತನೆಯಲ್ಲಿ ಆಸಕ್ತಿಯುಳ್ಳ ಜನರಿಗೆ ಶರಣ ಧರ್ಮ, ಸಾಹಿತ್ಯ- ಸಂಸ್ಕೃತಿಗಳ ನಿಕಟ ಸಂಪರ್ಕ ಲಭಿಸುವಂತಹ ಯೋಜನೆಗಳನ್ನು ರೂಪಿಸಿಕೊಳ್ಳಬೇಕು.

ಪ್ರಥಮ ಶರಣ ಸಾಹಿತ್ಯ ಸಮ್ಮೇಳನದಲ್ಲಿ ನೆರೆದ ಮಹಾಜನರೆಲ್ಲ ಈ ವಿಚಾರವನ್ನು ಮಥನಿಸಲಿ, ಸದ್ವಿಚಾರದ 'ತವರಾಜ' ತೇಲಿ ಬರಲಿ, ಅನುಭಾವದ ಬೆಳಗು ನಮ್ಮದಾಗಲಿ,

**ಶರಣು ಶರಣು ಶರಣಾರ್ಥಿ....**

ದೇವ, ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ
ಮರ್ತ್ಯಲೋಕಕ್ಕೆ ಬಂದು ಮಾನವಜನ್ಮವ ಕಂಡೆ
ಆ ಮಾನವ ಜನ್ಮಕ್ಕೆ ಘುಣಾಕ್ಷರನಾಯದಂತೆ ಲಿಂಗ ಬಂದುದ ಕಂಡೆ!
ಎನಗಿದು ಚೋದ್ಯ, ಎನಗಿದು ವಿಪರೀತಯ್ಯ!
ಇದಕ್ಕೆ- ನುಡಿದಂತೆ ನಡೆಸು, ನಡೆದಂತೆ ನುಡಿಸು
ನುಡಿ -ನಡೆಗೆ ಭಿನ್ನವಾದರೆ ನಿಮ್ಮ ಶರಣರೊಪ್ಪರು
ನಿಮ್ಮ ಶರಣರೊಪ್ಪದಲ್ಲಿಯೇ ನೀನೊಪ್ಪೆ
ನೀನೊಪ್ಪದಲ್ಲಿಯೆ ಬಂದಿತೆನಗೆ ಭವದ ಹೆಮ್ಮಾರಿ

ಅದಕ್ಕೆ ನಾನಂಜುವೆನಯ್ಯ, ನಾನಳುಕುವೆನಯ್ಯ

ನುಡಿ- ನಡೆ ಎರಡಾಗದಂತೆ ನಡೆಸಯ್ಯ

ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ.

---

B ಅನುಬಂಧ II




ಸಂ. ಶಿ. ಭೂಸನೂರಮಠ



ಸಂ. ಶಿ. ಭೂಸನೂರಮಠರ ತಂದೆ ಶಿವಮೂರ್ತಯ್ಯನವರು, ತಾಯಿ ಶ್ರೀಮತಿ ರಾಚಮ್ಮನವರು




ಧರ್ಮ ಪತ್ನಿ, ಮಕ್ಕಳೊಂದಿಗೆ ಪ್ರೊ. ಎಸ್. ಭೂಸನೂರಮಠರು




ಲಿಂಗರಾಜ ಕಾಲೇಜ ಬೆಳಗಾವಿ ೧೯೫೨–೫೩. ಕುಳಿತವರು: ಎನ್.ಎಂ.ಕೆ. ಸೋಗಿ, ವ್ಹಿ.ಜಿ.ಕುಲಕರ್ಣಿ, ಕೆ ಜಿ. ಕುಂದಣಗಾರ, ಪ್ರೊ. ಸಂ. ಶಿ. ಭೂಸನೂರಮಠ ನಿಂತವರು: ಎಸ್.ಬಿ.ಪಾಟೀಲ, ಎಸ್.ಎಚ್.ಕುಲಕರ್ಣಿ, ವ್ಹಿ.ಜಿ.ಕುಲಕರ್ಣಿ, ಸಿ.ಜಿ.ಬೆಂಡಿಗೇರಿ




ಬಿ.ಎ. ಆನರ್ಸ್ ೧೯೫೨-೫೩ ಲಿಂಗರಾಜ ಕಾಲೇಜ ಬೆಳಗಾವಿ. ಮೂರನೆಯವರು
ಪ್ರೊ.ಎಸ್.ಎಸ್. ಭೂಸನೂರಮಠ ನಾಲ್ಕನೆಯವರು ಆರ್.ಸಿ.ಹಿರೇಮಠ



ಕಂಚೇಶ್ವರ ದೇವಾಲಯ - ನಿಡಗುಂದಿ
ಪ್ರೊ. ಭೂಸನೂರಮಠರು ಸ್ನೇಹಿತರೊಂದಿಗೆ ಚರ್ಚಿಸುತ್ತಿದ್ದ ಸ್ಥಳ



ಪ್ರೊ. ಭೂಸನೂರಮಠರು ಹುಟ್ಟಿದ ಮನೆ - ನಿಡಗುಂದಿ



ಪ್ರೊ. ಭೂಸನೂರಮಠರು
ಸಂಗೀತ ಕಲಿಯುತ್ತಿದ್ದ ಬಸವಣ್ಣ
ದೇವರಗುಡಿ-ನಿಡಗುಂದಿ



ಪ್ರೊ. ಭೂಸನೂರಮಠರವರ
ಹಸ್ತಾಕ್ಷರ.